

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಸೆಪ್ಟೆಂಬರ್ 22 ಭಾನುವಾರ 2024

ಸಂಪುಟ: 45 | ಸಂಚಿಕೆ: 157 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಬೆಂಗಳೂರಲ್ಲೂ ದೆಹಲಿಯ ಶ್ರದ್ಧಾ ವಾಕರ್ ಕೊಲೆ ಮಾದರಿ ಅತ್ಯಂತ ಭೀಕರವಾಗಿ ನೇಪಾಳದ ಯುವತಿ ಮರ್ಡರ್

ಯುವತಿಯ ಕೊಂದು ದೇಹವನ್ನ 30 ತುಂಡು ಮಾಡಿ ಫ್ರಿಡ್ಜ್‌ಗೆ ತುಂಬಿದ ಕ್ರೂರಿ!

ಬೆಂಗಳೂರು, ಸೆ.21– ಉದ್ಯಾನನಗರಿ ಬೆಂಗಳೂರು ಭಯಾನಕ ಕೊಲೆಗೆ ಬೆಚ್ಚಿ ಬಿದ್ದಿದೆ. ಮಲ್ಲೇಶ್ವರದ ವೈಯಾಲಿಕಾವಲ್‌ನಲ್ಲಿ ದೆಹಲಿಯ ಶ್ರದ್ಧಾ ವಾಕರ್ ಕೊಲೆ ಮಾದರಿ ಮರ್ಡರ್ ನಡೆದಿದ್ದು, ನೇಪಾಳ ಮೂಲದ 29 ವರ್ಷದ ಯುವತಿ ಮಹಾಲಕ್ಷ್ಮಿಯನ್ನು ಕೊಂದು, ಆಕೆಯ ದೇಹವನ್ನು 30 ಪೀಸ್ ಮಾಡಿ ಫ್ರಿಡ್ಜ್‌ನಲ್ಲಿ ಇರಿಸಲಾಗಿದೆ.

ಕೊಲೆಯಾದ ಮಹಿಳೆಯ ಫೋನ್ ಸೆ.2ರಂದು ಸ್ವಿಚ್ಡ್ ಆಫ್ ಆಗಿದೆ. ಅಂದೇ ಹತ್ಯೆಯಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಹಂತಕರು ಆಕೆಯ ದೇಹವನ್ನು 30 ತುಂಡುಗಳಾಗಿ ಕತ್ತರಿಸಿ, ಆ ತುಂಡುಗಳನ್ನು ಫ್ರಿಡ್ಜ್‌ನಲ್ಲಿ ಇಟ್ಟು ಹೋಗಿದ್ದಾರೆ. ದೇಹದ ತುಂಡುಗಳಿಂದ ಬಂದ ರಕ್ತ ಫ್ರಿಡ್ಜ್‌ನಿಂದ ಸೋರಿಕೆಯಾಗಿ ಮನೆಯ ತುಂಬೆಲ್ಲಾ ಹರಡಿದೆ. ಶುಕ್ರವಾರದಂದು ಆಕೆಯಿದ್ದ ಮನೆಯಿಂದ ಕೆಟ್ಟ ವಾಸನೆ ಬರುತ್ತಿತ್ತು. ಮೊದಮೊದಲಿಗೆ ಹೆಗ್ಗಣ ಸತ್ತಿರುವ ವಾಸನೆ ಇರಬಹುದು ಎಂದು ನೆರೆಯವರು ತಿಳಿದಿದ್ದರು. ಆದರೆ, ವಾಸನೆ ಮಹಾಲಕ್ಷ್ಮಿ ಇದ್ದ ಮನೆಯಿಂದಲೇ ಬರುತ್ತಿದ್ದ ಕಾರಣಕ್ಕೆ ಅಕ್ಕಪಕ್ಕದವರು ಪೊಲೀಸರಿಗೆ ಸುದ್ದಿ ಮುಟ್ಟಿಸಿದರು. ಪೊಲೀಸರು ಬಂದು ಪರಿಶೀಲಿಸಿ ಬಾಗಿಲು ಒಡೆದು ಒಳ ಹೋದಾಗ ಮನೆಯಲ್ಲಿ ಹರಡಿದ್ದ ರಕ್ತದಲ್ಲಿ ಅದಾಗಲೇ ಹುಳ ಬಿದ್ದಿದ್ದವು. ರಕ್ತ ಎಲ್ಲಿಂದ ಸೋರಿದೆ ಎಂದು ಪರಿಶೀಲಿಸಿದಾಗ ಆ ರಕ್ತ ಪೊಲೀಸರನ್ನು ಮನೆಯಲ್ಲಿದ್ದ ಫ್ರಿಡ್ಜ್ ಕಡೆಗೆ ಕರೆದೊಯ್ದಿದೆ. ಫ್ರಿಡ್ಜ್ ಬಾಗಿಲು ತೆಗೆದಾಗ ಪೊಲೀಸರು ಫ್ರಿಡ್ಜ್‌ನಲ್ಲಿದ್ದ ಯುವತಿಯ ದೇಹದ 30 ಪೀಸ್‌ಗಳನ್ನು ಕಂಡು ದಂಗಾಗಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಸದ್ಯ ಪೊಲೀಸರು ಹಾಗೂ ಎಫ್‌ಎಸ್‌ಎಲ್ ತಂಡದಿಂದ ಮಾಹಿತಿ ಕಲೆ ಹಾಕಲಾಗುತ್ತಿದೆ. ಬೌರಿಂಗ್ ಆಸ್ಪತ್ರೆ ಸಿಬ್ಬಂದಿ ಫ್ರಿಡ್ಜ್‌ನಿಂದ ದೇಹದ ತುಂಡುಗಳನ್ನು ತೆಗೆದು


ಮಹಾಲಕ್ಷ್ಮಿ

ಎಲ್ಲಾ ಆಯಾಮದಲ್ಲಿ ಸ್ಯಾಂಪಲ್ ಕಲೆ ಹಾಕಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಆಕೆ ನೇಪಾಳದವಳು ಎಂದು ಹೇಳಲಾಗಿದೆ. ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಮಂತ್ರಿಮಾಲ್‌ನಲ್ಲಿ ಕೆಲಸ ಮಾಡುತ್ತಿದ್ದಳು. ಪ್ರತಿ ದಿನ ಬೆಳಗ್ಗೆ 9.30ಕ್ಕೆ ಕೆಲಸಕ್ಕೆ ಹೋದರೆ ರಾತ್ರಿ 9 ಗಂಟೆಗೆ ಮನೆಗೆ ಬರುತ್ತಿದ್ದಳು. ಒಮ್ಮೆ ಮನೆಯೊಳಗೆ ಹೋದರೆ ಪುನಃ ಆಕೆ ಹೊರಕ್ಕೆ ಬರುತ್ತಿದ್ದುದು ಮರುದಿನ ಡ್ಯೂಟಿಗೆ ಹೋಗಬೇಕಾದಾಗ ಮಾತ್ರ ಎಂದು ನೆರೆಯವರು ಹೇಳಿದ್ದಾರೆ. ಆಕೆ ಹುಕುಮ್ ಸಿಂಗ್ ರಾಣ ಎಂಬಾತನನ್ನು ಮದುವೆಯಾಗಿದ್ದಳು. ಆ ದಂಪತಿಗೊಂದು ಮಗುವೂ ಇದೆ. ಆದರೆ, ಆಕೆ ತನ್ನ ಪತಿ ಹಾಗೂ ಮಗುವನ್ನು ತೊರೆದಿದ್ದಳು. ವೈಯ್ಯಾಲಿಕಾವಲ್‌ನಲ್ಲಿ ಕಳೆದ 5–6 ತಿಂಗಳಿನಿಂದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಳು ಎಂದು ಹೇಳಲಾಗಿದೆ.

ಘಟನಾ ಸ್ಥಳಕ್ಕೆ ಮಹಾಲಕ್ಷ್ಮಿ ಪತಿ ಹುಕುಮ್ ಸಿಂಗ್ ರಾಣ ಮತ್ತು ಮಹಾಲಕ್ಷ್ಮಿ ಕುಟುಂಬಸ್ಥರನ್ನು ಕರೆಸಿ ಪೊಲೀಸರು ವಿಚಾರಣೆ ಮಾಡುತ್ತಿದ್ದಾರೆ. ಖುದ್ದು ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಅವರಿಂದ ತನಿಖೆ ನಡೆಯುತ್ತಿದೆ. ಹುಕುಮ್ ಸಿಂಗ್ ನೆಲಮಂಗಲದ ಬಸವಣ್ಣ ದೇವರ ಮಠದಲ್ಲಿ ಕೆಲಸ ಮಾಡುತ್ತಿದ್ದಾರೆ. ಪತಿ ಆಗಾಗ ಪತ್ನಿಗೆ ಮಗುವನ್ನು ಭೇಟಿ ಮಾಡಿಸುತ್ತಿದ್ದ. ಹಲವು ದಿನದಿಂದ ಕರೆ ಮಾಡಿದರೂ ಪತ್ನಿ ಕರೆ ಸ್ವೀಕರಿಸುತ್ತಿರಲಿಲ್ಲ ಎಂದು ಮಹಾಲಕ್ಷ್ಮಿ ಪತಿ ಹುಕುಮ್ ಸಿಂಗ್ ರಾಣ ತಿಳಿಸಿದ್ದಾರೆ.

ಪೊಲೀಸರಿಗೆ ಕೊಲೆ ತನಿಖೆಯೇ ಚಾಲೆಂಜ್: ಪೊಲೀಸರಿಗೆ ಕೊಲೆ ತನಿಖೆಯೇ ದೊಡ್ಡ ಚಾಲೆಂಜ್ ಆಗಿದೆ. ಎಷ್ಟು ದಿನದ ಹಿಂದೆ ಕೊಲೆಯಾಗಿದೆ ಎಂಬ ಬಗ್ಗೆ ಖಚಿತವಾಗಿಲ್ಲ. ಸಿಸಿಟಿವಿ ಡಿವಿಆರ್ ವಶಕ್ಕೆ ಪಡೆದು ಪರಿಶೀಲನೆ ಮಾಡಲಾಗುತ್ತಿದೆ. ಎಷ್ಟು ದಿನದ ಹಿಂದಿನಿಂದ ಈಕೆ ■ 6ನೇ ಪುಟಕ್ಕೆ

ಕೊನೆಗೂ ಜಾಮೀನಿಗೆ ಅರ್ಜಿ ಸಲ್ಲಿಸಿದ ನಟ ದರ್ಶನ್



ಬೆಂಗಳೂರು, ಸೆ.21–ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಕೊನೆಗೂ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ. ಪ್ರಕರಣದ ಎ1 ಆರೋಪಿ ಪವಿತ್ರಾ ಸೇರಿದಂತೆ ಕೆಲವು ಆರೋಪಿಗಳು ಈಗಾಗಲೇ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದರು. ಆದರೆ ಅವರ ಅರ್ಜಿಗಳು ತಿರಸ್ಕೃತಗೊಂಡಿವೆ. ಚಾರ್ಜ್‌ಶೀಟ್ ಸಲ್ಲಿಕೆ ಬಳಿಕ ಎರಡನೇ ಬಾರಿಗೆ ಜಾಮೀನು ಅರ್ಜಿ ಸಲ್ಲಿಸಲು ಮುಂದಾಗಿದ್ದಾರೆ. ಆದರೆ ದರ್ಶನ್ ಮಾತ್ರ ಈವರೆಗೆ ಜಾಮೀನು ಅರ್ಜಿ ಸಲ್ಲಿಸಿರಲಿಲ್ಲ. ಪ್ರಕರಣದ ಆರೋಪ ಪಟ್ಟಿ ಸಲ್ಲಿಕೆಯಾಗಿ ಎರಡು ವಾರಕ್ಕೂ ಹೆಚ್ಚು ಸಮಯವಾಗಿದ್ದು, ತಮ್ಮ ವಕೀಲರ ಮೂಲಕ ಬೆಂಗಳೂರಿನ ಸೆಷನ್ಸ್ ಕೋರ್ಟ್‌ನಲ್ಲಿ ದರ್ಶನ್ ಜಾಮೀನು ಅರ್ಜಿ ಸಲ್ಲಿಕೆಯಾಗಿದೆ. ಜೂನ್ 9ರಂದು ಚಿತ್ರದುರ್ಗದ ರೇಣುಕಾಸ್ವಾಮಿಯನ್ನು ಅಪಹರಣ ಮಾಡಿ ಬೆಂಗಳೂರಿಗೆ ಕರೆತಂದು ಪಟ್ಟಣಗೆರೆ ಶೆಡ್‌ನಲ್ಲಿ ಕೂಡಿಹಾಕಿ, ಅಮಾನುಷವಾಗಿ ಹಲ್ಲೆ ಮಾಡಲಾಗಿತ್ತು. ರೇಣುಕಾಸ್ವಾಮಿಯನ್ನು ಕೊಲೆ ಮಾಡಿ ದೇಹವನ್ನು ಸುಮ್ಮನಹಳ್ಳಿ ಮೋರಿಗೆ ಬಿಸಾಡಲಾಗಿತ್ತು. ಈ ಪ್ರಕರಣದಲ್ಲಿ ಜೂನ್ 11 ರಂದು ಬೆಳಿಗ್ಗೆ ದರ್ಶನ್, ಪವಿತ್ರಾಗೌಡ ಸೇರಿದಂತೆ 17 ಮಂದಿಯ ಬಂಧನ ಆಗಿದೆ.



ಮಾಜಿ ಸಿಎಂಗಳಾದ ಹೆಚ್‌ಡಿಕೆ, ಬಿಎಸ್‌ವೈ ಅವಧಿಯ 100 ಕೋಟಿ ಮೌಲ್ಯದ ಗಂಗೇನಹಳ್ಳಿ ಭೂಮಿ ಡಿನೋಟಿಫಿಕೇಷನ್ ಕೆದಕಿದ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅರ್ಕಾವತಿ ಬಡಾವಣೆಯ

ಡಿ ನೋಟಿಫಿಕೇಷನ್ ಅಕ್ರಮ ಅಸ್ತ್ರ ಬಳಕೆ!

- ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ವೇಳೆ ತೆಗೆದುಕೊಂಡಂತಹ ನಿರ್ಧಾರಕ್ಕೆ ಮರು ಜೀವ
- ರೀ–ಡೂ ಹೆಸರಲ್ಲಿ 7000 ಕೋಟಿ ಮೌಲ್ಯದ 541 ಎಕರೆ ಭೂಮಿ ಡಿನೋಟಿಫಿಕೇಷನ್ ಮಾಡಿದ್ದ ಮಾಹಿತಿ ಕೇಳಿದ ರಾಜಭವನ

ಬೆಂಗಳೂರು, ಸೆ.21(ಕೆಎಂಶಿ)– ಅರ್ಕಾವತಿ ಅಕ್ರಮ ಡಿ–ನೋಟಿಫಿಕೇಷನ್ ಪ್ರಕರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಕೊರಳಿಗೆ ಮತ್ತೆ ಸುತ್ತಿಕೊಳ್ಳುವ ಸಾಧ್ಯತೆ ಎದುರಾಗಿದೆ.

ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಬಿಡಿಎ ಅರ್ಕಾವತಿ ಬಡಾವಣೆಯಲ್ಲಿ 541 ಎಕರೆ ಡಿ–ನೋಟಿಫಿಕೇಷನ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ರಾಜ್ಯ ಸರ್ಕಾರದಿಂದ ಮಾಹಿತಿ ಕೋರಿದ್ದಾರೆ. ರೀ–ಡೂ ಹೆಸರಿನಲ್ಲಿ ಇಷ್ಟು ದೊಡ್ಡ ಪ್ರಮಾಣದ ಭೂಮಿಯನ್ನು ಡಿ–ನೋಟಿಫಿಕೇಷನ್ ಮಾಡಿ 7,000 ಕೋಟಿ ರೂ.ಗಳಿಗೂ ಹೆಚ್ಚು ಹಣ ಕೈಬದಲಾವಣೆ ಆಗಿದೆ ಎಂದು ಪ್ರತಿಪಕ್ಷಗಳು ಆಗಿಂದಾಗ್ಯೆ ಆರೋಪ ಮಾಡುತ್ತಾ ಬಂದಿದ್ದವು.


ಮುಖ್ಯಮಂತ್ರಿ ಸಿದ್ದರಾಮಯ್ಯ

ಆರೋಪಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ, ನ್ಯಾಯಮೂರ್ತಿ ಎಚ್.ಎಸ್. ಕೆಂಪಣ್ಣ ಆಯೋಗ ರಚಿಸಿ ವರದಿಯನ್ನೂ ತರಿಸಿಕೊಂಡರು. ಆದರೆ, ಆ ವರದಿಯನ್ನು ವಿಧಾನಮಂಡಲದಲ್ಲಿ ಮಂಡಿಸಲೇ ಇಲ್ಲ. ಪ್ರತಿಪಕ್ಷಗಳು ಆರೋಪ ಮಾಡಿದ್ದವಾದರೂ ಇದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಿಲ್ಲ. ರಾಜಭವನ ಮತ್ತು ವಿಧಾನಸೌಧದ ನಡುವಿನ ಮುಸುಕಿನ ಗುದ್ದಾಟದಲ್ಲಿ ರೀ–ಡೂ ಪ್ರಕರಣವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ರಾಜ್ಯಪಾಲರು ಇದೀಗ ಮುಂದಾಗಿದ್ದಾರೆ.

ರೀ–ಡೂ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಂಪಣ್ಣ ಆಯೋಗ ಸಿದ್ದರಾಮಯ್ಯ ಆಡಳಿತಾವಧಿಯಲ್ಲಿ ಅಂದರೆ, 2017ರಲ್ಲೇ ವರದಿ ಸಲ್ಲಿಸಿತ್ತು. ರಾಜ್ಯಪಾಲರ ಕಾರ್ಯದರ್ಶಿಗಳು, ಕೆಂಪಣ್ಣ ಆಯೋಗದ ವರದಿಯ ಪೂರ್ಣ ಪ್ರತಿ ಮತ್ತು ಅರ್ಕಾವತಿ ಬಡಾವಣೆಯಲ್ಲಿ ರೀ–ಡೂ ಹೆಸರಿನಲ್ಲಿ ಡಿ–ನೋಟಿಫೈ ಮಾಡಿರುವ ಕಡತಗಳನ್ನು ಸಲ್ಲಿಸುವಂತೆ ಸರ್ಕಾರಕ್ಕೆ ಆದೇಶಿಸಿದ್ದಾರೆ. ■ 6ನೇ ಪುಟಕ್ಕೆ

ತಿರುಪತಿ ಲಡ್ಡುವಿನ ಪಾವಿತ್ರ್ಯತೆ ಕಾಪಾಡಿಕೊಳ್ಳಲಾಗಿದೆ



ಭಕ್ತರು ಆತಂಕಪಡುವುದು ಬೇಡ: ಟಿಟಿಡಿ ಸ್ಪಷ್ಟನೆ

ವಿಜಯವಾಡ: ತಿರುಪತಿ ವೆಂಕಟರಮಣ ದೇವಸ್ಥಾನದ ಪ್ರಸಿದ್ಧ 'ಲಡ್ಡು ಪ್ರಸಾದ'ದಲ್ಲಿ ಬಳಸುವ ತುಪ್ಪದ ಗುಣಮಟ್ಟದ ಬಗ್ಗೆ ಭಕ್ತರಲ್ಲಿ ಆತಂಕ ಉಂಟಾಗಿರುವುದರ ಮಧ್ಯೆ, ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಪವಿತ್ರ ಸಿಹಿತಿಂಡಿಯ ಪಾವಿತ್ರ್ಯತೆಯನ್ನು ಕಾಪಾಡಲಾಗಿದೆ ಎಂದು ಸ್ಪಷ್ಟಪಡಿಸಿದೆ.

ತಿರುಮಲ ಬೆಟ್ಟದ ಮೇಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನವನ್ನು ನಿರ್ವಹಿಸುತ್ತಿರುವ ಟಿಟಿಡಿ ನಿನ್ನೆ ಸೋಷಿಯಲ್ ಮೀಡಿಯಾ ಪೋಸ್ಟ್‌ನಲ್ಲಿ ಶ್ರೀವಾರಿ ಲಡ್ಡುವಿನ ದೈವತ್ವ ಮತ್ತು ಪರಿಶುದ್ಧತೆ ಈಗ ಕಳಂಕ ರಹಿತವಾಗಿದೆ ಎಂದು ಹೇಳಿದೆ. ಎಲ್ಲಾ ಭಕ್ತರಿಗೆ ತೃಪ್ತಿಯಾಗುವಂತೆ ಲಡ್ಡು ಪ್ರಸಾದದ ಪಾವಿತ್ರ್ಯತೆಯನ್ನು ರಕ್ಷಿಸಲು ಟಿಟಿಡಿ ಬದ್ಧವಾಗಿದೆ ಎಂದು ದೇವಾಲಯದ ಮಂಡಳಿಯು ಪೋಸ್ಟ್‌ನಲ್ಲಿ ತಿಳಿಸಿದೆ. ಎರಡು ದಿನಗಳ ಹಿಂದೆ ಆಂಧ್ರ ಮುಖ್ಯಮಂತ್ರಿ ಎನ್.ಚಂದ್ರ ಬಾಬು ನಾಯ್ಡು ಅವರು, ತಿರುಪತಿ ಲಡ್ಡಿನ ಗುಣಮಟ್ಟಕ್ಕಾಗಿ ಪರೀಕ್ಷಿಸಲಾದ ಮಾದರಿಗಳಲ್ಲಿ ಕಳಪೆ ಗುಣಮಟ್ಟದ ತುಪ್ಪ ಮತ್ತು ಪ್ರಾಣಿಗಳ ಕೊಬ್ಬಿನ ಅಂಶ ಕಂಡುಬಂದಿದೆ ಎಂದು ಹೇಳಿಕೆ ನೀಡಿದ್ದು ದೇಶಾದ್ಯಂತ ತೀವ್ರ ಸಂಚಲನ ಮೂಡಿಸಿತ್ತು. ಈ ವಿಚಾರದಲ್ಲಿ ಹಿಂದಿನ ವೈಎಸ್‌ಆರ್‌ಸಿಪಿ ಆಡಳಿತದ ಮೇಲೆ ಆರೋಪ ಮಾಡಿದ್ದರು. ಅದಕ್ಕೆ ನಿನ್ನೆ ಮಾಜಿ ಸಿಎಂ ವೈಎಸ್.ಜಗನ್‌ಮೋಹನ್ ರೆಡ್ಡಿ ಇದನ್ನು 'ದಿವರ್ಷನ್ ಪಾಲಿಟಿಕ್ಸ್' ಎಂದು ಬಣ್ಣಿಸಿ ಇದೊಂದು ಕಟ್ಟು ಕಥೆ ಎಂದು ಹೇಳಿದ್ದರು. ಕೇಂದ್ರ ಸರ್ಕಾರವು ಆಂಧ್ರಪ್ರದೇಶ ಸರ್ಕಾರದಿಂದ ಈ ವಿಷಯದ ಬಗ್ಗೆ ವರದಿಯನ್ನು ಕೇಳಿದ್ದು, ಪರಿಶೀಲಿಸಿದ ನಂತರ ಸೂಕ್ತ ಕ್ರಮದ ಭರವಸೆ ನೀಡಿದೆ.

ನಾಗಮಂಗಲ ಗಲಭೆ: ಬಂಧನ ಭೀತಿಯಲ್ಲಿ ಗ್ರಾಮ ತೊರೆದಿದ್ದ ಯುವಕ ಸಾವು


ಕಿರಣ್

ಮಂಡ್ಯ, ಸೆ.21–ನಾಗಮಂಗಲದ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸದ್ಯ 52 ಆರೋಪಿಗಳ ಬಂಧನವಾಗಿದೆ. ಬಂಧನದ ಭೀತಿಯಿಂದ ಗ್ರಾಮ ತೊರೆದಿದ್ದ ಯುವಕನೋರ್ವ ಸಾವನ್ನಪ್ಪಿದ್ದಾನೆ. ಬ್ರೈನ್ ಸ್ಟ್ರೋಕ್‌ನಿಂದ ಬದ್ರಿಕೊಪ್ಪಲು ಗ್ರಾಮದ ಕಿರಣ್(23) ಮೃತಪಟ್ಟಿದ್ದಾರೆ. ಜಿಲ್ಲೆಯ ನಾಗಮಂಗಲ ತಾಲೂಕಿನ ಬದ್ರಿಕೊಪ್ಪಲು ಗ್ರಾಮದ ನಿವಾಸಿ ಕಿರಣ್ ಸೆಪ್ಟೆಂಬರ್ 11ರ ರಾತ್ರಿ ಗಲಭೆ ನಂತರ ಗ್ರಾಮ ತೊರೆದಿದ್ದ. ಆದರೆ ನಿನ್ನೆ ಕಿರಣ್‌ಗೆ ಬ್ರೈನ್ ಸ್ಟ್ರೋಕ್ ಆಗಿ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆ ಫಲಿಸದೆ ಇಂದು ಕೊನೆಯುಸಿರೆಳೆದಿದ್ದಾರೆ. ಕಿರಣ್ ತಂದೆ ಕುಮಾರ್ ಅವರನ್ನು ಈಗಾಗಲೇ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದು, ಅವರು ಸದ್ಯ ಮಂಡ್ಯ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಂತರ ಇದೀಗ ಕಿರಣ್ ಮೃತದೇಹವನ್ನು ಗ್ರಾಮಕ್ಕೆ ತರಲಾಗಿದೆ. ಕುಟುಂಬದ ಆಕ್ರಂದನ ಮುಗಿಲು ಮುಟ್ಟಿದೆ. ಕಿರಣ್ ಅಂತ್ಯಕ್ರಿಯೆ ನಾಳೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ವಿದ್ಯಾರ್ಥಿಗೆ ನಿಫಾ ವೈರಸ್ ಸೋಂಕಿನ ಲಕ್ಷಣ

ಬೆಂಗಳೂರಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ



ಮೈಸೂರು, ಸೆ.21(ಆರ್‌ಕೆ)–ಮೈಸೂರಲ್ಲಿ ನಿಫಾ ವೈರಸ್ ಸೋಂಕಿನ ಲಕ್ಷಣ ಪತ್ತೆಯಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಇಂದು ಬೆಂಗಳೂರಲ್ಲಿ ಹೇಳಿಕೆ ನೀಡಿದ್ದಾರೆ. ರಾಜ್ಯಾದ್ಯಂತ ಒಟ್ಟು 50 ಮಂದಿಗೆ ನಿಫಾ ವೈರಸ್ ಸೋಂಕಿನ ಲಕ್ಷಣಗಳು ಕಂಡುಬಂದಿದ್ದು, ಆ ಪೈಕಿ ಮೈಸೂರಲ್ಲಿ ಕಾಲೇಜು ವಿದ್ಯಾರ್ಥಿಯೋರ್ವನಿದ್ದಾನೆ. ಆತನ ಟ್ರ್ಯಾಕ್ ಪತ್ತೆ ಮಾಡಿ ಅಗತ್ಯ ಚಿಕಿತ್ಸೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ. ಈ ಸಂಬಂಧ



'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕುಮಾರಸ್ವಾಮಿ, ಕೇರಳದಲ್ಲಿ ಸಾವನ್ನಪ್ಪಿದ ಸಂಬಂಧಿಯೊಬ್ಬರ ಅಂತ್ಯಕ್ರಿಯೆಗೆ ಹೋಗಿ ಬಂದ ವಿದ್ಯಾರ್ಥಿ ಪ್ರಿಲಿಮಿನರಿ ಕಾಂಟ್ಯಾಕ್ಟ್ ಆಗಿರುವ ಹಿನ್ನೆಲೆಯಲ್ಲಿ ಅವರ ಟ್ರಾವೆಲ್ ಹಿಸ್ಟರಿ ■ 6ನೇ ಪುಟಕ್ಕೆ

ಅತ್ಯಾಚಾರ, ಬ್ಲ್ಯಾಕ್‌ಮೇಲ್ ಪ್ರಕರಣ; ಶಾಸಕ ಮುನಿರತ್ನರಿಗೆ 14 ದಿನ ನ್ಯಾಯಾಂಗ ಬಂಧನ

ಬೆಂಗಳೂರು, ಸೆ.21(ಕೆಎಂಶಿ)–ಅತ್ಯಾಚಾರ ಹಾಗೂ ಬ್ಲ್ಯಾಕ್‌ಮೇಲ್ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಬಿಜೆಪಿ ಶಾಸಕ ಮುನಿರತ್ನ ಅವರಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಲಾಗಿದೆ.



ಪ್ರಕರಣಕ್ಕೆ ಸಂಬಂಧಿಸಿದಂತೆ ಮುನಿರತ್ನ ಅವರನ್ನು ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಇಂದು ಹಾಜರುಪಡಿಸಲಾಗಿತ್ತು.


ವಾದ–ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಕೆ.ಎಂ.ಶಿವಕುಮಾರ್ ಅವರು, ಆರೋಪಿಗೆ ಅಕ್ಟೋಬರ್ 5ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದರು. ಶಾಸಕರು ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಮಹಿಳೆಯೊಬ್ಬರು ಕಗ್ಗಲಿಪುರ ಪೋಲಿಸ್ ಠಾಣೆಯಲ್ಲಿ ನೀಡಿದ್ದ ದೂರಿನ ಅನುಸಾರ ಮುನಿರತ್ನ ಅವರನ್ನು ಶುಕ್ರವಾರ ಬೆಳಗ್ಗೆ ಜೈಲಿನ ಆವರಣದಲ್ಲೇ ಬಂಧಿಸಿದ್ದರು. ನ್ಯಾಯಾಲಯದಲ್ಲಿ ■ 6ನೇ ಪುಟಕ್ಕೆ

ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧ

ಬೆಂಗಳೂರು: ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧವಿರುವುದಾಗಿ ಶಾಸಕ ಮುನಿರತ್ನ ನ್ಯಾಯಾಧೀಶರ ಮುಂದೆಯೇ ತಿಳಿಸಿದ್ದಾರೆ. ಅತ್ಯಾಚಾರ, ಬ್ಲ್ಯಾಕ್‌ಮೇಲ್ ಪ್ರಕರಣದಲ್ಲಿ ಕೋರ್ಟ್‌ಗೆ ಹಾಜರುಪಡಿಸಿದ ವೇಳೆ ನ್ಯಾಯಾಧೀಶರ ಅನುಮತಿ ಪಡೆದು ಮಾತನಾಡಿದ ಅವರು, ದೂರು ನೀಡಿದವರು ನನ್ನ ಜೊತೆಯಲ್ಲೇ ಇದ್ದವರು. ಒಂದು ಪ್ರಕರಣದಲ್ಲಿ ಬಂಧಿಸಿ ಬಿಡುಗಡೆಗೊಳ್ಳುತ್ತಿದ್ದಂತೆ ನನ್ನ ಮೇಲೆ ಮತ್ತೊಂದು ದೂರು ದಾಖಲಿಸಿದ್ದಾರೆ. ಇದು ರಾಜಕೀಯ ಷಡ್ಯಂತ್ರ. ಲೋಕಸಭಾ ಚುನಾವಣೆ ನಂತರ ಕೆಲವರು ಈ ರೀತಿ ತೊಂದರೆ ಕೊಡುತ್ತಿದ್ದಾರೆ. ಇದರಿಂದ ಬೇಸರಗೊಂಡಿದ್ದೇನೆ. ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲೂ ಸಿದ್ಧ ಎಂದರು.

ಇದಕ್ಕೆ ನ್ಯಾಯಾಧೀಶರು, ರಾಜೀನಾಮೆಯನ್ನು ಎಲ್ಲಿ ಕೊಡಬೇಕೋ ಅಲ್ಲಿ ಕೊಡಿ. ಇಲ್ಲಿ ಪ್ರಸ್ತಾಪಿಸುವುದರಿಂದ ಪ್ರಯೋಜನವಿಲ್ಲ ಎಂದು ಹೇಳಿ, ನ್ಯಾಯಾಂಗ ಬಂಧನಕ್ಕೆ ಆದೇಶಿಸಿದರು.





ಮೈಸೂರಲ್ಲಿ ವ್ಯಾಪಾರ-ವಹಿವಾಟು ಅವಧಿಯ

ರಾತ್ರಿ 1 ಗಂಟೆವರೆಗೆ ವಿಸ್ತರಿಸಿ; ಹಾಲಿನ ದರ ಏರಿಸಬೇಡಿ

ಸಿಎಂ ಸಿದ್ದರಾಮಯ್ಯರಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡರ ಮನವಿ



ಮೈಸೂರಿನಲ್ಲಿ ಶನಿವಾರ ಪತ್ರಿಕಾ ದಿನಾಚರಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮನವಿ ಸಲ್ಲಿಸಿದರು. ಈ ವೇಳೆ ಸಂಘದ ಸದಸ್ಯರಾದ ಕೆ.ಭಾಸ್ಕರ್ ಶೆಟ್ಟಿ ಹಾಗೂ ಕೆ.ಎಸ್.ಅರುಣ್ ಜೊತೆಯಲ್ಲಿದ್ದರು.

ಮೈಸೂರು, ಸೆ.21(ಎಸ್‌ಬಿಡಿ)- ಬಜೆಟ್‌ನಲ್ಲಿ ಘೋಷಿಸಿದಂತೆ ಮೈಸೂರು ನಗರದಲ್ಲೂ ವ್ಯಾಪಾರ-ವಹಿವಾಟಿನ ಸಮಯಾವಕಾಶವನ್ನು ರಾತ್ರಿ 1 ಗಂಟೆವರೆಗೆ ವಿಸ್ತರಣೆ ಹಾಗೂ ನಂದಿನಿ ಹಾಲಿನ ದರ ಹೆಚ್ಚಿಸದಂತೆ ಕೋರಿ ಹೋಟೆಲ್ ಮಾಲೀಕರ ಸಂಘದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಲಾಗಿದೆ.

ಮೈಸೂರಿನಲ್ಲಿ ಶನಿವಾರ ಪತ್ರಿಕಾ ದಿನಾಚರಣೆ ಸಮಾರಂಭದಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ ನೇತೃತ್ವದಲ್ಲಿ ಮುಖ್ಯಮಂತ್ರಿಗಳಿಗೆ ಎರಡು ಪ್ರತ್ಯೇಕ ಮನವಿ ಸಲ್ಲಿಸಿ, ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ಶೀಘ್ರ ಕ್ರಮ ವಹಿಸುವಂತೆ ಕೋರಲಾಯಿತು.

ಸಮಯಾವಕಾಶ ವಿಸ್ತರಿಸಿ: 2024-25ನೇ ಸಾಲಿನ ಆಯ-ವ್ಯಯ ಭಾಷಣ ಕಂಡಿಕೆ 269ರಲ್ಲಿ ಘೋಷಿಸಿರುವಂತೆ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ 11 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವ್ಯಾಪಾರ ವಹಿವಾಟು ನಿರ್ಬಂಧವನ್ನು ರಾತ್ರಿ 1 ಗಂಟೆವರೆಗೆ ವಿಸ್ತರಿಸುವುದಾಗಿ ಘೋಷಿಸಲಾಗಿದೆ. ಪ್ರವಾಸೋದ್ಯಮ ಹಾಗೂ ವಾಣಿಜ್ಯೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ಇದು ಅವಶ್ಯವಾಗಿದೆ. ಅದರಲ್ಲೂ ಪ್ರವಾಸೋದ್ಯಮ ಕೇಂದ್ರವಾದ ಮೈಸೂರಿನಲ್ಲಿ ವ್ಯಾಪಾರ-ವಹಿವಾಟಿನ ಸಮಯಾವಕಾಶ ವಿಸ್ತರಣೆಯಿಂದ ಪ್ರವಾಸಿಗರಿಗೆ, ಕಾರ್ಮಿಕ ವರ್ಗ ಹಾಗೂ ಆಸ್ಪತ್ರೆಗಳಿಗೆ ಬರುವವರಿಗೆ ತುಂಬಾ ಅನುಕೂಲವಾಗಲಿದೆ. ಆದ್ದರಿಂದ ಈ ನಿಯಮವನ್ನು ಶೀಘ್ರ ಜಾರಿಗೊಳಿಸುವಂತೆ ಪತ್ರದಲ್ಲಿ ಮನವಿ ಮಾಡಲಾಗಿದೆ.

ಹಾಲಿನ ದರ ಹೆಚ್ಚಿಸಬೇಡಿ: ಈಗಾಗಲೇ ಹಲವು ದಿನಸಿ ಪದಾರ್ಥಗಳ ದರ ಗಗನಕ್ಕೇರಿದೆ. ಇದರಿಂದ ಜನ ಜೀವನ ಕಷ್ಟಕರವಾಗಿದೆ. ಅಲ್ಲದೆ ದರಗಳ ಏರಿಕೆಯಿಂದ ನಮ್ಮ ಆತಿಥ್ಯ ಉದ್ಯಮಕ್ಕೆ ಅಪಾರ ಹೊಡೆತ ಬೀಳುತ್ತಿದೆ. ಕಳೆದ ಆರು ತಿಂಗಳಿಂದ ದವಸ-ಧಾನ್ಯಗಳು, ಎಲ್ಲಾ ಬಗೆಯ ಅಕ್ಕಿಗಳು, ಬೇಳೆಕಾಳುಗಳು, ಪನ್ಸಾರಿ ಪದಾರ್ಥಗಳು, ಸಾಂಬಾರ ಪದಾರ್ಥಗಳು, ಮಸಾಲ ಪದಾರ್ಥಗಳು, ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ ಸೇರಿದಂತೆ ಎಲ್ಲಾ ವಸ್ತುಗಳ ಬೆಲೆ ಶೇ.15ರಿಂದ 20 ರಷ್ಟು ಹೆಚ್ಚಾಗಿವೆ. ರಾಜ್ಯದಲ್ಲಿ ಪೆಟ್ರೋಲ್, ಡೀಸಲ್ ಬೆಲೆ ಏರಿಕೆ ಮಾಡಿದ್ದೂ ಇದಕ್ಕೆ ಕಾರಣವಾಗಿದೆ. ಇತ್ತೀಚೆಗೆ ಅಡುಗೆ ಎಣ್ಣೆ ದರ ಒಂದು ಲೀಟರ್‌ಗೆ 20 ರೂ. ಜಾಸ್ತಿಯಾಗಿದೆ. ಕಾಫಿ ಮತ್ತು ಟೀ ಪುಡಿ ಬೆಲೆ ಕೆ.ಜಿ.ಗೆ 100 ರೂ. ಏರಿಕೆಯಾಗಿದೆ. ನೌಕರರ ಕೊರತೆ, ವೇತನ ಹೆಚ್ಚಳದ ನಡುವೆ ಬೆಲೆ ಏರಿಕೆ ಸರಿತೂಗಿಸಿಕೊಂಡು ಉದ್ಯಮ ನಡೆಸುವುದು ತುಂಬಾ ಕಷ್ಟಕರವಾಗಿದೆ. ಈ ಪರಿಸ್ಥಿತಿಯಲ್ಲಿ ಜನತೆ ಹಾಗೂ ಹೋಟೆಲ್ ಉದ್ಯಮದ ಹಿತದೃಷ್ಟಿಯಿಂದ ಹಾಲಿನ ದರ ಏರಿಕೆ ಚಿಂತನೆಯನ್ನು ಕೈಬಿಡಬೇಕು. ಜೊತೆಗೆ ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನವನ್ನು ಕೂಡಲೇ ಬಿಡುಗಡೆಗೊಳಿಸಬೇಕು. ಹಾಲು ಖರೀದಿಯಲ್ಲೂ ಗುಣಮಟ್ಟ ನೆಪದಲ್ಲಿ ಅವರಿಗೆ ಅನ್ಯಾಯವಾಗುತ್ತಿರುವುದನ್ನು ತಪ್ಪಿಸಬೇಕು ಎಂದು ಮತ್ತೊಂದು ಮನವಿಯಲ್ಲಿ ಕೋರಲಾಗಿದೆ.

ಮೈಸೂರಲ್ಲಿ 2 ದಿನಗಳ ಸೊಪ್ಪಿನ ಮೇಳ ಆರಂಭ





ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಶನಿವಾರ ಆರಂಭಗೊಂಡ ಎರಡು ದಿನಗಳ ಸೊಪ್ಪಿನ ಮೇಳವನ್ನು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಉದ್ಘಾಟಿಸಿದರು. ಮಂಜುನಾಥ್ ಅಂಗಡಿ, ಡಾ.ಜ್ಞಾನೇಶ್, ಜಯರಾಂ ಇನ್ನಿತರರಿದ್ದಾರೆ. ಬಲಚಿತ್ರದಲ್ಲಿ ಮೇಳದಲ್ಲಿ ಮಹಿಳೆಯರು ಸೊಪ್ಪು ಖರೀದಿಸುತ್ತಿರುವುದು.

ಮೈಸೂರು, ಸೆ. 21 (ಆರ್‌ಕೆ)- ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಎರಡು ದಿನಗಳ ಸೊಪ್ಪಿನ ಮೇಳ ಇಂದಿನಿಂದ ಆರಂಭವಾಯಿತು.

ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ ಆಯೋಜಿಸಿರುವ ಸೊಪ್ಪಿನ ಮೇಳವನ್ನು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಉದ್ಘಾಟಿಸಿ, ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಆಹಾರ ಉತ್ಪಾದನಾ ಪ್ರಮಾಣ ಹೆಚ್ಚಿದೆಯಾದರೂ, ಗುಣಮಟ್ಟ ಕುಸಿದಿದೆ. ದೇಶಿ ಸೊಪ್ಪಿನ ತಳಿಗಳನ್ನು ನೆನಪಿಸಿಕೊಂಡು ನಮ್ಮ ಆಹಾರದ ತಟ್ಟೆಗೆ ತರಬೇಕಾಗಿದೆ ಎಂದರು.

ಪೌಷ್ಟಿಕಾಂಶವಿರುವ ಸೊಪ್ಪುಗಳನ್ನು ಸೇವಿಸುವುದರಿಂದ ಆರೋಗ್ಯ ವೃದ್ಧಿಸುತ್ತದೆಯಾದ್ದರಿಂದ ರೈತ ಮತ್ತು ಗ್ರಾಹಕರ ಹಿತ ಕಾಪಾಡುವ ಜವಾರಿ ಸೊಪ್ಪಿನ ಕೃಷಿ ಮತ್ತು ಆಹಾರ ಸಂಸ್ಕೃತಿಯನ್ನು ಜನಪ್ರಿಯಗೊಳಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಮಂಜುನಾಥ್ ಅಂಗಡಿ, ಸುತ್ತೂರಿನ ಐಸಿಎಆರ್-ಜೆಎಸ್‌ಎಸ್

ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ಬಿ.ಎನ್.ಜ್ಞಾನೇಶ್, ಸಹಾಯಕ ಕೃಷಿ ನಿರ್ದೇಶಕ ಬಿ.ಡಿ.ಜಯರಾಂ, ಹೆಚ್.ಡಿ. ಕೋಟೆ ಜೇನು ಕುರುಬ ಸಮುದಾಯದ ನಾಯಕಿ ಪಾರ್ವತಿ, ಸಹಜ ಸಮೃದ್ಧ ನಿರ್ದೇಶಕ ಜಿ.ಕೃಷ್ಣ ಪ್ರಸಾದ್, ಸುಹಾಸ್, ಕೋಮಲ್ ಸೇರಿದಂತೆ ಹಲವು ಮಂದಿ ರೈತರು ಈ ಸಂದರ್ಭ ಉಪಸ್ಥಿತರಿದ್ದರು.

ಕಳೆ ಸೊಪ್ಪುಗಳು, ಸೊಪ್ಪಿನ ಕುಡಿಗಳು, ಹೊನಗೊನೆ, ಒಂದಲಗ, ಗುಚ್ಚಿ ಸೊಪ್ಪು, ಬಸಳೆ, ನೆಲಬಸಳೆ, ಹರಿವೆ, ಕಿರ್ಕಸಾಲಿ, ಮೂಲಂಗಿ, ಕೋಸು, ಹಾಡಬಳ್ಳಿ, ಬೆರಕೆ ಸೊಪ್ಪು, ಅಣ್ಣೆ ಸೊಪ್ಪು, ಕಿಲಕೀರೆ, ಕೀರೆ, ಈರುಳ್ಳಿ ಸೊಪ್ಪು, ನುಗ್ಗೆ, ಕರಿಬೇವು, ಸಪ್ಪಸೀಗೆ, ದಂಟು, ಮೆಂತ್ಯ, ಕೊತ್ತಂಬರಿ ಸೇರಿದಂತೆ ನೂರಾರು ಬಗೆಯ ಸೊಪ್ಪು ತರಕಾರಿಗಳನ್ನು ಮೇಳದಲ್ಲಿ ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತಿದೆ.

ಸಹಜ ಸೀಡ್ಸ್, ಸೊಪ್ಪಿನ ಬೀಜಗಳು, ಔಷಧೀಯ ಮತ್ತು ಹಣ್ಣಿನ ಗಿಡಗಳು, ಕುಂದಗೋಳ, ಸವದತ್ತಿ, ಹೆಚ್.ಡಿ. ಕೋಟೆ, ಕನಕಪುರ, ಆನೇಕಲ್, ಮಾಗಡಿ, ಕೊಳ್ಳೇಗಾಲದಿಂದ ತಂದಿರುವ ವಿವಿಧ ತಳಿಯ ಸೊಪ್ಪುಗಳನ್ನು ಮೇಳದಲ್ಲಿ ಪ್ರದರ್ಶಿಸಿದ್ದು, ಕನಕಪುರ ಕಾಡಿನ ಮಹಿಳಾ ಗುಂಪಿನ ಸದಸ್ಯರು ತಯಾರಿಸಿದ ಸೊಪ್ಪಿನ ಉಪ್ಸಾರು, ರಾಗಿ ಮುದ್ದೆ, ಅಣ್ಣೆ ಸೊಪ್ಪಿನ ಸಾರನ್ನು ಊಟ ಬಡಿಸುತ್ತಿರುವುದು ವಿಶೇಷ. ಮೈಸೂರಿನ ಸಕತ್ ಸೊಪ್ಪು ಬಳಗದವರು ತಯಾರಿಸಿದ ಅಡುಗೆಗಳು, ಮೇಳ ನೋಡಲು ಬಂದವರ ಬಾಯಿ ಚಪ್ಪರಿಸುವಂತೆ ಮಾಡಿತು. ನಾಳೆ (ಭಾನುವಾರ) ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಸೊಪ್ಪಿನ ಅಡುಗೆ ತಯಾರಿಸುವ ಸ್ಪರ್ಧೆ ಏರ್ಪಡಿಸಿದೆಯಲ್ಲದೆ, ಬೆಳಗ್ಗೆ 10 ಗಂಟೆಗೆ 5ರಿಂದ 12 ವರ್ಷದ ಮಕ್ಕಳಿಗಾಗಿ 'ನಾ ಕಂಡಂತೆ ಸೊಪ್ಪು' ವಿಷಯದ ಬಗ್ಗೆ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ.

ಸೊಪ್ಪಿನಿಂದ ತಯಾರಿಸಿದ ಉಪ್ಪಿನ ಕಾಯಿ, ಚಟ್ನಿ ಪುಡಿ, ಸಾಂಬಾರ ಪುಡಿ, ಗೃಹ ಬಳಕೆ ವಸ್ತುಗಳು, ಅಡುಗೆ ಮನೆ ಪದಾರ್ಥಗಳು, ವಿವಿಧ ತಳಿಯ ಸಸಿಗಳು, ಆಹಾರ ಪದಾರ್ಥಗಳನ್ನು ಮೇಳದಲ್ಲಿ ಪ್ರದರ್ಶಿಸಲಾಗಿದ್ದು, ಸಾರ್ವಜನಿಕರಿಗೆ ಉತ್ತಮ ಪ್ರತಿಕ್ರಿಯೆ ಬರುತ್ತಿದೆ.

ನಿಮ್ಮ ಹೆಸರಿನ ಪಾರ್ಸೆಲ್‌ನಲ್ಲಿ ಡ್ರಗ್ಸ್ ಇದೆ...! ಹೌಹಾರಿದ ವಯೋವೃದ್ಧರಿಂದ 95.50 ಲಕ್ಷ ಸುಲಿಗೆ!!

ಮೈಸೂರು, ಸೆ.21(ಎಸ್‌ಬಿಡಿ)- ವಂಚಕರು ಕುಳಿತಲ್ಲೇ ಜನರ ಹಣ ದೋಚುತ್ತಿರುವ ಘಟನೆಗಳು ಮೈಸೂರಿನಲ್ಲಿ ನಿರಂತರವಾಗಿ ವರದಿಯಾಗುತ್ತಿವೆ.

ಮುಂಬೈ ಪೊಲೀಸ್ ಅಧಿಕಾರಿ ಎಂದು ಕರೆ ಮಾಡಿ, ಮೈಸೂರಿನ ವಿವಿ ಮೊಹಲ್ಲಾದ 73 ವರ್ಷದ ವೃದ್ಧರೊಬ್ಬರ ಬರೋಬ್ಬರಿ 95.50 ಲಕ್ಷ ರೂ. ಹಣವನ್ನು ಲಪಟಾಯಿಸಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇವರಿಗೆ ವಾರದ ಹಿಂದೆ ವಾಟ್ಸಾಪ್ ಕರೆ ಮಾಡಿದ್ದ ವ್ಯಕ್ತಿ, ತನ್ನನ್ನು ಮುಂಬೈ ಪೊಲೀಸ್ ಅಧಿಕಾರಿ ವಿನಾಯಕ್ ದೇಶಮುಖ್ ಎಂದು ಪರಿಚಯಿಸಿಕೊಂಡಿದ್ದಾನೆ. ಬಳಿಕ ವಾಟ್ಸಾಪ್ ಮಾದರಿಯ ಸ್ಕೈಪ್ ಆಪ್ ಐಡಿಗೆ ಮೆಸೇಜ್ ಕಳುಹಿಸಿ, ಕೂಡಲೇ ಅದೇ ಐಡಿಗೆ ಕರೆ ಮಾಡಿದ್ದಾನೆ. ಕರೆ ಮಾಡಿದ ವಿಚಾರ ಕೇಳಿದಾಗ 'ನಿಮ್ಮ ಹೆಸರಲ್ಲಿರುವ ಪಾರ್ಸೆಲ್‌ನಲ್ಲಿ ಡ್ರಗ್ಸ್ ಕಂಟೆಂಟ್ ಇದೆ. ಆದ್ದರಿಂದ ನಿಮ್ಮ ಮೇಲೆ ಅರೆಸ್ಟ್ ವಾರೆಂಟ್ ಆಗಿದೆ. ನಿಮ್ಮ ಬ್ಯಾಂಕ್ ಖಾತೆಗಳಲ್ಲಿರುವ ಎಲ್ಲಾ ಹಣವನ್ನೂ ನಮಗೆ ಕಳುಹಿಸಿ. ಪರಿಶೀಲನೆ, ವಿಚಾರಣೆ ನಂತರ ನಿಮಗೆ ಅಷ್ಟೂ ಹಣವನ್ನು ಮರು ಪಾವತಿ ಮಾಡುತ್ತೇವೆ' ಎಂದಿದ್ದಾನೆ. ಇದನ್ನು ನಂಬಿ ವಂಚಕ ಹೇಳಿದಂತೆ ವಿವಿಧ ಬ್ಯಾಂಕ್ ಖಾತೆಯಿಂದ ಹಂತಹಂತವಾಗಿ 95.50 ಹಣ ಕಳುಹಿಸಿ, ಮೋಸ ಹೋಗಿದ್ದಾರೆ. ಮುಂಬೈ, ದೆಹಲಿ ಪೊಲೀಸ್ ಅಧಿಕಾರಿಗಳೆಂದು ಕರೆ ಮಾಡಿ, ವಂಚಿಸುವ ಪ್ರಕರಣಗಳು ಹೆಚ್ಚಾಗುತ್ತಿವೆ. ಪೊಲೀಸ್ ಸಮವಸ್ತ್ರದಲ್ಲಿ ಕಚೇರಿ ಮಾದರಿಯ ಸ್ಥಳದಿಂದಲೇ ವಿಡಿಯೋ ಕರೆ ಮಾಡಿ, ಗೈರತ್ತಿನಿಂದ ಗಂಭೀರ ಆರೋಪ ಮಾಡುವ ಮೂಲಕ ಸಾರ್ವಜನಿಕರನ್ನು ಬೆದರಿಸಿ, ಪರಿಶೀಲನೆ ನೆಪದಲ್ಲಿ ಲಕ್ಷಾಂತರ ಹಣವನ್ನು ನಿರ್ಭೀತಿಯಿಂದ ದೋಚುತ್ತಿದ್ದಾರೆ. ಪಾರ್ಟ್ ಟೈಂ ಕೆಲಸ, ಶೇರ್ ಮಾರ್ಕೆಂಟಿಂಗ್ ಇನ್ನಿತರ ನೆಪದಲ್ಲೂ ವಂಚಿಸಲಾಗುತ್ತಿದೆ. ಈ ಬಗ್ಗೆ ಎಚ್ಚರಿಕೆ ವಹಿಸದ ಹೊರತು ವಂಚನೆಗೆ ಬ್ರೇಕ್ ಹಾಕಲು ಸಾಧ್ಯವಿಲ್ಲ.

ದಸರಾ: ಸೆ.24ರಿಂದ ಯುವಸಂಭ್ರಮ

ಮೈಸೂರು,ಸೆ.21-ಮೈಸೂರು ದಸರಾ ಹಿನ್ನೆಲೆ ಸೆ.24ರಿಂದ 30ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಬಯಲು ರಂಗಮಂದಿರದಲ್ಲಿ 'ಯುವಸಂಭ್ರಮ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಉಪ ಸಮಿತಿ ಕಾರ್ಯಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ಮಹಾಸಭೆ

ಮೈಸೂರು, ಸೆ.21(ಜಿಎ)-ಮೈಸೂರಿನ ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಸೆ.22ರಂದು ಬೆಳಗ್ಗೆ 10 ಗಂಟೆಗೆ ಜೆಎಲ್‌ಬಿ ರಸ್ತೆಯ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ನಿರ್ದೇಶಕರಾದ ಎಂ.ಮೊಗಣ್ಣಚಾರ್ ಈ ವಿಷಯ ತಿಳಿಸಿ, ಸಂಘದ ಸದಸ್ಯರು ತಪ್ಪದೇ ಹಾಜರಾಗಿ ಚರ್ಚಿಸ ಬೇಕಾದ ವಿಷಯ ಕುರಿತು ಮೊದಲೇ ತಿಳಿಸಬೇಕು, ಈ ಹಿಂದೆ 500 ರೂ., ನೀಡಿ ಸದಸ್ಯರಾಗಿರುವವರು ಬಾಕಿ ಹಣವಾದ 650 ರೂ., ನೀಡಿ ಸದಸ್ಯತ್ವ ನವೀಕರಿಸಿಕೊಳ್ಳಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಜಯರಾಮಚಾರ್, ಕೆ.ಪಿ.ಶ್ರೀಕಾಂತ ಆಚಾರ್, ಎ.ಎನ್.ನರಸಿಂಹಚಾರ್, ಎಂ.ಲತಾ ಉಪಸ್ಥಿತರಿದ್ದರು.

ಪಡುವಾರಹಳ್ಳಿಯಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಿದರು.

ಮೈಸೂರು,ಸೆ.21-ಮೈಸೂರಿನ ಪಡುವಾರಹಳ್ಳಿಯ ಗಣಪತಿ ದೇವಸ್ಥಾನದ ಬಳಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಭಾರತೀಯ ಜನತಾ ಪಾರ್ಟಿ ದೇಶಾದ್ಯಂತ ಸದಸ್ಯತ್ವ ಅಭಿಯಾನಕ್ಕೆ ಕರೆ ನೀಡಿದೆ. ಈಗಾಗಲೇ ಕೋಟ್ಯಾಂತರ ಜನಗಳು ಸದಸ್ಯರಾಗಿ ನೋಂದಾಯಿಸಿದ್ದಾರೆ. ಅದೇ ರೀತಿ ರಾಜ್ಯದಲ್ಲಿ ಅತೀ ಹೆಚ್ಚು ಸದಸ್ಯತ್ವ ನೋಂದಾಯಿಸಬೇಕು. ಆ ಮೂಲಕ ಮುಂದಿನ ದಿನಗಳಲ್ಲಿ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಬರಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ನಗರ ಅಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಕ್ಷೇತ್ರದಲ್ಲಿ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ನೋಂದಾಯಿಸಲು ಶ್ರಮಿಸುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಪ್ರಧಾನ ಕಾರ್ಯದರ್ಶಿಗಳಾದ ದಾಸ ಪ್ರಕಾಶ್, ರಾಮುಗೌಡ, ವಾರ್ಡ್ ಅಧ್ಯಕ್ಷ ಆಟೋ ಮಂಜಣ್ಣ, ಪಾಲಿಕೆ ಮಾಜಿ ಸದಸ್ಯರಾದ ಸಿ.ಶ್ರೀರಾಮ್, ಎಂ. ಚಿಕ್ಕವೆಂಕಟು, ಈ.ಬಸವರಾಜ್, ಸಿ.ಡಿ.ಕುಮಾರ್, ನಗರ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿಯ ಎಂ.ರಾಮಕೃಷ್ಣ, ರಾಘವ್ ಎಂ ಗೌಡ, ಸಿ.ಸಂತೋಷ್, ಅರುಣ್, ಶ್ಯಾಮ್, ಎಸ್.ಬಿ.ಶಿವು, ಟೆನ್ನಿಸ್ ಗೋಪಿ, ವೇಣು, ಗೋಪಾಲ, ಛಾಯಾ, ಶ್ರೀನಿವಾಸ್ ಗೌಡ, ಕಾರ್ತಿಕ್, ಶರತ್, ಟೈಲರ್ ಭೈರ, ಅಮರ, ಮದನ್, ಎಂ.ಸಿ.ಕುಮಾರ್, ಗಿರೀಶ್, ಜೀವನ್ ಪ್ರಕಾಶ್, ಗೋಕುಲಂ ಜಯಣ್ಣ, ಅಶೋಕ್, ಶಿವರಾಜೇಗೌಡ ಮತ್ತಿತರರು ಉಪಸ್ಥಿತರಿದ್ದರು.

ನಿಧನ

ಕೆ.ಎಸ್. ಪ್ರಭು



ಮೈಸೂರು,ಸೆ.21-ಮೂಲತಃ ಚಾಮರಾಜನಗರ ತಾಲೂಕು ಕೆಂಪನಪುರದವರಾಗಿದ್ದು, ಹಾಲಿ ಮೈಸೂರು ನಿಮಿಷಾಂಬನಗರ ನಿವಾಸಿ ಕೆ.ಎಸ್.ಪ್ರಭು (75) ಶುಕ್ರವಾರ ನಿಧನರಾದರು. ಮೃತರು ಅವಿವಾಹಿತರಾಗಿದ್ದು, ಸಹೋದರರಾದ ರಂಗಸ್ವಾಮಿ, ಗ್ರಿಲ್ ಮಂಜುನಾಥ್, ವೆಂಕಟಾಚಲ, ಸಹೋದರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಚಾಮುಂಡಿಬೆಟ್ಟದತಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.09.2024 ಭಾನುವಾರ, ಮಳೆ ನಕ್ಷತ್ರ: ಉತ್ತರಾ, 13.09.2024 ರಿಂದ 26.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಭರಣಿ, ರಾಹುಕಾಲ : ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು, ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕತ್ತು ಮತ್ತು ಭುಜದ ನೋವಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಅಂಬಾರಿ ಬಾಯ್ಸ್** : 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

■ **ರಾಮ್‌ಸನ್ಸ್ ಪ್ರತಿಷ್ಠಾನ** : ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಸಹಜ ಸಮೃದ್ಧಿ ಸಾವಯವ ಕೃಷಿಕರ ಬಳಗ:** ಸೊಪ್ಪು ಮೇಳ-ಸೊಪ್ಪಿನ ಲೋಕ ಅನಾವರಣ, ವಿಷ ಮುಕ್ತ ಸೊಪ್ಪಿನ ಕೃಷಿ ತರಬೇತಿ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ ರಾತ್ರಿ 8 ರವರೆಗೆ

■ **ಭಾರತ ಸರಕಾರದ ಜವಳಿ ಮಂತ್ರಾಲಯ, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ** : ಗಾಂಧಿ ಶಿಲ್ಪ ಬಜಾರ್ ಹಾಗೂ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಕ್ರೆಸೆಂಟ್ ಬಳಕೆದಾರರ ಸಹಕಾರ ಸಂಘ** : ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಅಲ್‌ಹಾಜ್ ಮಹಮೂದ್ ಹಸನ್ ಸೇಠ್, ಸ್ಥಳ: ಸಂಘದ ಆವರಣ, ಉದಯಗಿರಿ, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಟ್ರಾವೆಲ್ಸ್ ಮಾಲೀಕರ ವಿವಿದೋದ್ದೇಶ ಸಹಕಾರ ಸಂಘ** : ವಾರ್ಷಿಕ ಸರ್ವ ಸದಸ್ಯರ ಮಹಾಸಭೆ, ಸ್ಥಳ: ಮಲೈ ಮಹದೇಶ್ವರ ಮಿನಿ ಫಂಕ್ಷನ್ ಹಾಲ್, ನ್ಯೂ ಕಾಂತರಾಜ್ ಅರಸ್ ರಸ್ತೆ, ನಿವೇದಿತಾನಗರ, ಬೆಳಗ್ಗೆ 10ಕ್ಕೆ.

■ **ವಾಣಿಜ್ಯ ತೆರಿಗೆ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ** : ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಜಿ.ವಿ. ರಾಮು, ಸ್ಥಳ: ಹೋಟೆಲ್ ಮಾಲೀಕರ ಸಂಘದ ಶ್ರೀ ಕುತ್ತೆತ್ತೂರು ಸೀತಾರಾಮರಾವ್ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ವೇದಿಕ್ ನಿಸರ್ಗ ನೇಚರ್ ಕ್ಯೂರ್ ಆಸ್ಪತ್ರೆ ಮತ್ತು ಇಂಟಿಗ್ರೇಟೆಡ್ ರಿಸರ್ಚ್ ಇನ್‌ಸ್ಟಿಟ್ಯೂಟ್** : ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್. ಶ್ರೀವತ್ಸ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಪುಷ್ಪಾ, ಜಿಲ್ಲಾ ಆಯುಷ್ ಡ್ರಗ್ ಕಂಟ್ರೋಲರ್ ಡಾ. ವೇದಾವತಿ, ಸರ್ಕಾರಿ ನೇಚುರೋಪತಿ ಮತ್ತು ಯೋಗ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ. ರಾಧಾಕೃಷ್ಣ ರಾಮರಾವ್, ಸ್ಥಳ: ರಾಜ್‌ಕಮಲ್ ಎಸ್ಟೇಟ್, ಮೈಸೂರು-ಬನ್ನೂರು ರಸ್ತೆ, ಬೆಳಗ್ಗೆ 10ಕ್ಕೆ.

■ **ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘ** : ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಟಿ. ಲಿಂಗರಾಜು, ಸ್ಥಳ: ನಟರಾಜ ಕಲ್ಯಾಣ ಮಂಟಪ, ಶಂಕರ ಮಠದ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಶಾರದಾ ಪತ್ತಿನ ಸಹಕಾರ ಸಂಘ** : ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ವಿ. ವೆಂಕಟೇಶ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಂದಾಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ** : ವಾರ್ಷಿಕ ಸರ್ವ ಸದಸ್ಯರ ಮಹಾಸಭೆ, ಅಧ್ಯಕ್ಷತೆ : ಯೋಹನ, ಸ್ಥಳ: ಕಂದಾಯ ಇಲಾಖಾ ನೌಕರರ ಸಂಘದ ಆವರಣ, ಹಳೇ ಜಿಲ್ಲಾಧಿಕಾರಿಗಳ ಕಚೇರಿ ಹತ್ತಿರ, ಬೆಳಗ್ಗೆ 11ಕ್ಕೆ.

■ **ದಿ ಹೆರಿಟೇಜ್ ಕ್ಲಬ್** : ವಾರ್ಷಿಕ ಸರ್ವ ಸದಸ್ಯರ ಮಹಾಸಭೆ, ಸ್ಥಳ: ದಿ ಹೆರಿಟೇಜ್ ಕ್ಲಬ್ ಆವರಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಸೌಹಾರ್ದ ಗೃಹ ನಿರ್ಮಾಣ ಸಹಕಾರ ಸಂಘ** : ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಹೆಚ್. ರವಿಕುಮಾರ್, ಸ್ಥಳ: ಹೋಟೆಲ್ ಸಿದ್ದಾರ್ಥದಲ್ಲಿ ಓಂ ಶಾಂತಿ ಹೋಟೆಲ್ ಅಂಡ್ ಕ್ಯಾಟರೀಸ್, ನಜರ್‌ಬಾದ್, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘ** : ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಎಲ್. ರೇವಣ್ಣಸಿದ್ದಯ್ಯ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಜಗನ್ಮಾತೆ ಅಕ್ಕಮಹಾದೇವಿ ಮಹಿಳಾ ಸೌಹಾರ್ದ ಸಹಕಾರ ಸಂಘ** : ವಾರ್ಷಿಕ ಸರ್ವ ಸದಸ್ಯರ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷೆ ಶ್ರೀಮತಿ ಸಿ.ಎಲ್. ಶರ್ಮಿಳಾ, ಸ್ಥಳ: ಕುದೇರು ಮಠ, ರಿಂಗ್ ರಸ್ತೆ, ಆಲನಹಳ್ಳಿ, ಮಧ್ಯಾಹ್ನ 3ಕ್ಕೆ.

■ **ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ** : ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎನ್. ಶ್ರೀನಿವಾಸ, ಸ್ಥಳ: ಸಂಘದ ಅಮೃತ ಮಹೋತ್ಸವ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ನಂದಿ ರಾಯಲ್ಸ್ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ** : ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ರವಿ, ಸ್ಥಳ: ಐಡಿಯಲ್ ಜಾವಾ ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

■ **ಧ್ವನಿ ಫೌಂಡೇಷನ್** : ಸ್ವರ ಕುಟೀರ ಸಂಗೀತ ನೃತ್ಯ ಸಭಾಂಗಣ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಚಲನಚಿತ್ರ ನಟ, ನಿರ್ದೇಶಕ ಬಿ. ಸುರೇಶ್, ಹಿಂದುಸ್ತಾನಿ ಕಲಾವಿದರಾದ ಶ್ರೀಮತಿ ಶಾರದಾಭಟ್ ಕಟ್ಟಿಗೆ, ಸಂಜೆ 7ಕ್ಕೆ ಪ್ರಸಿದ್ಧ ಹಿಂದುಸ್ತಾನಿ ಗಾಯಕರಾದ ಉಸ್ತಾದ್ ಫಯಾಜ್ ಖಾನ್ ವಿಶೇಷ ಗಾಯನ, ಸ್ಥಳ: ದಟ್ಟಗಳ್ಳಿಯ ಸೋಮನಾಥನಗರದ ಎಂಟನೇ ಬ್ಲಾಕ್‌ನಲ್ಲಿರುವ 'ಸ್ವರ' ನಿವಾಸ, ಸಂಜೆ 5.30ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಸಂಸ್ಥೆ ಪಶ್ಚಿಮ** : ಶ್ರಾವಣ ಯುವ ಸಂಗೀತೋತ್ಸವ, ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಅನಂತ ರಾಮಚಂದ್ರ ಅವರಿಂದ ಗಾಯನ, ವಿದುಷಿ ಪೃಥ್ವಿ ಭಾಸ್ಕರ್-ಪಿಟೀಲು, ವಿದ್ವಾನ್ ಸಂಜಯ್ ಆರ್. ತಾರನಾಥನ್-ಮೃದಂಗ, ಸ್ಥಳ: ರೋಟರಿ ಸಂಸ್ಥೆ ಪಶ್ಚಿಮ, ಕಾಮಾಕ್ಷಿ ಆಸ್ಪತ್ರೆ ಎದುರು, ಸಂಜೆ 6ಕ್ಕೆ

■ **ರಂಗಾಯಣ** : ಬೆಂಗಳೂರಿನ ಪಯಣ ರಂಗ ತಂಡದಿಂದ ಶ್ರೀಜಿತ್ ಸುಂದರಂ ನಿರ್ದೇಶನ ಮಾಡಿರುವ 'ತಲ್ಕಿ-ಟ್ರುಥ್ ಡ್ರೀಮ್ ವಯಾ ಬೆಂಗಳೂರು' ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

■ **ಸಂಚಲನ ಮೈಸೂರು** : ದೀಪಕ್ ಸಾರಥ್ಯದಲ್ಲಿ ಸಂಚಲನ ಮೈಸೂರು ತಂಡದಿಂದ ಅರ್ನಾಲ್ಡ್ ಬೆನೆಟ್ ರವರ ಚಿತ್ರತುರಗ ನ್ಯಾಯ ಅರ್ಥಾತ್ ಕೀರ್ತಿಯ ಅವಾಂತರ ನಾಟಕ ಪ್ರದರ್ಶನ, ಸಂಗೀತ, ನಿರ್ದೇಶನ : ದಿಗ್ವಿಜಯ ಹೆಗ್ಗೋಡು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ-ಡಾ. ಎಂ. ಎಸ್. ಆಶಾದೇವಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ-ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಗೀತಾ. ವೈ ಪುಟ್ಟಿ, ಎಂ.ಎಸ್. ಲಕ್ಷ್ಮೀಶ, ವ್ಯಾಖ್ಯಾನ : ಡಾ.ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ವಿಶ್ವ ಅಲ್ ಝೈಮರ್ಸ್ ದಿನದ ಸಂದರ್ಭದಲ್ಲಿ ಮರೆವಿನ ಕಾಯಿಲೆ ಆಲ್ ಝೈಮರ್ಸ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಅಲ್ ಝೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾದ ರಾಷ್ಟ್ರೀಯ ಕಾರ್ಯದರ್ಶಿಗಳಾದ ಡಾ. ಹನುಮಂತಾಚಾರ್ ಜೋಷಿ. ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ : ಮೇಟಗಳ್ಳಿಯಲ್ಲಿರುವ ಕುವೆಂಪು ಶತಮಾನೋತ್ಸವ ಸರ್ಕಾರಿ ಮಾದರಿ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ : ಮೈಸೂರಿನ ಶಕ್ತಿಧಾಮ ವಿದ್ಯಾಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಆಕಾಶವಾಣಿಯಲ್ಲಿ ಮಿತ್ರ ಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ - ಹಣತೆ - ಮಹಿಳಾ ಜಾಗೃತಿಯ ಬೆಳಕು ಸರಣಿಯಲ್ಲಿ ಕಾರ್ಯಕ್ರಮ, ವಿಷಯ - ರಾಷ್ಟ್ರೀಯ ಜೀವನೋಪಾಯ ಅಭಿಯಾನ ಭಾಗವಹಿಸುತ್ತಾರೆ - ಅಭಿಯಾನದ ನಿರ್ದೇಶಕರಾದ ಶ್ರೀವಿದ್ಯಾ ಪಿ ಐ, ನಡೆಸಿಕೊಡುತ್ತಾರೆ - ಪತ್ರಿಕೋದ್ಯಮಿ ಶೋಭಾ ಹೆಚ್ ಜಿ, 12.30 ದೇವರನಾಮ-ರಕ್ಷಿತಾ. ಆರ್, 12.45 ಜನಪದ ಸಂಗೀತ - ಲಕ್ಷ್ಮಮ್ಮ ಮತ್ತು ಸಂಗಡಿಗರಿಂದ ಒಡಹುಟ್ಟಿದವರ ಮೇಲಿನ ಹಾಡು, 1.20 ಭಾವಗೀತೆಗಳು-ಶಿವಮೊಗ್ಗ ಸುಬ್ಬಣ್ಣ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ-ರಂಜಿತಾ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ : ಲಾಲ್ ಗುಡಿ. ಜಿ. ಜಯರಾಮನ್ ಮತ್ತು ಜಿ.ಜೆ. ಆರ್. ಕೃಷ್ಣನ್-ಯುಗಳ ವೈಯೋಲಿನ್ ವಾದನ, 4.45 ಚಿತ್ರಗೀತೆಗಳು, 6.51 ಕೃಷಿರಂಗ : ತೋರಣ ಹೂರಣ-ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ- ವಾರದ ಕೃಷಿರಂಗ-ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ:- ಆರ್. ಲೋಕೇಶ್ವರಿ, 7.45 Talk in Kannada- ಯಾರೂ ಕಾಣದ ಪ್ರವಾಸಿ ತಾಣ ಮಾಲಿಕೆಯಲ್ಲಿ ನಂಜನಗೂಡು ತಾಲೂಕು ಹತ್ವಾಳಕಟ್ಟೆಯನ್ನು ಪರಿಚಯಿಸುತ್ತಾರೆ ಸಿರಿ ಮೈಸೂರು, 8.00 ಹಾದಿಯಲ್ಲಿ ಕಂಡ ಮುಖ-ಬಾನುಲಿ ಸರಣಿ, ಒಂದು ಕಾಲದ ಹಿಂದಿ ಶಿಕ್ಷಕಿ, ಈಗ ಸಮಾಜ ಸೇವಕಿ ಗುಂಡ್ಲುಪೇಟೆ ತಾಲೂಕು ಬಾಚಿಹಳ್ಳಿಯ ಮೆಹರ್ ಬಾನು ಅವರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು-ವೀರಭದ್ರಾಚಾರ್, 10.00 ರವಿವಾರದ ಅಖಿಲ ಭಾರತ ಸಂಗೀತ ಸಭೆ, ಡಾ. ರವೀಂದ್ರ ಕಾಟೋಟಿ-ಹಾರ್ಮೋನಿಯಂ, ಅನ್ಷುಲ್ ಪ್ರತಾಪ್ ಸಿಂಗ್ -ತಬಲಾ

ಮರದ ಅಂಬಾರಿ ಹೊತ್ತು ಮಹೇಂದ್ರ ಸಮರ್ಥ ಹೆಜ್ಜೆ...

ದಣಿವರಿಯದೇ ಸುಮಾರು 1 ಗಂಟೆ 40 ನಿಮಿಷದಲ್ಲಿ ಗುರಿ ತಲುಪಿದ ಹುಲಿ ಸೆರೆ ಪ್ರವೀಣ



ಮಹೇಂದ್ರ ಆನೆ ಶನಿವಾರ ಮರದ ಅಂಬಾರಿ ಹೊತ್ತು ಸಾಗಿತು. ಇದರ ಬಲಭಾಗದಲ್ಲಿ ದೊಡ್ಡಹರವೆ ಲಕ್ಷ್ಮಿ ಮತ್ತು ಎಡಭಾಗದಲ್ಲಿ ರಾಮಪುರ ಆನೆ ಶಿಬಿರದ ಲಕ್ಷ್ಮೀ ಕುಮ್ಕಿ ಆನೆಗಳಾಗಿ ಹೆಜ್ಜೆ ಹಾಕಿದವು.

ಮೈಸೂರು,ಸೆ.21(ಪಿಎಂ)– ಕಾಡಾನೆ ಮತ್ತು ಹುಲಿಗಳ ಸೆರೆ ಕಾರ್ಯಾಚರಣೆಯಲ್ಲಿ ಪಳಗಿರುವ ಮಹೇಂದ್ರ ಆನೆ ಶನಿವಾರ ಮರದ ಅಂಬಾರಿ ಹೊತ್ತು, ಗುರಿ ತಲುಪಿ ಸಮರ್ಥನೆಂದು ಸಂದೇಶ ಸಾರಿತು.

ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಐದು ಕಿ.ಮೀ. ಅಂತರವನ್ನು ಸುಮಾರು 250 ಕೆಜಿಯ ಮರದ ಅಂಬಾರಿ ಸೇರಿದಂತೆ ಸುಮಾರು 650 ಕೆಜಿ ಭಾರ ಹೊತ್ತು ಯಾವುದೇ ದಣಿವರಿಯದೇ ಹೆಜ್ಜೆ ಹಾಕಿದ.

41 ವರ್ಷದ ಈ ಗಂಡಾನೆ ಮೂರನೇ ಬಾರಿಗೆ ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದು, ಕಳೆದ 2 ವರ್ಷಗಳಿಂದ ಶ್ರೀರಂಗಪಟ್ಟಣ ದಸರಾದಲ್ಲಿ ಅಂಬಾರಿ ಆನೆಯಾಗಿ ಭರವಸೆ ಮೂಡಿಸಿದೆ. ಇಂದು ಸುಮಾರು 1 ಗಂಟೆ 40 ನಿಮಿಷದ ಅವಧಿಯಲ್ಲಿ ಮರದ ಅಂಬಾರಿ ಹೊತ್ತು ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿತು. ಇದರ ಬಲಭಾಗದಲ್ಲಿ ದೊಡ್ಡಹರವೆ ಲಕ್ಷ್ಮಿ ಮತ್ತು ಎಡಭಾಗದಲ್ಲಿ ರಾಮಪುರ ಆನೆ ಶಿಬಿರದ ಲಕ್ಷ್ಮೀ ಕುಮ್ಕಿ ಆನೆಗಳಾಗಿ ಸಾಥ್ ನೀಡಿದವು.

ಮೊದಲಿಗೆ ಅರಮನೆಯ ಗಜಪಡೆ ಶಿಬಿರದ ಆವರಣದಲ್ಲಿ ಮಹೇಂದ್ರ ಆನೆಗೆ ಚಾಪು, ಗಾದಿ ಮತ್ತು ನಮ್ದಾ ಅಳವಡಿಸಲಾಯಿತು. ನಂತರ ಕುಮ್ಕಿ ಆನೆಗಳ ಜೊತೆಗೆ ಅರಮನೆಯ ರಾಜವಂಶಸ್ಥರ ನಿವಾಸದ ಎದುರು ಕರೆತಂದು ಮರದ ಅಂಬಾರಿಯನ್ನು ಕ್ರೇನ್ ಸಹಾಯದಿಂದ ಕಟ್ಟಲಾಯಿತು. ಮರದ ಅಂಬಾರಿ ಸೂಕ್ತ ರೀತಿ ಕಟ್ಟಿರುವುದನ್ನು ಖಾತ್ರಿಪಡಿಸಿಕೊಂಡು ಮಹೇಂದ್ರ ಆನೆ ಪಕ್ಕದಲ್ಲಿ ಕುಮ್ಕಿ ಆನೆಗಳನ್ನು ನಿಲ್ಲಿಸಿ ತಾಲೀಮಿಗೆ ಚಾಲನೆ ನೀಡಲಾಯಿತು. ಮರದ ಅಂಬಾರಿ ಹೊತ್ತು ಮಹೇಂದ್ರ ದಿಟ್ಟತನದಿಂದ ಮುನ್ನಡೆಯುತ್ತಿದ್ದರೆ ಅರಮನೆ ಆವರಣದಲ್ಲಿ ನೆರೆದಿದ್ದ ಪ್ರವಾಸಿಗರು ಕ್ಯಾಮರಾ ಮತ್ತು ಮೊಬೈಲ್ ಕ್ಯಾಮರಾಗಳಲ್ಲಿ ಫೋಟೋ ಕ್ಲಿಕ್ಕಿಸಿ ಸಂಭ್ರಮದಲ್ಲಿ ತೇಲಿದರು. ಅಲ್ಲದೆ, ಮಾರ್ಗದುದ್ದಕ್ಕೂ ಸಾರ್ವಜನಿಕರು ಫೋಟೋ ತೆಗೆದುಕೊಂಡು ಪುಳಕಗೊಂಡರು.

ಆರಂಭದಲ್ಲಿ ಅರಮನೆ ಆವರಣದಲ್ಲೇ ಮಹೇಂದ್ರ ಸೇರಿದಂತೆ ಇಡೀ ಗಜಪಡೆಯನ್ನು ಒಂದು ಸುತ್ತು ಹಾಕಿಸಲಾಯಿತು. ಜಂಬೂಸವಾರಿಯ ಕೊನೆಯಲ್ಲಿ ಅಂಬಾರಿ ಆನೆ ಸಾಗುವುದು ವಾಡಿಕೆಯಾಗಿದ್ದು, ತಾಲೀಮು ಕಾರಣ ಮಹೇಂದ್ರ ಹಾಗೂ ಕುಮ್ಕಿ ಆನೆಗಳು ಮುಂದೆಯೇ ಸಾಗಿದರೆ ಇವುಗಳ ಹಿಂದೆ ಉಳಿದ ಗಜಪಡೆ ಸದಸ್ಯ ಆನೆಗಳು ಹೆಜ್ಜೆ ಹಾಕಿದವು. ಸುಮಾರು ಸಂಜೆ 4.50ಕ್ಕೆ ಅರಮನೆ ಆವರಣದಿಂದ ನಿರ್ಗಮಿಸಿದ ಗಜಪಡೆಯು, ಸುಮಾರು ಸಂಜೆ 6.30ಕ್ಕೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿದವು.

ಧನಂಜಯ, ಕಂಜನ್‌ರದ್ದೂ ಶಾಂತ ನಡೆ...!

ಶುಕ್ರವಾರ ರಾತ್ರಿ ಕಾದಾಡಿ ಆತಂಕ ಮೂಡಿಸಿದ್ದ ಧನಂಜಯ ಮತ್ತು ಕಂಜನ್, ಇಂದು ಮಹೇಂದ್ರ ಮುಂದಾಳತ್ವ ವಹಿಸಿದ್ದ ತಾಲೀಮಿನಲ್ಲಿ ಯಾವುದೇ ಗಲಿಬಿಲಿ–ಗೊಂದಲಕ್ಕೆ ಒಳಗಾಗದೇ ಶಾಂತ ರೀತಿಯಲ್ಲಿ ಹೆಜ್ಜೆ ಹಾಕಿದವು. ಅಲ್ಲದೆ, ಶುಕ್ರವಾರದ ಘಟನೆ ಹಿನ್ನೆಲೆಯಲ್ಲಿ ಅರಣ್ಯ ಹಾಗೂ ಪೊಲೀಸ್ ಇಲಾಖೆಯಿಂದ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿ, ಗಜಪಡೆಯ ಸಮೀಪಕ್ಕೆ ಸಾರ್ವಜನಿಕರು ಸುಳಿಯದಂತೆ ಕ್ರಮ ಕೈಗೊಳ್ಳಲಾಗಿತ್ತು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರ ಸಮ್ಮುಖದಲ್ಲಿ ಪ್ರಗತಿ ಪರಿಶೀಲನಾ ಸಭೆ

ಸರ್ಕಾರದ ಸುತ್ತೋಲೆ

ಮೈಸೂರು, ಸೆ.21(ಎಸ್‌ಪಿಎನ್)– ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು, ಅಧಿಕಾರಿಗಳ ಸಮ್ಮುಖದಲ್ಲಿ ಜಿಲ್ಲಾಮಟ್ಟದಲ್ಲಿ ನಡೆಸುತ್ತಿದ್ದ ಪ್ರಗತಿ ಪರಿಶೀಲನಾ ಸಭೆಯನ್ನು ನೇರವಾಗಿ ಕರೆಯದೇ ಆಯೋಗದ ಅಧ್ಯಕ್ಷರ ಸಮ್ಮುಖದಲ್ಲಿ ಕರೆಯುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ರಾಜ್ಯ ಸರ್ಕಾರ ಈ ಹಿಂದೆ ಜಿಪಂ ಸಿಇಓ ಮತ್ತು ಇತರೆ ಜಿಲ್ಲಾ ಹಂತದ ಅಧಿಕಾರಿಗಳನ್ನು ಒಳಗೊಂಡಂತೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು ಪ್ರಗತಿ ಪರಿಶೀಲನಾ ಸಭೆ ಕರೆಯಲು ಅವಕಾಶ ನೀಡಿತ್ತು. ಈ ಆದೇಶದನ್ವಯ ಪ್ರಸ್ತುತ ಆಯೋಗದ ಸದಸ್ಯರು ಜಿಲ್ಲಾ ಮಟ್ಟದಲ್ಲಿ ನೇರವಾಗಿ ಸಭೆ ಕರೆಯುವ ಸಂದರ್ಭದಲ್ಲಿ ಹಾಗೂ ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ಕಂಡುಬಂದ ಘಟನೆಗಳು, ನ್ಯೂನತೆಗಳಿಗೆ ನೀಡುತ್ತಿರುವ ಸಲಹೆ–ಸೂಚನೆಗಳು ಹಾಗೂ ಮೌಖಿಕ ಆದೇಶಗಳು ಸಾಕಷ್ಟು ಗೊಂದಲಕ್ಕೀಡು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಹಾಗಾಗಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಕನಿಷ್ಠ ಇಬ್ಬರು ಸದಸ್ಯರ ತಂಡ ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ, ಸ್ಥಳ ಪರಿಶೀಲಿಸಿ ವರದಿಯನ್ನು ಅಧ್ಯಕ್ಷರಿಗೆ ಸಲ್ಲಿಸಿದ ನಂತರ ಆಯೋಗದ ಕಚೇರಿಯಿಂದಲೇ ಮುಂದಿನ ಸೂಕ್ತ–ಸಲಹೆ ಹಾಗೂ ಶಿಫಾರಸ್ಸುಗಳನ್ನು ಅಧಿಕಾರಿಗಳಿಗೆ ಕಳುಹಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ(ಡಿ–ಶಾಖೆ)ಯ ಅಧೀನ ಕಾರ್ಯದರ್ಶಿ–3 ಆರ್.ಲತಾ ಸೆ.20ರಂದು ಸುತ್ತೋಲೆ ಹೊರಡಿಸಿದ್ದಾರೆ.

ಶ್ರೀ ಬಸವೇಶ್ವರ ಗೃಹ ನಿರ್ಮಾಣ ಸಹಕಾರ ಸಂಘ (ನಿ)
ನಂ. 127/ಎಫ್–81, ರಾಮಾನುಜ ರಸ್ತೆ, ಮೈಸೂರು–570 004
ಫೋನ್: 0821–2440330

2023–24ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಸನ್ಮಾನ್ಯ ಸದಸ್ಯರೆ,
ಸಂಘದ 2023–2024ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ : 22–09–2024 ರ ಭಾನುವಾರ ಬೆಳಗ್ಗೆ 11 ಗಂಟೆಗೆ ಸಂಘದ "ಶ್ರೀ ಬಸವೇಶ್ವರ ನಗರ" ಬಡಾವಣೆ, ಮೈಸೂರು–ಟಿ.ನರಸೀಪುರ ಮುಖ್ಯ ರಸ್ತೆ, ಮೊಸಂಬಾಯನಹಳ್ಳಿಗೆ ಹೋಗುವ ರಸ್ತೆ, ಚಿಕ್ಕಹಳ್ಳಿಯಿಂದ ಮುಂದೆ ಬಲಕ್ಕೆ, ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ವಿ. ಬಸವರಾಜು ಹಿನಕಲ್ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಸದಸ್ಯರೆಲ್ಲರಿಗೂ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿದೆ. ಕಾರಣಾಂತರಗಳಿಂದ ಆಹ್ವಾನ ಪತ್ರಿಕೆಯು ತಲುಪದಿದ್ದಲ್ಲಿ, ಇದನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ಕೋರುತ್ತೇವೆ.

ಮಾನ್ಯ ಸದಸ್ಯರು ಸಭೆಗೆ ಹಾಜರಾಗುವಾಗ ಸಂಘದ ಪಾಸ್ ಪುಸ್ತಕ, ಗುರುತಿನ ಚೀಟಿ ತರಬೇಕಾಗಿ ವಿನಂತಿ.

ಸಂಘದ ಕಛೇರಿಯಿಂದ ವಾರ್ಷಿಕ ಮಹಾಸಭೆ ನಡೆಯುವ ಬಡಾವಣೆಗೆ ವಾಹನದ ವ್ಯವಸ್ಥೆ ಕಲ್ಪಿಸಲಾಗಿದೆ. (ಬೆಳಗ್ಗೆ 10.00ಗಂಟೆಯಿಂದ 11.00ಗಂಟೆವರೆಗೆ)

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
ಸಹಿ/–
ಕಾರ್ಯದರ್ಶಿ

ಕಳೆದಿದೆ
ರಮೇಶ್‌ಗೌಡ,
ಎನ್ S/o ನಂಜೇಗೌಡ ಕೆ.,
ಚಿಕ್ಕೊಸಳ್ಳಿ ಗ್ರಾಮ, ಕೆ.ಆರ್.ಪೇಟೆ ತಾ||, ಮಂಡ್ಯ ಜಿಲ್ಲೆ, ಕಾರಿನಲ್ಲಿ ಇಟ್ಟಿದ ಸಹಿ ಮಾಡಲಾಗಿದ್ದ SBI ಕೆ.ಆರ್.ಪೇಟೆ ಶಾಖೆಯ A/c No.64081363757ಗೆ ನೀಡಿದ್ದ 25 ಹಾಳೆಗಳ ಚೆಕ್ ಪುಸ್ತಕ ನಂ.014526 ರಿಂದ 014550, 50 ಹಾಳೆಗಳ ಚೆಕ್ ಪುಸ್ತಕ ನಂ. 867976 ರಿಂದ 868025, 50 ಹಾಳೆಗಳ ಚೆಕ್ ಪುಸ್ತಕ ನಂ.909002 ರಿಂದ 909051, ಸಹಿ ಮಾಡಲಾಗಿದ್ದ ಸ್ವಂತ ಪೇಪರ್‌ಗಳು, ಅಂಡಿಮೆಂಟ್ ಹಾಗೂ ಇತ್ಯಾದಿಗಳ ಜೊತೆಗಿದ್ದ 2 ಸಾವಿರ ನಗದು ಕಳೆದಿರುತ್ತದೆ
ಸಿಕ್ಕಿದವರು ಸಂಪರ್ಕಿಸಿ:
9448600308

PUBLIC NOTICE

Notice is hereby given that SRI. SUPREETH. G, son ofLate V.S Gopalakrishna, is desirous to sell the under mentioned property to my client/s and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE - 570 002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

House bearing No.85 (Old No.85 D34, measuring East to West: 38 1/4 and North to South: 30 Feet, totally measuring 1200 Square Feet (111.48 Square Meters), situated at Park Road, Gokulam 3rd Stage, V V Mohalla. Mysore City with RCC building thereon.

Sd/- Dhirendra Kumar R. Mehta
Advocate
KEY-ANS LAW SOLUTIONS
Date: 21.09.2024, Place: Mysore

ವಿಜಯನಗರ ಪತ್ತಿನ ಸಹಕಾರ ಸಂಘ ನಿಯಮಿತ
#12, ನೆಲಅಂತಸ್ತು, ಕನ್ನಡ ಸಾಹಿತ್ಯ ಪರಿಷತ್ತು ಭವನ ರಸ್ತೆ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮುಂಭಾಗ, ವಿಜಯನಗರ 1ನೇ ಹಂತ, ಮೈಸೂರು–570017 । ದೂರವಾಣಿ: 2415869

ನಮ್ಮ ಸಂಘದ 21 ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 22–09–2024 ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಮುಲಕನಾಡು ಭವನ, ಹುಣಸೂರು ಮುಖ್ಯರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಪಕ್ಕ, ಏರ್ಪಡಿಸಲಾಗಿದೆ. ಸಂಘದ ಅಧ್ಯಕ್ಷರಾದ ಶ್ರೀ ಕೆ.ಎಂ.ತೀರ್ಥರಾಜು ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ ಸಭೆಗೆ ಭಾಗವಹಿಸ––ಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಶ್ರೀಮತಿ ನಂದಿನಿ ಎಂ. ಕಾರ್ಯದರ್ಶಿ

ಮೈಸೂರು ಮಿತ್ರ 45 – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಪಥವಿದಾರರ ಸಹಕಾರ ಸಂಘ (ಸಂಘ)
ಮಿರ್ಲೆ ಸಾಲಿಗ್ರಾಮ ತಾಲ್ಲೂಕು.

2023–24ನೇ ಸಾಲಿನ ವಾರ್ಷಿಕ ಮಹಾಸಭೆ ಗಣ್ಯರಿಗೆ ಸನ್ಮಾನ ಮತ್ತು 2023– 24ನೇ ಸಾಲಿನಲ್ಲಿ ತೇರ್ಗಡೆಯಾದ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು ಕಾರ್ಯಕ್ರಮಕ್ಕೆ ಸಂಘದ ಎಲ್ಲಾ ಸದಸ್ಯರು ಸಮಯಕ್ಕೆ ಸರಿಯಾಗಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ.

ಸ್ವಾಗತ ಕೋರುವವರು: ಎಂ.ಆರ್.ಕಾಂತರಾಜು, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರು ಸಿಬ್ಬಂದಿಗಳು ಹಾಗೂ ಪಥವಿದಾರರ ಸಹಕಾರ ಸಂಘದ ಸದಸ್ಯರು.

ಸ್ಥಳ: ಸಾರ್ವಜನಿಕ ಒಕ್ಕಲಿಗರ ಸಮುದಾಯ ಭವನ ಮಿರ್ಲೆ.
ದಿನಾಂಕ –24-9-2024 ಮಂಗಳವಾರ.
ಸಮಯ – 11.00 ಗಂಟೆ

ಸ್ಥಾಪನೆ : 1910 ಮೊ :08212520026

ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್.ಲಿ
ಶ್ರೀ ಹರ್ಷ ರಸ್ತೆ ಮೈಸೂರು –570001

114 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 2023–2024 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 22–09–2024 ಭಾನುವಾರ ಬೆಳಗ್ಗೆ 10.00 ಘಂಟೆಗೆ ಮೈಸೂರು ನಗರದ ಚಂದ್ರಗುಪ್ತಾ ರಸ್ತೆಯಲ್ಲಿರುವ ಎಂ ಎಲ್ ವರ್ಧಮಾನಯ್ಯ ಸ್ಮಾರಕ ಭವನ ಸಂಗಮ್ ಟಾಕೀಸ್ ಹತ್ತಿರ ಮೈಸೂರು ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸ್ವರೂಪ್ ಎಂ.ಎನ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತದೆ. ಈಗಾಗಲೇ ಪ್ರತಿಯೊಬ್ಬ ಸದಸ್ಯರಿಗೂ ಅಂಚೆ ಮೂಲಕ ಸದಸ್ಯರುಗಳ ವಿಳಾಸಕ್ಕೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು ಆಹ್ವಾನ ಪತ್ರದ ವರದಿ ಪುಸ್ತಕ ಈ ವರಗೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡುವಂತೆ ಈ ಮೂಲಕ ಕೋರಲಾಗಿದೆ .

ಶ್ರೀ ಸ್ವರೂಪ್.ಎಂ.ಎನ್	ಶ್ರೀ ಪ್ರಕಾಶ್.ಜೆ,	ಶ್ರೀ ಹೆಚ್.ರಾಜಶೇಖರ
ಅಧ್ಯಕ್ಷರು	ಉಪಾಧ್ಯಕ್ಷರು	ವ್ಯವಸ್ಥಾಪಕರು (ಪ್ರ)

ನಿರ್ದೇಶಕರುಗಳಾದ :
ಶ್ರೀ ಶಿವ.ಎಸ್.ಬಿ. ಶ್ರೀ ಎನ್.ಧ್ರುವರಾಜ್, ಶ್ರೀ ಮಧು.ವಿ, ಶ್ರೀ ಎಂ.ಪುಟ್ಟಸ್ವಾಮಿ, ಶ್ರೀ ಪ್ರಸನ್ನ.ಎನ್.ಲಕ್ಷ್ಮಣ್, ಶ್ರೀ ದಿನೇಶ್.ಎಂ.ವೆಂಕಟಲಿಂಗಯ್ಯ, ಶ್ರೀ ಜಯಕುಮಾರ್, ಶ್ರೀ ಎಸ್.ಸ್ವಾಮಿ, ಶ್ರೀ ಎಂ.ಕೆ.ಅಶೋಕ, ಶ್ರೀಮತಿ ಹೇಮಾ, ಶ್ರೀಮತಿ ಪುಷ್ಪಲತ

ಸಹಿ/– ವ್ಯವಸ್ಥಾಪಕರು

25ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ.ಮಹದೇವಪ್ಪ
(ಕಾಯಿ ಮತ್ತು ಹಣ್ಣಿನ ವ್ಯಾಪಾರಿಗಳು)
ನಿಧನ: 22.09.1999

ನಿಮ್ಮ ನೋಟ ನಯನದಲ್ಲಿ, ನಿಮ್ಮ ನುಡಿಯು ಶ್ರವಣದಲ್ಲಿ, ನಿಮ್ಮ ಸ್ಮರಣೆ ಮನದಲ್ಲಿ, ನೀವು ಸದಾ ನಮ್ಮ ಹೃದಯದಲ್ಲಿ.
ಸದಾ ನಿಮ್ಮ ನೆನೆಯುವ: ಸಮಾಜ ಸೇವಕ ಡಾ|| ಎಂ.ಮಾದೇಶ್, ಮತ್ತು ಕುಟುಂಬವರ್ಗದವರು.



ಶ್ರೀ ವಿಶ್ವಕರ್ಮ ಪತ್ತಿನ ಸಹಕಾರ ಸಂಘ (ನಿ.)
#744, 1ನೇ ಮಹಡಿ, ಕಾಳಮ್ಮ ದೇವಸ್ಥಾನ ರಸ್ತೆ, ಮಂಡಿ ಮೊಹಲ್ಲಾ, ಕಾಮಟಗೇರಿ, ಇರ್ವಿನ್ ರೋಡ್ ಕ್ರಾಸ್, ಮೈಸೂರು - 570021



2023-24ನೇ ಸಾಲಿನ 20ನೇ ವರ್ಷದ ವಾರ್ಷಿಕ ಮಹಾಸಭೆಯ ಆಹ್ವಾನಪತ್ರಿಕೆ



ಶ್ರೀ ಜಯರಾಮಚಾರಿ, ಅಧ್ಯಕ್ಷರು
ಮೊ.: 9448066080

ಸನ್ಮಾನ್ಯ ಸದಸ್ಯರುಗಳಲ್ಲಿ ವಿನಂತಿ, ವಿಶ್ವಕರ್ಮ ಪತ್ತಿನ ಸಹಕಾರ ಸಂಘದ 2023-24ನೇ ಸಾಲಿನ 20ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 22-09-2024ರ ಭಾನುವಾರದಂದು ಬೆಳಿಗ್ಗೆ 10.00 ರಿಂದ 2.00ರವರೆಗೆ, ಸ್ಥಳ : ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ಜಾನ್ಸಿ ಲಕ್ಷ್ಮಿಬಾಯಿ ರಸ್ತೆ, ಮೂಡ ಕಛೇರಿ ಪಕ್ಕ, ಮೈಸೂರು. ಬ್ಯಾಂಕಿನ ಅಧ್ಯಕ್ಷರಾದ ಜಯರಾಮಚಾರಿಯವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರುಗಳು ಅಂಚೆ ಮೂಲಕ ಆಹ್ವಾನ ಪತ್ರವನ್ನು ಕಳುಹಿಸಲಾಗಿದೆ. ಆಹ್ವಾನ ಪತ್ರ ತಲುಪದಿದ್ದರೆ ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಸಭೆಗೆ ಆಗಮಿಸಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ವಿಶೇಷ ಸೂಚನೆ :- ಸಂಘದ ಸದಸ್ಯರುಗಳು ಈ ಹಿಂದೆ 500 ರೂ. ಹೊಂದಿರುವ ಸದಸ್ಯರು ಬಾಕಿ ಷೇರು ಹಣ 650/- (ಈಗಿನ ಷೇರು ಹಣ 1000/- ರೂ.) ಸಂಘದಲ್ಲಿ ಕಟ್ಟಿ ನವೀಕರಣ ಮಾಡಿಕೊಂಡು ಸಂಘದಲ್ಲಿ ಸಿಗುವಂತ ಸೌಲಭ್ಯಗಳನ್ನು ಪಡೆದುಕೊಂಡು ಜೊತೆಯಲ್ಲಿ ಸರ್ಕಾರದ ಯಶಸ್ವಿನಿ ಆರೋಗ್ಯ ಯೋಜನೆಯಲ್ಲಿ ಸಿಗುವಂತ ಸೌಲಭ್ಯಗಳನ್ನು ಪಡೆದುಕೊಳ್ಳಬೇಕಾಗಿ ವಿನಂತಿಸಲಾಗಿದೆ.



ಶ್ರೀಮತಿ ಭಾಗ್ಯಲಕ್ಷ್ಮಿ, ಉಪಾಧ್ಯಕ್ಷರು
ಮೊ.: 9741309963



ಡಾ. ಎಂ.ಮೊಗಣ್ಣಚಾರ್	ಶ್ರೀ ಕೆ.ಪಿ. ಶ್ರೀಕಾಂತಚಾರ್	ಶ್ರೀ ಪಿ. ಬಸವರಾಜು	ಶ್ರೀ ಎನ್.ಕೆ.ದಿನೇಶ್	ಶ್ರೀ ಎ.ಎನ್.ನರಸಿಂಹಚಾರ್	ಶ್ರೀ ಆರ್.ಮಂಜುನಾಥ್	ಶ್ರೀ ಎಸ್.ವಿಜಯಕುಮಾರ್	ಶ್ರೀಮತಿ ಎಂ. ಲತಾ
ನಿರ್ದೇಶಕರು	ನಿರ್ದೇಶಕರು	ನಿರ್ದೇಶಕರು	ನಿರ್ದೇಶಕರು	ನಿರ್ದೇಶಕರು	ನಿರ್ದೇಶಕರು	ನಿರ್ದೇಶಕರು	ನಿರ್ದೇಶಕರು
ಮೊ.: 9845034191	ಮೊ.: 9945374688	ಮೊ.: 9945467610	ಮೊ.: 9880100071	ಮೊ.: 9845689684	ಮೊ.: 9242841319	ಮೊ.: 9901890358	ಮೊ.: 8147326077

ನಾಡಿನ ಸಮಸ್ತ ಜನತೆಗೆ ವಿಶ್ವಕರ್ಮ ಜಯಂತಿಯ ಶುಭಾಶಯಗಳು

ನಕ್ಕರೆ ಅದೇ ಸ್ವರ್ಗ

ಗುಂಡ : ಯಾಕೋ ಪರೀಕ್ಷೆ ಬರೆಂಯೋದು ಬಿಟ್ಟು ಡ್ಯಾನ್ಸ್ ಮಾಡ್ತಿದಿಯಾ?
ತಿಮ್ಮ : ಟೀಚರ್ ಹೇಳಿದ್ರು, ಗಣಿತ ಪರೀಕ್ಷೆಯಲ್ಲಿ ಪ್ರತಿ ಸ್ಟೆಪ್‌ಗೂ ಮಾರ್ಕ್ಸ್ ಇದೆ ಅಂತ!

ಮೈಸೂರು ಮಿತ್ರ

ಭಾನುವಾರ, 22 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಕರ್ನಾಟಕ ಬರಿ ನಾಡಲ್ಲ, ನಮ್ಮ ಸಂಸ್ಕೃತಿಯ ಧಾತು. ಕನ್ನಡ ಕೇವಲ ನುಡಿಯಲ್ಲ, ನಮ್ಮಂತರಂಗದಾ ಮಾತು –ಬಿ.ಆರ್. ಲಕ್ಷ್ಮಣರಾವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ

ನಿಮ್ಮ ಪತ್ರಗಳು

■ ಸಂಭ್ರಮದ ನಾಡಹಬ್ಬ ದಸರಾ ವೇಳೆ ಯಾರ ಬಾಳಲ್ಲೂ ಕತ್ತಲು ಕವಿಯದಿರಲಿ

ಮಾನ್ಯರೆ,

ರಾಜ್ಯ ಸರ್ಕಾರ ಈ ವರ್ಷ ನಾಡಹಬ್ಬ ದಸರಾ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸಿದ್ಧತೆ ನಡೆಸುತ್ತಿದೆ. ಹತ್ತಾರು ಉಪಸಮಿತಿ ರಚಿಸಲಾಗಿದ್ದು ಎಲ್ಲಾ ಸಮಿತಿಯ ಕೆಲಸ ಕಾರ್ಯಗಳು ತುಂಬಾ ಚುರುಕಾಗಿ ನಡೆಯುತ್ತಿವೆ.

ದೀಪಾಲಂಕಾರ ಉಪಸಮಿತಿಯಿಂದ ನಗರದ ಎಲ್ಲಾ ರಸ್ತೆಯ ಇಕ್ಕೆಲಗಳ ಮರಗಳಿಗೆ ಬಣ್ಣ ಬಣ್ಣದ ದೀಪ ಅಳವಡಿಸಿ, ಕಣ್ಮನಗಳು ಕಂಗೊಳಿಸುವಂತೆ ಮಾಡುವಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಮೈಸೂರಿನ ಕಲಾಮಂದಿರದ ಎದುರಿಗಿರುವ ರಸ್ತೆಯಲ್ಲಿ ನಾಲ್ಕೈದು ಯುವಕರು ಭಾರಿ ಮರಗಳ ಮೇಲೆ ಹತ್ತಿ ದೀಪಾಲಂಕಾರ ಮಾಡುವ ಕೆಲಸದಲ್ಲಿ ನಿರತರಾಗಿದ್ದರು.

ಮರದ ಕೆಳಗೆ ರಾಜ್ಯ ಹೆದ್ದಾರಿ ಹಾದು ಹೋಗುತ್ತದೆ. ರಸ್ತೆಯಲ್ಲಿ ಕನಿಷ್ಠ ಒಂದು ನಿಮಿಷಕ್ಕೆ ಮೂವತ್ತರಿಂದ ನಲವತ್ತು ವಾಹನಗಳು ಸಂಚರಿಸುತ್ತವೆ.

ಇಂತಹ ಕಾರ್ಯದಲ್ಲಿ ಯಾವುದೇ ಸುರಕ್ಷತಾ ಕ್ರಮ ಕೈಗೊಂಡಿಲ್ಲ. ಅಕಸ್ಮಾತ್ತಾಗಿ ಎಚ್ಚರ ತಪ್ಪಿ ರಸ್ತೆ ಮೇಲೆ ಬಿದ್ದರೆ ಯಾರು ಇದರ ಹೊಣೆ ಹೊರುತ್ತಾರೆ? ಯುವಕರ ಕುಟುಂಬಕ್ಕೆ ಆಗುವ ನಷ್ಟಕ್ಕೆ ಸರ್ಕಾರ ಜವಾಬ್ದಾರಿಯಾಗುತ್ತದೆಯೇ? ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಇಂತಹ ಅಪಾಯಕಾರಿ ಕೆಲಸ ಮಾಡುತ್ತಿರುವ ಯುವಕರ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು. ಸಂಭ್ರಮ, ಸಡಗರ ಮತ್ತು ಅದ್ದೂರಿಯಾಗಿ ಆಚರಿಸುತ್ತಿರುವ ನಾಡಹಬ್ಬ ದಸರಾ ವೇಳೆ ಯಾರ ಬಾಳಲ್ಲೂ ಕತ್ತಲೆ ಆವರಿಸದಿರಲಿ

–ಚಂದ್ರು ಮಂಡ್ಯ, ರಂಗಕರ್ಮಿ, ಮೈಸೂರು

■ ಎಲ್ಲೆಂದರಲ್ಲಿ ಕಸ ಚೆಲ್ಲಬೇಡಿ



ಮಾನ್ಯರೆ,


ಮೈಸೂರು ನಗರದ ವಾರ್ಡ್ ನಂ 51 ಅಗ್ರಹಾರದ ಉತ್ತರಾದಿ ಮಠದ ರಸ್ತೆಯ ಪಕ್ಕದಲ್ಲಿ ಕಸದ ರಾಶಿಯೋ ರಾಶಿ. ಬಿಡಾಡಿ ದನಗಳು ಆ ಕಸವನ್ನು ಚೆಲ್ಲಾಪಿಲ್ಲಿ ಮಾಡಿ, ಗಬ್ಬು ನಾರುವಂತೆ ಮಾಡುತ್ತಿವೆ. ಈ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡು ತಿರುಗಾಡುವಂತಹ ಪರಿಸ್ಥಿತಿ ಎದುರಾಗಿದೆ. ಅಕ್ಕ ಪಕ್ಕದಲ್ಲಿರುವ ಮನೆಗಳಿಗೆ, ಶ್ರೀ ವಿದ್ಯಾ ಭಾರತಿ ಕಲ್ಯಾಣ ಮಂಟಪ, ಶ್ರೀ ಉತ್ತರಾದಿ ಮಠಕ್ಕೆ ದುರ್ವಾಸನೆಯು ಗಾಳಿಯ ಮೂಲಕ ಹರಡುತ್ತಿದ್ದು, ಇದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಗಳು ಹೆಚ್ಚಾಗಿವೆ. ಇದಲ್ಲದೆ ಇದರ ಪಕ್ಕದಲ್ಲಿ ಬಾಲ ಜಗತ್ ಶಾಲೆ ಮಕ್ಕಳು ವ್ಯಾಸಂಗ ಮಾಡುತ್ತಿದ್ದು, ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠವಿದ್ದು ನೂರಾರು ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ದುರ್ವಾಸನೆಯಿಂದ ಅನಾರೋಗ್ಯದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸ್ಥಳದಲ್ಲಿ ವಿದ್ಯುತ್ ಕಂಬಗಳಿದ್ದು, ಸಾರ್ವಜನಿಕರು ಮತ್ತು ದನಗಳಿಗೆ ಅಪಾಯ ಕಟ್ಟಿಟ್ಟಬುತ್ತಿ! ಆದ್ದರಿಂದ ಎಚ್ಚರಿಕೆಯಲ್ಲಿರುವುದು ಒಳ್ಳೆಯದು.

ಸ್ವಚ್ಛ ನಗರ ಎಂದೇ ಮೈಸೂರು ಪ್ರಖ್ಯಾತಿಯನ್ನು ಪಡೆದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಆ ಹೆಗ್ಗಳಿಕೆಯನ್ನು ಕಳೆದುಕೊಳ್ಳುತ್ತಿರುವುದು ಬೇಸರವೆನಿಸಿದೆ. ಸಾರ್ವಜನಿಕರಿಗೂ ಕೂಡ ಸ್ವಚ್ಛತೆಯ ಬಗ್ಗೆ ಅರಿವಿರಬೇಕು, ಸುತ್ತಮುತ್ತಲಿನ ನಿವಾಸಿಗಳು ಈ ಜಾಗಕ್ಕೆ ಕಸವನ್ನು ತಂದು ಹಾಕುತ್ತಾರೆ. ಪ್ರತಿದಿನ ಪೌರಕಾರ್ಮಿಕರು ಸ್ವಚ್ಛಗೊಳಿಸಿದರೂ ಮತ್ತೆ ಮತ್ತೆ ತಂದು ಹಾಕುತ್ತಾರೆ. ನಗರಪಾಲಿಕೆ ಜೊತೆಗೆ ಸಾರ್ವಜನಿಕರು ಕೂಡ ಸ್ವಚ್ಛತೆಯ ವಿಷಯದಲ್ಲಿ ಕೈಜೋಡಿಸಬೇಕು.

–ಪರಶಿವಮೂರ್ತಿ ಎನ್ ಪಿ, ನಂಜೀಪುರ. ಸರಗೂರು ತಾಲೂಕು.

■ ಕೇಜ್ರಿವಾಲ್ ರಾಜೀನಾಮೆಯ ಹೊಸ ರಾಜಕೀಯ ಪ್ರಹಸನ

ಮಾನ್ಯರೆ,



ಕಳೆದ ಆರು ತಿಂಗಳಿನಿಂದ ದೆಹಲಿಯ ವಿವಾದಾತ್ಮಕ ಅಬಕಾರಿ ನೀತಿ ಹಗರಣದಲ್ಲಿ ಜೈಲು ಪಾಲಾಗಿದ್ದ ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಸದರಿ ಪ್ರಕರಣದಲ್ಲಿ ಜಾಮೀನು ಪಡೆದು ಹೊರಬಂದ ನಂತರ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಜಾರಿ ನಿರ್ದೇಶನಾಲಯ ಅವರ ವಿರುದ್ಧ ಪ್ರಕರಣ ದಾಖಲಿಸಿ, ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನು ಸಲ್ಲಿಸಿತ್ತು. ತಾನು ರಾಜೀನಾಮೆ ನೀಡುವುದಿಲ್ಲ ಎಂದು ಒಂದೇ ಸಮನೆ ಹೇಳುತ್ತಾ ಬರುತ್ತಿದ್ದ ಹಾಗೂ ಜೈಲಿನಿಂದಲೇ ಆಡಳಿತ ನಡೆಸುತ್ತಿದ್ದ ಕೇಜ್ರಿವಾಲ್ ಅವರಿಗೆ ಕಡೆಗೂ ಜ್ಞಾನೋದಯವಾದಂತಿದೆ.

ಇದು ಜ್ಞಾನೋದಯವೋ ಅಥವಾ ಅವರ ಮತ್ತೊಂದು ರಾಜಕೀಯ ಪಟ್ಟೋ ಎಂದು ಹೇಳಲಿಕ್ಕೆ ಬಾರದು. ಏಕೆಂದರೆ, ದೆಹಲಿ ವಿಧಾನಸಭೆಗೆ ಬರುವ ನವಂಬರ್ ತಿಂಗಳಲ್ಲಿ ಚುನಾವಣೆ ಎದುರಾಗಲಿದ್ದು, ಚುನಾವಣೆಯಲ್ಲಿ ಮತದಾರರ ಅನುಕಂಪ ಗಳಿಸಲು ಕೇಜ್ರಿವಾಲ್ ರಾಜೀನಾಮೆ ನಾಟಕ ಆಡಿದ್ದಾರೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಡುತ್ತಾರೆ. ಅದು ನಿಜ ಕೂಡ ಇರಬಹುದು. ಅದೇನೇ ಇರಲಿ, ಅವರು ಈಗಲಾದರೂ ರಾಜೀನಾಮೆ ನೀಡಿ, ತಮ್ಮ ವ್ಯಕ್ತಿತ್ವಕ್ಕೆ ಬಳಿದಿದ್ದ ಮಸಿಯಿಂದ ಹೊರಬರಲು ಪ್ರಯತ್ನಿಸುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಫಲಕಾರಿಯಾಗುವುದೋ ಕಾಲವೇ ನಿರ್ಣಯಿಸಬೇಕು. ಒಟ್ಟಿನಲ್ಲಿ ತಡವಾಗಿಯಾದರೂ ರಾಜೀನಾಮೆ ನೀಡಿದ ಕ್ರೇಜಿವಾಲ್, ಅಲ್ಲಲ್ಲ ಕೇಜ್ರಿವಾಲ್ ಅವರಿಗೆ ಅಭಿನಂದನೆಗಳು.

–ಕೆ.ವಿ.ವಾಸು, ವಕೀಲರು, ನೋಟರಿ, ವಿವೇಕಾನಂದನಗರ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದ ಲಹರಿ

ಹಾ ಸವಿಗನ್ನಡ...!

ಕನ್ನಡ ಎಂದೊಡನೆ ಕವಿಗೆ ಕಿವಿ ನಿಮಿರುತ್ತದೆ, ಎದೆ ಕುಣಿದಾಡುತ್ತದೆ, ಮೈಮನ ಮರೆಯುತ್ತದೆ. ತಾಯಿನುಡಿಯ ಮೋಡಿಯೇ ಅಂತಹುದು. ಎಷ್ಟೇ ಭಾಷೆಗಳನ್ನು ಕಲಿಯಲಿ, ದೇಶ ವಿದೇಶಗಳನ್ನು ಸುತ್ತಿ ಬರಲಿ, ನಮ್ಮ ತಾಯಿನುಡಿ ಕಿವಿಗೆ ಬಿದ್ದಾಗ ಆಗುವ ರೋಮಾಂಚನವು ಬೇರೆಯೇ ರೀತಿಯದು. ನಮ್ಮ ನಾಡು, ನುಡಿ, ನೆಲ, ನದಿ, ಬೆಟ್ಟ ಗುಡ್ಡಗಳ ಬಗ್ಗೆ ಪ್ರೀತಿ ಬೆಳೆಸಿಕೊಂಡಿರುವವರಿಗೆ ಅದು ಅರ್ಥವಾದೀತು. ಮಗು ಮೊದಲು ಕಲಿಯುವ ಭಾಷೆಯೇ ಅದರ ತಾಯಿನುಡಿ. ತಾಯಿ ಮಗುವಿನೊಡನೆ ಲಲ್ಲೆಗರೆಯುತ್ತಾ ಅದರೊಡನೆ ಮಾತನಾಡುವ ಭಾಷೆಯು ಅದರ ಎದೆಯಲ್ಲಿಳಿದು, ಅದರ ಉಸಿರಿರುವವರೆಗೂ ಪ್ರೀತಿಯ ಬೆಸುಗೆಯನ್ನು ಬೆಸೆದಿರುತ್ತದೆ.



ಒಂದು ಭಾಷೆಯು ಬೆಳೆಯಬೇಕಾದರೆ ತನ್ನ ಸುತ್ತಮುತ್ತಲಿನ ಭಾಷೆಗಳಿಂದ ಹಲವು ಪದಗಳನ್ನು ಎರವಲು ಪಡೆದು, ಅದನ್ನು ಜೀರ್ಣಿಸಿಕೊಂಡು ತನ್ನದನ್ನಾಗಿ ಮಾಡಿಕೊಂಡು ಬೆಳೆಯುತ್ತದೆ ಎಂದು ಭಾಷಾ ತಜ್ಞರು ಅಭಿಪ್ರಾಯಪಡುತ್ತಾರೆ. ಮೂಲ ದ್ರಾವಿಡದಿಂದ ಹುಟ್ಟಿರುವ ಪಂಚ ದ್ರಾವಿಡ ಭಾಷೆಗಳೂ ಇದಕ್ಕೆ ಹೊರತಲ್ಲ. (ಕನ್ನಡ, ತಮಿಳು, ತೆಲುಗು, ಮಲಯಾಳಂ ಮತ್ತು ತುಳು). ಈ ಎಲ್ಲದರ ಮೇಲೆ ಸಂಸ್ಕೃತದ ಪ್ರಭಾವ ದಟ್ಟವಾಗಿದೆ. ಅಚ್ಚ ಕನ್ನಡದ ಶಬ್ದಗಳನ್ನು ಹುಡುಕುತ್ತಾ ಹೊರಟರೆ, ನಮಗೆ ಅಚ್ಚರಿ ಕಟ್ಟಿಟ್ಟಬುತ್ತಿ. ಸಂಸ್ಕೃತದ ಪದಗಳನ್ನು ಬಳಸದೆ, ಅಪ್ಪಟ ಕನ್ನಡದಲ್ಲಿಯೇ ಕಾವ್ಯ ರಚಿಸುತ್ತೇನೆಂದು ಹೊರಟ ಕನ್ನಡ ಪ್ರೇಮಿ ಕವಿಗಳೂ ಸಹ ಅಲ್ಲಲ್ಲಿ ಎಡವಿರುವುದು ಉಂಟು. (ಉದಾ: ಆಂಡಯ್ಯ). ಬೇರೆ ಬೇರೆ ಭಾಷೆಗಳ ಪದಗಳನ್ನು ಅದೆಷ್ಟರ ಮಟ್ಟಿಗೆ ಜೀರ್ಣಿಸಿಕೊಂಡು ಅದು ತಮ್ಮದೇ ಎನ್ನುವಂತೆ ಬಳಸಿರುವ ಕವಿಗಳೂ ಉಂಟು. ಉದಾಹರಣೆಗೆ ಕುಮಾರವ್ಯಾಸ ಎಂಬ ದೈತ್ಯ ಪ್ರತಿಭಾವಂತ ಕವಿ. ಅವನ ಭಾಷಾ ಪಾಂಡಿತ್ಯ ಎನ್ನಿ, ಪದಗಳ ಬಾಹುಳ್ಯ ಎನ್ನಿ, ಅದಂತೂ ವಿಮರ್ಶಕರಿಗೆ, ಪಂಡಿತರಿಗೆ ಆಶ್ಚರ್ಯವನ್ನು ಉಂಟುಮಾಡಿರುವುದರಲ್ಲಿ ಎರಡು ಮಾತಿಲ್ಲ. ಅವನು ಅಪ್ಪಟ ಕನ್ನಡದ ಗ್ರಾಮ್ಯ ಪದಗಳನ್ನು ಬಳಸಿರುವಷ್ಟೇ ಸಲೀಸಾಗಿ ವಿದೇಶೀ ಮೂಲದ ಪದಗಳನ್ನು ಬಳಸಿರುವುದನ್ನೂ ವಿಮರ್ಶಕರು ಗುರುತಿಸಿದ್ದಾರೆ. ವಿದುರನ ಮನೆಗೆ ಶ್ರೀಕೃಷ್ಣನು ಬಂದಾಗ, ಜೇವಣಾವಾಯಿತೆ ಭಾವಾ? ಎನ್ನುತ್ತಾನೆ. ಮರಾಠಿಯಲ್ಲಿ ಜೇವಣ್ ಎಂದರೆ ಊಟ. ಅದು ತಮ್ಮದೇ ಪದ ಎನ್ನುವಂತೆ ಕುಮಾರವ್ಯಾಸ ಬಳಸಿಬಿಡುತ್ತಾನೆ! ಮತ್ತೊಮ್ಮೆ ಬ್ಯಾನಿ ಬಂದಿತ್ತೇನು? ಎಂಬ ಗ್ರಾಮ್ಯ ಭಾಷೆಯನ್ನು ಬಳಸುತ್ತಾನೆ. ನಮ್ಮಲ್ಲಿ ರೋಗ ಬಂದಿತ್ತಾ? ಎನ್ನುವುದು ಉತ್ತರ ಕರ್ನಾಟಕದ ಕಡೆ ಬ್ಯಾನಿ ಬಂದಿತ್ತೇನು? ಎಂದಾಗುತ್ತದೆ. ಕುಮಾರವ್ಯಾಸ ಗದಗ-ಕೋಳಿವಾಡದವನು. ಅದನ್ನು ಸಹಜವಾಗಿಯೇ ಬಳಸುತ್ತಾನೆ.

> “ಈಗಾಗಲೇ ಇಂಗ್ಲಿಷ್ ಪ್ರಭಾವ ಕನ್ನಡದ ಮೇಲೆ ಅನಿವಾರ್ಯ ಎನ್ನುವಷ್ಟರ ಮಟ್ಟಿಗೆ ಆಗಿದೆ–ಆಗುತ್ತಿದೆ. ಅವುಗಳ ಮಧ್ಯೆ ತಾಯಿನುಡಿಯ ಸವಿಯನ್ನು–ಸೊಬಗನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ, ಅದರ ಬಗ್ಗೆ, ಅದರ ಹಿಂದಿನ ರೂಪಗಳ ಬಗ್ಗೆ ಅವರಲ್ಲಿ ಕುತೂಹಲ ಮೂಡಿಸಲೇಬೇಕಾದ ಅನಿವಾರ್ಯತೆಯನ್ನು ಕಲಿಸುವವರು ಅರ್ಥ ಮಾಡಿಕೊಂಡರೆ ಒಳಿತು. ಇಲ್ಲವಾದಲ್ಲಿ ಕನ್ನಡ ಭಾಷೆ ಕೇವಲ ಕ್ರಿಯಾಪದಗಳಿಗಷ್ಟೇ ಸೀಮಿತವಾಗಿ ಬಿಡುವ ಅಪಾಯ ಇದೆ.

ಕರ್ನಾಟಕ ಒಂದೇ, ಆಡುವ ಭಾಷೆ ಒಂದೇ ಕನ್ನಡ. ಆದರೂ ಅದರಲ್ಲಿ ಅದೆಷ್ಟು ಬಗೆಗಳನ್ನು ಗುರುತಿಸಬಹುದು! ಬಯಲುಸೀಮೆಯ ಕನ್ನಡ ಒಂದು ರೀತಿ, ಉತ್ತರ ಕರ್ನಾಟಕದ ಗಂಡುಭಾಷೆ, ಉಡುಪಿ, ಕುಂದಾಪುರದಲ್ಲಿ ಒಂದು ಸೊಗಸಾದರೆ, ಮಂಗಳೂರಿನದೇ ಒಂದು ಚಂದ. ಮೈಸೂರಿನ ಸುತ್ತಮುತ್ತಲನ್ನೇ ತೆಗೆದುಕೊಳ್ಳಿ. ನಂಜನಗೂಡು ಕನ್ನಡ ಒಂದು ಬಗೆ. ಮಂಡ್ಯದ ಭಾಷೆಯ ಸೊಗಡೇ ಬೇರೆ. ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಕನ್ನಡವನ್ನು ದುರ್ಬೀನಿನಲ್ಲಿ ಹುಡುಕಬೇಕೆಂಬುದು ಕಟು ವಾಸ್ತವ. ಉತ್ತರ ಕರ್ನಾಟಕದಲ್ಲಿ ಬೆಂಗಳೂರಿನಷ್ಟು ಇಂಗ್ಲಿಷ್ ಪ್ರಭಾವ ಇಲ್ಲದಿದ್ದರೂ ಅದರಲ್ಲಿ ಹತ್ತು ಹಲವು ಮರಾಠಿಯ ಪದಗಳನ್ನು ಗುರುತಿಸಬಹುದು. ನನ್ನ ಗೆಳತಿ ಒಬ್ಬಳು ಬೆಂಗಳೂರಿನಿಂದ ಮೈಸೂರಿನ ಕಾಲೇಜು ಒಂದರ ಪ್ರಾಂಶುಪಾಲಳಾಗಿ ಆಯ್ಕೆಗೊಂಡು ಬಂದಿದ್ದಳು. ಒಂದು ವಾರದ ನಂತರ ಅವಳ ಭೇಟಿ ಆದಾಗ ಅವಳ ಅಚ್ಚರಿಯ ಮಾತುಗಳು ಏನೇ ಇಲ್ಲಿ ಕಾಲೇಜಿನಲ್ಲಿ, ಕ್ಲಾಸಿನಲ್ಲಿ ಎಲ್ಲರೂ ಕನ್ನಡವನ್ನೇ ಮಾತನಾಡುತ್ತಾರೆ ಎಂಬುದು. ನಾವಿಬ್ಬರೂ ಬೆಂಗಳೂರಿನ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಲ್ಲಿ ಜೊತೆಯಾಗಿ ಕೆಲಸ ಮಾಡಿದ್ದೆವು. ಅಲ್ಲಿ ಮಕ್ಕಳು ತಿನ್ನುವುದು, ಕುಡಿಯುವುದು, ಅಳುವುದು, ನಗುವುದು ಎಲ್ಲಾ ಇಂಗ್ಲೀಷಿನಲ್ಲಿಯೇ ಆಗುತ್ತಿದ್ದ ವಾತಾವರಣವಿತ್ತು. ಅಲ್ಲಿ ಬೆಲ್ ರಿಂಗಾಗುತ್ತಿತ್ತು, ಬೇರೆಯವರು ಟಾಕ್ ಮಾಡುತ್ತಿದ್ದರು, ಒಬ್ಬರು ಮತ್ತೊಬ್ಬರಿಗೆ ಹಿಟ್ ಮಾಡುತ್ತಿದ್ದರು, ಪಿಂಚ್ ಮಾಡುತ್ತಿದ್ದರು. ಹೀಗಾಗಿ ಮೈಸೂರಿನ ಸ್ವಚ್ಛಂದ ಕನ್ನಡವನ್ನು ಕೇಳಿ ಅವಳಿಗೆ ನಿಧಿ ಸಿಕ್ಕಷ್ಟು ಸಂತೋಷ! ನಿಜ, ಮೈಸೂರಿನಲ್ಲಿ ಕನ್ನಡವನ್ನು ಯಾವ ಹಿಂಜರಿಕೆಯೂ ಇಲ್ಲದೆ ಮಾತನಾಡುತ್ತಾರೆ, ಅದೇ ಸಂತೋಷ.

ಬೆಂಗಳೂರಿನ ಕನ್ನಡಿಗರಿಗೆ ಇಂಗ್ಲಿಷ್ ಭೂತ ಹಿಡಿದುಬಿಟ್ಟಿದೆ. ಅವರು ಟಾಕ್ ಮಾಡುವುದು, ರೀಡ್ ಅಂಡ್ ರೈಟ್ ಮಾಡುವುದು, ಸ್ಮೈಲ್ ಮಾಡುವುದು ಎಲ್ಲಾ ಇಂಗ್ಲಿಷಿನಲ್ಲಿಯೇ. ಅವರಿಗೆ ದೊಡ್ಡ ಮೆಣಸಿನಕಾಯಿ, ಹುರುಳಿಕಾಯಿ, ಹಸಿಮೆಣಸಿನಕಾಯಿ ಮುಂತಾದವುಗಳು ಗೊತ್ತೇ ಇಲ್ಲ. ಅವರಿಗೆ ಗೊತ್ತಿರುವುದು ಬೆಲ್ ಪೆಪ್ಪರ್ (ಕ್ಯಾಪ್ಸಿಕಮ್) ಬೀನ್ಸ್, ಗ್ರೀನ್ ಚಿಲ್ಲಿ ಇತ್ಯಾದಿ. ಅವರ ಮನೆಗೆಲಸದವಳೂ ಮನೆಯನ್ನು ಕ್ಲೀನಾಗಿ ಡಸ್ಟ್, ಮಾಪ್ ಮಾಡುತ್ತಾಳೆ, ರಜೆ ಬೇಕಾದಲ್ಲಿ ಲೀವ್ ಹಾಕುತ್ತಾಳೆ. ಯಾವುದಾದರೂ ಮಾಲ್ಗಳಿಗೆ ಹೋಗಿ, ಅಲ್ಲಿ ನಿಮಗೆ ತೂರ್ ದಾಲ್, ರೆಡ್ ಚಿಲ್ಲಿ, ಕೊರಿಯಾಂಡರ್, ಮೂಂಗ್ ದಾಲ್ ಮುಂತಾದುವು ಆರಾಮವಾಗಿ ಸಿಗುತ್ತದೆ. ಅವನ್ನೇ ಕನ್ನಡದಲ್ಲಿ ಕೇಳಿ, ನಿಮ್ಮನ್ನು ಅಲ್ಲಿ ಕೆಲಸ ಮಾಡುವ ಹುಡುಗಿ ಪಿಳಪಿಳನೆ ನೋಡುವುದು ಖಂಡಿತ. ತಂದೆ-ತಾಯಿಗಳಲ್ಲಿ ಇಲ್ಲದ ಕನ್ನಡ ಪ್ರೇಮ ಮಕ್ಕಳಲ್ಲಿ ಹುಡುಕುವುದು ಅದೆಷ್ಟು ಸರಿ?

ನಾವು ಕ್ರಮೇಣ ಅದೆಷ್ಟು ಕನ್ನಡ ಪದಗಳನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬುದರ ಪರಿವೆಯೇ ನಮಗೆ ಇಲ್ಲ. ನಮ್ಮ ಐದು ಬೆರಳುಗಳನ್ನು ಏನೆಂದು ಕರೆಯುತ್ತೇವೆ ಕೆಂಡ, ಹಂಡೆ, ಒಲೆಯುರಿ, ಒಗ್ಗರಣೆ, ಸೇತುವೆ, ಹುಣ್ಣಿಮೆ, ತಂಗಾಳಿ, ಬೆಳದಿಂಗಳು, ಕರವಸ್ತ್ರ, ಅಂಗಿ, ದಾವಣಿ, ಸಗಣಿ, ಬೆರಣಿ(ಕುಳ್ಳು), ಹಾಲು ಕರೆಯುವುದು, ಬಚ್ಚಲುಮನೆ, ಪಡಸಾಲೆ, ಸಂದಿ, ಹೀಗೆ ಅದೆಷ್ಟೋ ಪದಗಳು ನಮ್ಮ ಎದುರಿಗೇ ಕಣ್ಮರೆ ಆಗುತ್ತಿವೆ. ಅದನ್ನು ಹತಾಶರಾಗಿ ನೋಡುತ್ತಾ ಕೂರಬೇಕೆ ಅಥವಾ ನಮ್ಮ ಕೈಲಾದಷ್ಟು ಅವನ್ನು ಉಳಿಸಿಕೊಳ್ಳುವ ಯತ್ನ ಮಾಡಬೇಕೇ ನಿಮಗೆ ಬಿಟ್ಟದ್ದು. ಮಕ್ಕಳಿಗೆ ಭಾಷೆಯ ಶುದ್ಧರೂಪವನ್ನು ತಿಳಿಯಪಡಿಸುವುದೂ ಹಿರಿಯರ-ಶಿಕ್ಷಕರ ಜವಾಬ್ದಾರಿ. ಇಲ್ಲವಾದಲ್ಲಿ ಈಗಾಗಲೇ ದೂರದರ್ಶನ, ಫಲಕಗಳಲ್ಲಿ ಕಂಡುಬರುತ್ತಿರುವ ಬಾರತ, ಎಮ್ಮೆ (ಹೆಮ್ಮೆ), ಬಾಗ್ಯ, ಎಸರು(ಹೆಸರು), ಹೆಲೆ(ಎಲೆ), ಗೋಳುಯ್ಕೊ (ಗೋಳು ಹುಯ್ದುಕೊ) ಇಂಥವೇ ಸರಿಯಾದ ರೂಪಗಳೆಂದು ಭಾವಿಸಿಕೊಳ್ಳುವ ಅಪಾಯ ಇದ್ದೇ ಇದೆ. ಮೊದಲು ಹೇಳಿಕೊಡುವವರು ಶುದ್ಧ ರೂಪಗಳನ್ನು ಅರಿತಿರಬೇಕು. ಅಂದರೆ ಮಕ್ಕಳು ಸರಿಯಾದ ಪದಗಳನ್ನು ಪರಿಚಯ ಮಾಡಿಕೊಳ್ಳಲು ಸಾಧ್ಯ.

ಈಗಾಗಲೇ ಇಂಗ್ಲಿಷ್ ಪ್ರಭಾವ ಕನ್ನಡದ ಮೇಲೆ ಅನಿವಾರ್ಯ ಎನ್ನುವಷ್ಟರಮಟ್ಟಿಗೆ ಆಗಿದೆ-ಆಗುತ್ತಿದೆ. ಅವುಗಳ ಮಧ್ಯೆ ತಾಯಿನುಡಿಯ ಸವಿಯನ್ನು-ಸೊಬಗನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ, ಅದರ ಬಗ್ಗೆ, ಅದರ ಹಿಂದಿನ ರೂಪಗಳ ಬಗ್ಗೆ ಅವರಲ್ಲಿ ಕುತೂಹಲ ಮೂಡಿಸಲೇಬೇಕಾದ ಅನಿವಾರ್ಯತೆಯನ್ನು ಕಲಿಸುವವರು ಅರ್ಥ ಮಾಡಿಕೊಂಡರೆ ಒಳಿತು. ಇಲ್ಲವಾದಲ್ಲಿ ಕನ್ನಡ ಭಾಷೆ ಕೇವಲ ಕ್ರಿಯಾ ಪದಗಳಿಗಷ್ಟೇ ಸೀಮಿತವಾಗಿ ಬಿಡುವ ಅಪಾಯ ಇದೆ.

ದೆಹಲಿಯ 3ನೇ ಮಹಿಳಾ ಮುಖ್ಯಮಂತ್ರಿಯಾಗಿ ಅತಿಶಿ ಪದಗ್ರಹಣ



ನವದೆಹಲಿ: ಹಿರಿಯ ಎಎಪಿ ಶಾಸಕಿ ಅತಿಶಿ ದೆಹಲಿಯ ಮುಖ್ಯಮಂತ್ರಿಯಾಗಿ ರಾಜ್ ನಿವಾಸದಲ್ಲಿ ಇಂದು ಪದಗ್ರಹಣ ಮಾಡಿದರು. ಅವರು ಐವರು ಸಂಪುಟದ ಸಹೋದ್ಯೋಗಿಗಳು ಕೂಡಾ ಪ್ರಮಾಣ ವಚನ ಸ್ವೀಕರಿಸಿದರು. ಸುಷ್ಮಾ ಸ್ವರಾಜ್, ಶೀಲಾ ದೀಕ್ಷಿತ್ ನಂತರ ಅತಿಶಿ ದೆಹಲಿಯ 3ನೇ ಸಿಎಂ ಆಗಿದ್ದಾರೆ. ಮಮತಾ ಬ್ಯಾನರ್ಜಿ ನಂತರ ಎರಡನೇ ಹಾಲಿ ಮಹಿಳಾ ಮುಖ್ಯಮಂತ್ರಿಯಾಗಿದ್ದಾರೆ.

ಸಾತಂತ್ರ ಬಂದಾಗಿನಿಂದ ದೇಶದ 17 ಮಹಿಳಾ ಮುಖ್ಯಮಂತ್ರಿಯಾಗಿದ್ದಾರೆ. ಅತಿಶಿ ಸಂಪುಟದಲ್ಲಿ ಸುಲ್ತಾನ್ ಮಿರ್ಜಾ ಕ್ಷೇತ್ರ ಶಾಸಕ ಮುಕೇಶ್ ಅಹ್ಲಾವಾತ್ ಹೊಸಬರಾಗಿದ್ದಾರೆ. ಗೋಪಾಲ್ ರೈ, ಕೈಲಾಶ್ ಗೆಹ್ಲೋಟ್, ಸೌರಾಬ್ ಭಾರದ್ವಾಜ್ ಮತ್ತು ಇಮ್ರಾನ್ ಹುಸೈನ್ ಅವರೊಂದಿಗೆ 4 ಸಚಿವರೊಂದಿಗೆ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ.

ಅರವಿಂದ್ ಕೇಜ್ರಿವಾಲ್ ರಾಜೀನಾಮೆ ಹಿನ್ನಲೆಯಲ್ಲಿ ಸರಳವಾಗಿ ಪದ ಗ್ರಹಣ ಸಮಾರಂಭ ನಡೆಯಿತು. ಸೆಪ್ಟೆಂಬರ್ 26–27 ರಂದು ಎರಡು ದಿನ ದೆಹಲಿ ವಿಧಾನಸಭೆಯ ವಿಶೇಷ ಅಧಿವೇಶನವನ್ನು ಆಡಳಿತರೂಢ AAP ಕರೆದಿದ್ದು, ನೂತನವಾಗಿ ಆಯ್ಕೆಯಾಗಿರುವ ಮುಖ್ಯಮಂತ್ರಿ ಬಹುಮತವನ್ನು ಸಾಬೀತುಪಡಿಸಲಿದ್ದಾರೆ. ಪ್ರಮಾಣ ವಚನ ಸ್ವೀಕಾರಕ್ಕೂ ಮುನ್ನಾ, ಅತಿಶಿ, ಕೇಜ್ರಿವಾಲ್ ನಿವಾಸಕ್ಕೆ ಮಾತುಕತೆಗಾಗಿ ತೆರಳಿದಿದ್ದರು. ಬಳಿಕ ಅತಿಶಿ ಮತ್ತಿತರ ಸಚಿವರು, ಪಕ್ಷದ ರಾಷ್ಟ್ರೀಯ ಸಂಚಾಲಕರೊಂದಿಗೆ ರಾಜ್ ನಿವಾಸಕ್ಕೆ ತೆರಳಿದರು.

ದೆಹಲಿ ಕ್ಯಾಬಿನೆಟ್ ಮುಖ್ಯಮಂತ್ರಿ ಸೇರಿದಂತೆ ಗರಿಷ್ಠ 7 ಸಚಿವರನ್ನು ಹೊಂದಬಹುದು. ಆದರೆ, ಎಎಪಿ ಇಲ್ಲಿಯವರೆಗೂ 6 ಸಚಿವರನ್ನು ಮಾತ್ರ ಹೆಸರಿಸಿದೆ. ಏಳನೇ ಸಚಿವರ ಹೆಸರನ್ನು ಇನ್ನೂ ಘೋಷಿಸಿಲ್ಲ. ಆರಂಭದಲ್ಲಿ ಅತಿಶಿ ಮಾತ್ರ ಪ್ರಮಾಣವಚನ ಸ್ವೀಕರಿಸಬೇಕೆಂದು AAP ನಿರ್ಧರಿಸಿತ್ತು. ಆದರೆ ತದನಂತರ ಅವರ ಮಂತ್ರಿಮಂಡಲವೂ ಪ್ರಮಾಣವಚನ ಸ್ವೀಕರಿಸಲಿದೆ ಎಂದು ಹೇಳಲಾಯಿತು.

ದಲಿತ ಸಮುದಾಯಕ್ಕೆ ಸೇರಿದ ಅಹ್ಲಾವತ್ ಮೊದಲ ಬಾರಿಗೆ ಶಾಸಕರಾಗಿದ್ದು, ಸಮಾಜ ಕಲ್ಯಾಣ ಸಚಿವ ರಾಜ್ ಕುಮಾರ್ ಆನಂದ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಅವರು ಸೇರ್ಪಡೆಯಾಗಿದ್ದಾರೆ. ಆನಂದ್ ಏಪ್ರಿಲ್‌ನಲ್ಲಿ ಕೇಜ್ರಿವಾಲ್ ಸರ್ಕಾರ ಮತ್ತು ಎಎಪಿಗೆ ರಾಜೀನಾಮೆ ನೀಡಿದ್ದರು. ತರುವಾಯ 2024ರ ಲೋಕಸಭೆ ಚುನಾವಣೆಗೂ ಮುನ್ನಾ ಬಿಜೆಪಿ ಸೇರಿದ್ದರು. ಅಹ್ಲಾವಾತ್ ಪ್ರಸ್ತುತ ಪಕ್ಷದ ರಾಜಸ್ಥಾನ ಘಟಕದ ಸಹ-ಪ್ರಭಾರಿಯಾಗಿದ್ದಾರೆ.

ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಹವಣಿಸುತ್ತಿರುವ ಎಎಪಿಗೆ ನಿರ್ಣಾಯಕ ಘಟ್ಟದಲ್ಲಿ ಅತಿಶಿ ಮುಖ್ಯಮಂತ್ರಿಯಾಗಿದ್ದು, ಸಾರ್ವಜನಿಕರ ಕಲ್ಯಾಣಕ್ಕಾಗಿ ಬಾಕಿ ಉಳಿದಿರುವ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಬೇಕಾದ ಹೊಣೆ ಅವರ ಮೇಲಿದೆ.

ಶಾಸಕ ಮುನಿರತ್ನ ವಿರುದ್ಧದ ಕೇಸ್‌ಗಳ ತನಿಖೆಗೆ ಎಸ್‌ಐಟಿ ರಚನೆ

ಬೆಂಗಳೂರು, ಸೆ.21– ಬೆಂಗಳೂರಿನ ಆರ್.ಆರ್.ನಗರ ಬಿಜೆಪಿ ಶಾಸಕ ಮುನಿರತ್ನ ವಿರುದ್ಧದ ಪ್ರಕರಣಗಳ ತನಿಖೆಗೆ ಬಿ.ಕೆ.ಸಿಂಗ್ ನೇತೃತ್ವದಲ್ಲಿ ಎಸ್‌ಐಟಿ ರಚನೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಜಾತಿ ನಿಂದನೆ, ಜೀವ ಬೆದರಿಕೆ ಎರಡು ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದ ಶಾಸಕ ಮುನಿರತ್ನರನ್ನು ನಿನ್ನೆ ಮತ್ತೆ ಪೊಲೀಸರು ಅತ್ಯಾಚಾರ ಆರೋಪದಲ್ಲಿ ಬಂಧಿಸಿದ್ದರು. ಶಾಸಕ ಮುನಿರತ್ನ ಜಾತಿ ನಿಂದನೆ ಕೇಸ್‌ನಲ್ಲಿ ನಿಟ್ಟುಸಿರು ಬಿಟ್ಟಿದ್ದರು. ವಂಚನೆ ಪ್ರಕರಣದಲ್ಲೂ ಬಚಾವ್ ಆಗಿದ್ದರು. ಎರಡೆರಡು ಕೇಸ್‌ಗಳಲ್ಲಿ ಜಾಮೀನು ಕೂಡ ಸಿಕ್ಕಿತ್ತು.

ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಆಶ್ರಯದ 136ನೇ ಸಾಂಸ್ಕೃತಿಕ ಕಾರ್ಯಕ್ರಮ

ಗೆಜ್ಜೆ ನಾದದೊಂದಿಗೆ ಕಣ್ಮನ ಸೆಳೆದ ಭರತನಾಟ್ಯ

ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಶಿಷ್ಯವೃಂದದ ಅಮೋಘ ನಾಟ್ಯ ಪ್ರದರ್ಶನ





ಮೈಸೂರಿನ ಬಿವಿಬಿಯಲ್ಲಿ ಶನಿವಾರ ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಶಿಷ್ಯ ವೃಂದದ ಭರತನಾಟ್ಯ ಕಾರ್ಯಕ್ರಮ ಉದ್ಘಾಟಿಸಲಾಯಿತು. (ಎಡದಿಂದ–ನಿಂತವರು) ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್, ಬಿವಿಬಿ ಮೈಸೂರು ಕೇಂದ್ರದ ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಉಪಾಧ್ಯಕ್ಷ ಪ್ರೊ.ಸಿ.ನಾಗಣ್ಣ, ಆಡಳಿತ ಮಂಡಳಿ ಸದಸ್ಯರಾದ ಡಾ.ನಾಗಲಕ್ಷ್ಮೀ ನಾಗರಾಜನ್, ಡಾ.ಗಂಗಾಧರ್, ವೈಷ್ಣವಿ ನಾಟ್ಯಶಾಲಾದ ಸಂಸ್ಥಾಪಕ ನಾಟ್ಯಾಚಾರ್ಯ ಮಿಥುನ್‌ಶ್ಯಾಮ್ ಹಾಗೂ (ಕುಳಿತವರು) ನಾಟ್ಯಾಚಾರ್ಯ ಮಿಥುನ್‌ಶ್ಯಾಮ್ ಶಿಷ್ಯವೃಂದವನ್ನು ಚಿತ್ರದಲ್ಲಿ ಕಾಣಬಹುದು. ಮತ್ತೊಂದು ಚಿತ್ರದಲ್ಲಿ ನಾಟ್ಯಾಚಾರ್ಯ ಮಿಥುನ್‌ಶ್ಯಾಮ್ ಶಿಷ್ಯವೃಂದ ಪ್ರದರ್ಶಿಸಿದ ಭರತನಾಟ್ಯವನ್ನು ಕಾಣಬಹುದು

ಮೈಸೂರು,ಸೆ.21(ಪಿಎಂ)– ಶಾಸ್ತ್ರೀಯ ಸಂಗೀತ ಮತ್ತು ಅದರ ಸಾಹಿತ್ಯಕ್ಕೆ ಪೂರಕವಾಗಿ ಹೆಜ್ಜೆಹಾಕಿದ ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಅವರ ಶಿಷ್ಯವೃಂದ ತಮ್ಮ ಭರತನಾಟ್ಯ ಪ್ರದರ್ಶನದ ಮೂಲಕ ಪ್ರೇಕ್ಷಕರ ಕಣ್ಮನ ತಣಿಸುವಲ್ಲಿ ಯಶಸ್ವಿಯಾಯಿತು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾ ಭವನದ (ಬಿವಿಬಿ) ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು –ಮೈಸೂರು ಕೇಂದ್ರಗಳ ಜಂಟಿ ಆಶ್ರಯದ 136ನೇ ಸಾಂಸ್ಕೃತಿಕ ಕಾರ್ಯಕ್ರಮದಡಿ ಶನಿವಾರ ಆಯೋಜಿಸಿದ್ದ ನಾಟ್ಯಾಚಾರ್ಯ ಮಿಥುನ್ ಶ್ಯಾಮ್ ಶಿಷ್ಯ ವೃಂದದ ಭರತನಾಟ್ಯ ಪ್ರದರ್ಶನಕ್ಕೆ ಪ್ರೇಕ್ಷಕರು ಮನಸೋತರು.

ವೈಷ್ಣವಿ ನಾಟ್ಯಶಾಲಾದ ಸಂಸ್ಥಾಪಕರು ಹಾಗೂ ನಿರ್ದೇಶಕ ನಾಟ್ಯಾಚಾರ್ಯ ಮಿಥುನ್‌ಶ್ಯಾಮ್ ಅವರು ನೃತ್ಯ ಸಂಯೋಜನೆಯಲ್ಲಿ ಅವರ ಶಿಷ್ಯರಾದ ಕು.ಅನನ್ಯಾ ಸಂತೋಷ್, ಕು.ಗಾಯತ್ರಿ ಗುರುಪ್ರಸಾದ್, ಕು.ಕಾವ್ಯ ಕಾಶಿನಾಥನ್, ಕು.ಸಾಕ್ಷಿ ಅಶೋಕ್, ಚಿ.ಹರ್ಷವರ್ಧನ್ ಕೆ, ಚಿ.ಶಶಾಂಕ್ ಕಿರಣ್ ನಾಯರ್ ಅವರು ತಮ್ಮ ಲಯಬದ್ಧ ನರ್ತನದ ಮೂಲಕ ಶಾಸ್ತ್ರೀಯ ಸಂಗೀತದ ಸಾಹಿತ್ಯದಲ್ಲಿರುವ ಸಂಗತಿಯನ್ನು ನೃತ್ಯದ ಮೂಲಕ ಅನಾವರಣಗೊಳಿಸುವಲ್ಲಿ ಸಫಲರಾದರು.

'ಶ್ರೀ' ರಾಗ ಮತ್ತು 'ಆದಿ' ತಾಳ ಒಳಗೊಂಡ ತ್ಯಾಗರಾಜರ ರಚನೆಯ 'ಎಂದರೋ ಮಹಾನುಭಾವಲು' ಶಾಸ್ತ್ರೀಯ ಸಂಗೀತಕ್ಕೆ (ತೆಲುಗು ಭಾಷೆ) ಹೆಜ್ಜೆ ಹಾಕಿದ ವೈಷ್ಣವಿ ನಾಟ್ಯಶಾಲಾದ ಕಲಾವಿದರ ತಂಡವು, ಭಾರತವು ಜ್ಞಾನ ಮತ್ತು ಸಂಸ್ಕೃತಿಯಲ್ಲಿ ಶ್ರೀಮಂತವಾಗಿದೆ. ಈ ಪುಣ್ಯಭೂಮಿಯಲ್ಲಿ ಅನೇಕ ಮಹಾನುಭಾವರು ಜನ್ಮತಾಳಿ ದೈವತ್ವ ಪಡೆದು ಸಮಾಜಕ್ಕೆ ದಾರಿ ದೀಪವಾಗಿದ್ದಾರೆ ಎಂಬ ಸಂದೇಶವನ್ನು ತಮ್ಮ ನೃತ್ಯದ ಭಾವ-ಭಂಗಿ ಮತ್ತು ಮುದ್ರೆಯಲ್ಲಿ ಅನಾವರಣಗೊಳಿಸಿದರು.

ನಂತರ ಪದ್ಮಚರಣ್ ಅವರ ರಚನೆಯ 'ಶೃಂಗಪುರಧೀಶ್ವರಿ ಶಾರದೆ' ಗೀತೆಗೆ ಹೆಜ್ಜೆ ಹಾಕಿದರು. ಕಲ್ಯಾಣಿ ರಾಗ ಮತ್ತು ಆದಿ ತಾಳವನ್ನು ಈ ಶಾಸ್ತ್ರೀಯ ಗೀತೆ ಒಳಗೊಂಡಿದ್ದು, ಅದಕ್ಕೆ ಪೂರಕವಾಗಿ ಭರತನಾಟ್ಯ ಪ್ರದರ್ಶಿಸಿ, ಶಾರದ ದೇವಿಯ ಸ್ತುತಿಯ ದೃಶ್ಯಾವಳಿಯನ್ನು ನೃತ್ಯದಲ್ಲಿ ಮೂಡಿಸಿದರು. ಬಳಿಕ 'ಮಹಾದೇವ ಶಿವ ಶಂಭೋ' ಗೀತೆಗೆ ಹೆಜ್ಜೆಹಾಕಿದರು. ತಂಜಾವೂರು ಶಂಕರ ಅಯ್ಯರ್ ಅವರು ಸಂಸ್ಕೃತದಲ್ಲಿ ಈ ಗೀತೆ ರಚಿಸಿದ್ದು, ಇದು 'ರೇವತಿ' ರಾಗ ಮತ್ತು ಆದಿ ತಾಳವನ್ನು ಒಳಗೊಂಡಿದೆ. ಈ ಗೀತೆಗೆ ಹೆಜ್ಜೆ ಹಾಕಿದ ಕಲಾವಿದರು, ಶಿವನ ನೃತ್ಯವನ್ನು ಅನಾವರಣಗೊಳಿಸಿ, ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿದರು.

ಸಂಸ್ಕೃತ ಭಾಷೆಯಲ್ಲಿ ತ್ಯಾಗರಾಜರು ರಚಿಸಿರುವ 'ಜಗದಾನಂದಕಾರಕ ಜಯ ಜಾನಕಿ ಪ್ರಾಣ ನಾಯಕ' ಶಾಸ್ತ್ರೀಯ ಗೀತೆಗೆ ನೃತ್ಯ ಪ್ರದರ್ಶಿಸಿದರು. 'ಆದಿ' ತಾಳದಲ್ಲಿರುವ ಈ ಗೀತೆಯು ನೈಟ್ಟೆ ರಾಗದಲ್ಲಿದ್ದು, ಶ್ರೀರಾಮನ ಹಿರಿಮೆಯನ್ನು ಈ ಗೀತೆಯ ಸಾಹಿತ್ಯ ಹೊಂದಿದ್ದು, ಕಲಾವಿದರು ತಮ್ಮ ನೃತ್ಯದಲ್ಲಿ ಶ್ರೀರಾಮನ ಗುಣಗಾನ ಮಾಡಿದರು. ಆ ಮೂಲಕ ಸಭಿಕರು ರಾಮನ ಭಕ್ತಿಯಲ್ಲಿ ತೇಲುವಂತೆ ಮಾಡಿದರು. ಒಟ್ಟಾರೆ ತಮ್ಮ ಇಡೀ ನೃತ್ಯದಲ್ಲಿ ಆಕರ್ಷಕ ಮುದ್ರೆ, ಭಾವಪೂರ್ಣ ಅಭಿಯನ ಹಾಗೂ ಗೆಜ್ಜೆ ನಾದದೊಂದಿಗೆ ಪ್ರೇಕ್ಷಕರ ಮನಸೂರೆಗೊಂಡರು.

ಇದಕ್ಕೂ ಮುನ್ನ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಬಿವಿಬಿ ಮೈಸೂರು ಕೇಂದ್ರದ ಉಪಾಧ್ಯಕ್ಷ ಪ್ರೊ.ಸಿ. ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್. ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಆಡಳಿತ ಮಂಡಳಿ ಸದಸ್ಯರಾದ ಡಾ.ನಾಗಲಕ್ಷ್ಮೀ ನಾಗರಾಜನ್, ಡಾ.ಗಂಗಾಧರ್, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್ ಮತ್ತಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ದಸರಾ ಗಜಪಡೆ ಪರಿವಾರಕ್ಕೆ ಮೈಸೂರು ಜಿಲ್ಲಾಡಳಿತದಿಂದ ಬೆಳಗಿನ ಉಪಾಹಾರ

ಮೈಸೂರು,ಸೆ.21(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಕ್ಯಾಂಪ್‌ಗಳಿಂದ ಆಗಮಿಸಿ ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆಯ ಮಾವುತ, ಕಾವಾಡಿ ಹಾಗೂ ಕುಟುಂಬದ ಸದಸ್ಯರಿಗೆ ಅರಮನೆ ಮಂಡಳಿ ವತಿಯಿಂದ ಉಪಾಹಾರ ಕೂಟ ಏರ್ಪಡಿಸಲಾಗಿತ್ತು.

ಅರಮನೆ ಆವರಣ ತ್ರಿನೇಶ್ವರ ದೇವಾಲಯದ ಸಮೀಪದ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಉಪಾಹಾರ ಕೂಟದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾವುತ, ಕಾವಾಡಿಗಳಿಗೆ ಕಾಯಿ ಹೋಳಿಗೆ ಬಡಿಸಿದರೆ, ಶಾಸಕ ತನ್ವೀರ್ ಸೇಠ್ ತುಪ್ಪ ಬಡಿಸಿದರು. ಈ ಸಂದರ್ಭದಲ್ಲಿ ಶಾಸಕ ಜಿ.ಟಿ.ದೇವೇಗೌಡ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸಾಥ್ ನೀಡಿದರು. ನಂತರ ಮಾವುತ, ಕಾವಾಡಿ ಹಾಗೂ ಕುಟುಂಬದ ಸದಸ್ಯರಿಗೆ ಇಡ್ಲಿ, ಸಾಂಬಾರ್, ಚಟ್ನಿ, ಉದ್ದಿನವಡೆ, ದೋಸೆ, ಸಾಗು, ಕೇಸರಿಬಾತ್, ಉಪ್ಪಿಟ್ಟು, ಪೊಂಗಲ್ ಬಡಿಸಲಾಯಿತು. ಬಳಿಕ ಸಚಿವ ಡಾ.ಮಹದೇವಪ್ಪ ಇನ್ನಿತರರು ಅಧಿಕಾರಿಗಳೊಂದಿಗೆ ಕುಳಿತು ಉಪಾಹಾರ ಸೇವಿಸಿದರು.

ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಎಡಿಸಿ ಡಾ.ಪಿ.ಶಿವರಾಜು, ಮುಡಾ ಆಯುಕ್ತ ರಘುನಂದನ್, ಸೆಸ್ಕ್ ಎಂಡಿ ಜಿ.ಶೀಲಾ, ಎಸ್ಪಿ ವಿಷ್ಣುವರ್ಧನ್, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಡಿಸಿಪಿಗಳಾದ ಮುತ್ತುರಾಜು, ಜಾಹ್ನವಿ, ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಎಸಿಪಿಗಳಾದ ಶಾಂತಮಲ್ಲಪ್ಪ, ಅರಮನೆ ಭದ್ರತಾ ಪಡೆ ಎಸಿಪಿ ಚಂದ್ರಶೇಖರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಆರೋಗ್ಯ ತಪಾಸಣಾ ಶಿಬಿರ: ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶಿಬಿರ ಉದ್ಘಾಟಿಸಿದರು. ಆಸ್ಪತ್ರೆಯ ನುರಿತ ವೈದ್ಯರು, ಸಿಬ್ಬಂದಿ ಮಾವುತರು, ಕಾವಾಡಿಗಳು, ಅವರ ಕುಟುಂಬದ ಸದಸ್ಯರಿಗೆ ಜ್ವರ, ಬಿಪಿ, ಶುಗರ್, ಮೈಕೈ ನೋವು, ಹಲ್ಲು ನೋವು ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗೆ ತಪಾಸಣೆ ಮಾಡಿದರು.



ಅರಮನೆ ಆವರಣದಲ್ಲಿ ಗಜಪಡೆಯ ಮಾವುತ, ಕಾವಾಡಿಗಳಿಗಾಗಿ ಆಯೋಜಿಸಿದ್ದ ಉಪಾಹಾರ ಕೂಟದಲ್ಲಿ ಮಾವುತರ ಕುಟುಂಬದ ಸದಸ್ಯರಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ತನ್ವೀರ್ ಸೇಠ್ ಉಪಾಹಾರ ಬಡಿಸುತ್ತಿರುವುದು

ಅರಮನೆ ಆವರಣದಲ್ಲಿ ಜಂಬೂಸವಾರಿ ಪೂರ್ಣ ದರ್ಶನಕ್ಕೆ ಮಾರ್ಗ ಬದಲಾವಣೆ

- ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾಹಿತಿ
- 10ರಿಂದ 15 ಸಾವಿರ ಹೆಚ್ಚುವರಿ ಆಸನ ವ್ಯವಸ್ಥೆಗೂ ನಿರ್ಧಾರ

ಮೈಸೂರು,ಸೆ.21(ಎಂಟಿವೈ)– ಜಂಬೂಸವಾರಿ ವೀಕ್ಷಿಸಲು ಅರಮನೆ ಆವರಣದಲ್ಲಿ ಸೇರುವ ಜನರಿಗೆ ಅಂಬಾರಿ ಕಣ್ತುಂಬಿಕೊಳ್ಳುವ ಸದಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಅರಮನೆ ಆವರಣದಲ್ಲಿ ಜಂಬೂಸವಾರಿ ಮಾರ್ಗದಲ್ಲಿ ಸಣ್ಣದಾಗಿ ಮಾರ್ಪಾಡು ಮಾಡಲು ಉದ್ದೇಶಿಸಿದ್ದು, ಇದರಿಂದ ಹೆಚ್ಚಾಗಿ 10–15 ಸಾವಿರ ಮಂದಿ ಜಂಬೂಸವಾರಿ ವೀಕ್ಷಣೆ ಮಾಡಬಹುದಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಅರಮನೆ ಆವರಣದಲ್ಲಿ ಗಜಪಡೆಯ ಮಾವುತ, ಕಾವಾಡಿಗಳಿಗಾಗಿ ಆಯೋಜಿಸಿದ್ದ ಉಪಾಹಾರ ಕೂಟಕ್ಕೆ ಚಾಲನೆ ನೀಡಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವರ್ಷದಿಂದ ವರ್ಷಕ್ಕೆ ದಸರಾಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಟಿಕೆಟ್, ಪಾಸ್ ತೆಗೆದುಕೊಂಡವರು ಆಸನ ಸಿಗದೆ ಸಮಸ್ಯೆ ಎದುರಿಸಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ಅರಮನೆಯಲ್ಲಿ ಆಸನಗಳ ಸಂಖ್ಯೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಅರಮನೆ ಆವರಣದಲ್ಲಿ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಕೆಲ ಮಾರ್ಪಾಡು ಮಾಡುವುದರಿಂದ ಮೆರವಣಿಗೆಯ ಉದ್ದ 500 ಮೀಟರ್ ಹೆಚ್ಚಾಗಲಿದೆ. ಇದರಿಂದ ಆಸನಗಳ ಸಂಖ್ಯೆಯೂ ಹೆಚ್ಚಾಗಲಿದ್ದು, ಸುಮಾರು 35–40 ಸಾವಿರ ಆಸನಗಳ ವ್ಯವಸ್ಥೆ ಮಾಡಬಹುದಾಗಿದೆ ಎಂದರು.

ದಸರಾ ಆಚರಣೆಗೆ 19 ಉಪಸಮಿತಿಗಳನ್ನು ರಚಿಸಲಾಗಿದೆ. ಯಾವುದೇ ತೊಂದರೆಯಾಗದಂತೆ ಅಚ್ಚುಕಟ್ಟಾಗಿ ಉತ್ಸವ ನಡೆಸಲು ಜವಾಬ್ದಾರಿಯುತವಾಗಿ, ಎಚ್ಚರಿಕೆಯಿಂದ ಕೆಲಸ ಮಾಡುವಂತೆ ಸೂಚಿಸಿದ್ದೇನೆ. ಇಷ್ಟು ದೊಡ್ಡ ಹಬ್ಬ ಆಚರಣೆ ಮಾಡುವಾಗ ಸಣ್ಣಪುಟ್ಟ ವ್ಯತ್ಯಾಸಗಳಾಗುವುದು ಸಹಜ. ಎಲ್ಲವನ್ನು ಸರಿದೂಗಿಸಿಕೊಂಡು ಅದ್ಧೂರಿಯಾಗಿ ದಸರಾ ಆಚರಣೆ ಮಾಡುತ್ತೇವೆ. ಮುಖ್ಯಮಂತ್ರಿಗಳು ಕೇಂದ್ರ ರಕ್ಷಣಾ ಸಚಿವರೊಂದಿಗೆ ಮಾತುಕತೆ ನಡೆಸಲಿದ್ದು ಅನುಮತಿ ದೊರೆತರೆ ಏರ್ ಶೋ ಮಾಡುತ್ತೇವೆ ಎಂದು ಹೇಳಿದರು.

ಎಚ್ಚರಿಕೆ ವಹಿಸುವಂತೆ ಸೂಚಿಸಿದ್ದೇನೆ

"ಶುಕ್ರವಾರ ರಾತ್ರಿ ಧನಂಜಯ ಆನೆ ಕಂಜನ್ ಆನೆ ಮೇಲೆ ದಾಳಿ ಮಾಡಲು ಯತ್ನಿಸಿದ್ದರಿಂದ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಆಹಾರ ಸೇವಿಸುವ ವೇಳೆ ಆನೆಗಳ ನಡುವೆ ಗಲಾಟೆಯಾಗಿ ಧನಂಜಯ ಕಂಜನ್ ಆನೆಯನ್ನು ರಸ್ತೆಗೆ ಅಟ್ಟಾಡಿಸಿಕೊಂಡು ಹೋಗಿದೆ. ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಮಾವುತ ಆನೆಯನ್ನು ನಿಯಂತ್ರಿಸಿದ್ದಾನೆ. ಘಟನೆ ಸಂಬಂಧ ಯಾರೂ ಆತಂಕಪಡುವ ಅಗತ್ಯವಿಲ್ಲ. ಪ್ರಾಣಿಗಳು ಯಾವಾಗ ಹೇಗೆ ವರ್ತಿಸುತ್ತವೆ ಎಂದು ಗೊತ್ತಾಗುವುದಿಲ್ಲ. ಹೀಗಾಗಿ ಕಣ್ಣಲ್ಲಿ ಕಣ್ಣಿಟ್ಟು ಎಚ್ಚರಿಕೆಯಿಂದ ನೋಡಿಕೊಳ್ಳುವಂತೆ ತಿಳಿಸಿದ್ದೇನೆ.

–ಡಾ.ಹೆಚ್.ಸಿ.ಮಹದೇವಪ್ಪ

ನಾಳೆ ಮೈಸೂರಲ್ಲಿ ಎಡಿಜಿಪಿಯಿಂದ ಬಂದೋಬಸ್ತ್ ಪೂರ್ವ ಸಿದ್ಧತಾ ಸಭೆ

ಮೈಸೂರು, ಸೆ,21(ಆರ್‌ಕೆ)–2024ರ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಕಾನೂನು–ಸುವ್ಯವಸ್ಥೆ ಎಡಿಜಿಪಿ ಹಿತೇಂದ್ರ ಅವರು ಸೆಪ್ಟೆಂಬರ್ 23ರಂದು ಮೈಸೂರಿನಲ್ಲಿ ಬಂದೋಬಸ್ತ್ ಪೂರ್ವ ಸಿದ್ಧತಾ ಸಭೆ ನಡೆಸುವರು.

ಸೋಮವಾರ ಬೆಳಗ್ಗೆ 11 ಗಂಟೆಗೆ ಮೈಸೂರಿಗೆ ಆಗಮಿಸಲಿರುವ ಅವರು, 11.30 ಗಂಟೆಗೆ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ದಸರಾ ಬಂದೋಬಸ್ತ್ ಸ್ಕೀಂ ಪ್ರಗತಿ ಪರಿಶೀಲನೆ ನಡೆಸಲಿದ್ದು, ಮೈಸೂರು ನಗರ, ಜಿಲ್ಲೆ ಜೊತೆಗೆ ಹೊರಗಡೆಯಿಂದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಕರೆಸಿಕೊಳ್ಳುವ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸುವರು.



ಹಿತೇಂದ್ರ

ದಕ್ಷಿಣ ವಲಯದ ಐಜಿಪಿ ಡಾ.ಬೋರಲಿಂಗಯ್ಯ, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಮಾರುತಿ(ಸಿಎಆರ್), ಎಸ್ಪಿ ಎನ್.ವಿಷ್ಣುವರ್ಧನ್, ದಕ್ಷಿಣ ವಲಯದ ಜಿಲ್ಲೆಗಳ ಎಸ್ಪಿಗಳು, ರಾಜ್ಯ ಗುಪ್ತ ವಾರ್ತಾ, ಆಂತರಿಕ ಭದ್ರತಾ ವಿಭಾಗದ ಅಧಿಕಾರಿಗಳು ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು ಎಂದು ಮೂಲಗಳು ತಿಳಿಸಿವೆ.

ನಂತರ ಮುಂದಿನ ವಾರ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ)ರೂ ಸಹ ಮೈಸೂರಲ್ಲಿ ದಸರಾ ಮಹೋತ್ಸವಕ್ಕೆ ಮಾಡಿಕೊಂಡಿರುವ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿ ಅಂತಿಮ ರೂಪುರೇಷೆ ನೀಡಲಿದ್ದಾರೆ ಎಂದು ಹೇಳಲಾಗಿದೆ.

ಮಾವುತ, ಕಾವಾಡಿಗಳ ಮಕ್ಕಳಿಗಾಗಿ ತಾತ್ಕಾಲಿಕ ಶಾಲೆ





ಮಾವುತ, ಕಾವಾಡಿಗಳ ಮಕ್ಕಳಿಗಾಗಿ ತೆರೆದಿರುವ ತಾತ್ಕಾಲಿಕ ಶಾಲೆಗೆ ಸಚಿವ ಡಾ.ಮಹದೇವಪ್ಪ ಚಾಲನೆ ನೀಡಿದರು. ಬಲಚಿತ್ರದಲ್ಲಿ ಮಕ್ಕಳೊಂದಿಗೆ ನೃತ್ಯ ವೀಕ್ಷಿಸಿದ ಗಣ್ಯರು.

ಮೈಸೂರು, ಸೆ.21(ಎಂಟಿವೈ)– ಗಜಪಡೆಯ ಮಾವುತ, ಕಾವಾಡಿಗಳ ಮಕ್ಕಳಿಗಾಗಿ ಅರಮನೆ ಆವರಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ತೆರೆದಿರುವ ತಾತ್ಕಾಲಿಕ ಶಾಲೆಯನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶನಿವಾರ ಉದ್ಘಾಟಿಸಿದರು.

ಅರಮನೆಯ ಜಯಮಾರ್ತಾಂಡ ದ್ವಾರದ ಸಮೀಪವಿರುವ ಕೊಠಡಿಯಲ್ಲಿ ತೆರೆದಿರುವ ತಾತ್ಕಾಲಿಕ ಶಾಲೆ ಹಾಗೂ ಗ್ರಂಥಾಲಯವನ್ನು ಉದ್ಘಾಟಿಸಿದ ಬಳಿಕ ಮಕ್ಕಳಿಗೆ ಸಮವಸ್ತ್ರ ವಿತರಿಸಿದರು. ಇದೇ ವೇಳೆ ವಿವಿಧ ವೇಷಭೂಷಣ ತೊಟ್ಟು ನೃತ್ಯ ಪ್ರದರ್ಶಿಸಿ ನೋಡುಗರ ಗಮನ ಸೆಳೆದರು. ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ತಾತ್ಕಾಲಿಕ ಶಾಲೆಯಲ್ಲಿ ಕಲಿಯುತ್ತಿರುವ ಮಾವುತ, ಕಾವಾಡಿಗಳ ಮಕ್ಕಳ ಕುಶಲೋಪರಿ ವಿಚಾರಿಸಿದರು.

ಈ ಸಂದಭದಲ್ಲಿ ಡಿಡಿಪಿಐ ಎಸ್.ಟಿ.ಜವರೇಗೌಡ, ಬಿಇಓ ಸಿ.ಎನ್.ರಾಜು, ಡಿವೈಪಿಸಿ ಶೋಭಾ, ಎಪಿಸಿ ಸುರೇಶ್, ಬಿಆರ್‌ಸಿ ಎಂ.ಬಿ.ಶ್ರೀಕಂಠಸ್ವಾಮಿ, ನೋಡಲ್ ಅಧಿಕಾರಿ ಎಸ್.ಕೆ.ಮಂಜುಳಾ, ಶಿಕ್ಷಕಿಯರಾದ ನೂರ್‌ಫಾತಿಮಾ, ಮೋಸಿನ್ ತಾಜ್, ದಿವ್ಯಾ ಪ್ರಿಯದರ್ಶಿನಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹೆಜ್ಜೆ ಹಾಕಿದ ಮಹದೇವಪ್ಪ: ಮಾವುತ, ಕಾವಾಡಿಗಳ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಇಂದು ಸಚಿವರು ಹಾಗೂ ಗಣ್ಯರ ಮುಂದೆ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು. 'ಗಲ್ಲು ಗಲ್ಲೆನುತ ಗೆಜ್ಜೆ ಗಲ್ಲುತ್ತಾಜೆನುತ', 'ಭೂಮಿ ಈ ಭೂಮಿ ಮೇಲಿನಾಡು, ಈ ನಾಡಲೆಮ್ಮ ಕೋಟಿ, ಈ ಕೋಟೆಗೆ ನೀನೆ ನೀನೆ ತಾಯಿ' ಹಾಡಿಗೆ ನೃತ್ಯ ಮಾಡಿದರು. ತಮ್ಮ ಸಂಸ್ಕೃತಿ ಬಿಂಬಿಸುವ 'ಲೇ ಲಾ ಲಲ್ಲ ಲಾ ಎಂಬ ಹಾಡಿಗೆ ಹೆಜ್ಜೆ ಹಾಕಿದರು. ಸಚಿವ ಮಹದೇವಪ್ಪ ಅವರೂ ಮಕ್ಕಳೊಂದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಶಾಸಕ ತನ್ವೀರ್ ಸೇಠ್, ಎಂಎಲ್ಸಿ ಡಾ.ಯತೀಂದ್ರ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಮಕ್ಕಳ ನೃತ್ಯಕ್ಕೆ ಮನಸೋತು ಅವರೊಂದಿಗೆ ಫೋಟೊ ತೆಗೆಸಿಕೊಂಡರು.

ಆಯುಷ್ ಆರೋಗ್ಯ ಕೇಂದ್ರಕ್ಕೆ ಚಾಲನೆ: ಮಾವುತ, ಕಾವಾಡಿ ಹಾಗೂ ಕುಟುಂಬದ ಸದಸ್ಯರಿಗಾಗಿ ಆಯುಷ್ ಇಲಾಖೆ ಅರಮನೆ ಆವರಣದಲ್ಲಿ ಆರಂಭಿಸಿರುವ ಪಂಚಕರ್ಮ ಚಿಕಿತ್ಸಾ ಕೇಂದ್ರವನ್ನು ಸಚಿವ ಡಾ.ಮಹದೇವಪ್ಪ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ ಇನ್ನಿತರರು ಉಪಸ್ಥಿತರಿದ್ದರು.

ಇಂದು ದಸರಾ ಕುಸ್ತಿಪಟುಗಳಿಗೆ ಜೋಡಿ ಕಟ್ಟುವ ಕಾರ್ಯಕ್ರಮ




ಮೈಸೂರು,ಸೆ.21–ಮೈಸೂರು ದಸರಾ ಮಹೋತ್ಸವ–2024ರ ಅಂಗವಾಗಿ ಅಕ್ಟೋಬರ್ 3ರಿಂದ 9ರವರೆಗೆ ಕರ್ನಾಟಕ ವಸ್ತುಪ್ರದರ್ಶನ ಆವರಣದಲ್ಲಿರುವ ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಾಡಕುಸ್ತಿ ಪಂದ್ಯಾವಳಿ ನಡೆಯಲಿದ್ದು, ಈ ಹಿನ್ನೆಲೆ ಸೆ.22ರಂದು ಬೆಳಗ್ಗೆ 10 ಗಂಟೆಗೆ ಪಿ.ಕಾಳಿಂಗ ರಾವ್ ಗಾನಮಂಟಪದಲ್ಲಿ ನಾಡಕುಸ್ತಿ ಕುಸ್ತಿಪಟುಗಳಿಗೆ ಜೋಡಿ ಕಟ್ಟುವ ಕಾರ್ಯವನ್ನು ಆಯೋಜಿಸಲಾಗಿದೆ.

ನಾಡಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಲು ಆಸಕ್ತಿ ಇರುವ ಎಲ್ಲಾ ಕುಸ್ತಿಪಟುಗಳು ಸದರಿ ದಿನದಂದು ನಿಗದಿತ ಸಮಯಕ್ಕೆ ತಮ್ಮ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಕುಸ್ತಿ ಸಮವಸ್ತ್ರದಲ್ಲಿರುವ 2 ಭಾವಚಿತ್ರದೊಂದಿಗೆ ತಪ್ಪದೇ ಹಾಜರಾಗಿ, ಕುಸ್ತಿ ಉಪಸಮಿತಿಯವರು ನೀಡುವ ಅರ್ಜಿಯನ್ನು ಭರ್ತಿ ಮಾಡುವುದರ ಜೊತೆಗೆ ತಾವು ಹೊಂದಿರುವ ಬ್ಯಾಂಕ್ ಖಾತೆಯ ಪಾಸ್‌ಬುಕ್ ಜೆರಾಕ್ಸ್ (ಖಾತೆ ಸಂಖ್ಯೆ, ಬ್ಯಾಂಕ್ ಹೆಸರು ಮತ್ತು ಬ್ಯಾಂಕ್‌ನ ಐಎಫ್‌ಎಸ್‌ಸಿ ಕೋಡ್ ಕಾಣುವ) ಮತ್ತು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ತಮ್ಮ ಅರ್ಜಿಯೊಂದಿಗೆ ಲಗತ್ತಿಸಿ ನೀಡಬೇಕು.

ಹೆಚ್ಚಿನ ಮಾಹಿತಿಗಾಗಿ ಕುಸ್ತಿ ಉಪಸಮಿತಿ ಕಚೇರಿ ಅಥವಾ ಅಪರ ಪೊಲೀಸ್ ಅಧೀಕ್ಷಕರ ಕಚೇರಿ ದೂ.ಸಂ: 0821–2446638 ಅನ್ನು ಸಂಪರ್ಕಿಸಬಹುದು.

ಸೆ.28ರಂದು ದಸರಾ ಆನೆ ಚಿತ್ರ ಬಿಡಿಸುವ ಸ್ಪರ್ಧೆ

ಮೈಸೂರು: ಅಥರ್ವ ಲೈಫ್ ಸ್ಕಿಲ್ಸ್ ಫೌಂಡೇಶನ್ ವತಿಯಿಂದ ದಸರಾ ಅಂಗವಾಗಿ ಎಲ್‌ಕೆಜಿಯಿಂದ 1ನೇ ತರಗತಿ, 2ನೇ ತರಗತಿಯಿಂದ 4ನೇ ತರಗತಿ, 5ನೇ ತರಗತಿಯಿಂದ 7ನೇ ತರಗತಿ, 8ನೇ ತರಗತಿಯಿಂದ 9ನೇ ತರಗತಿ, 4 ವಿಭಾಗದ ಮಕ್ಕಳಿಗೆ ದಸರಾ ಆನೆ ಹಾಗೂ ಗಣೇಶ–ಗೌರಿ ಚಿತ್ರ ಬಿಡಿಸುವ ಸ್ಪರ್ಧೆಯನ್ನು ಸೆಪ್ಟೆಂಬರ್ 28 ರಂದು ಬೆಳಗ್ಗೆ 9:30ಕ್ಕೆ ಕುವೆಂಪು ನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಕಚೇರಿಯಲ್ಲಿ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಪ್ರತಿ ವಿಭಾಗಕ್ಕೂ 3 ಬಹುಮಾನವಿರುತ್ತದೆ ಹಾಗೂ ಸ್ಪರ್ಧಿಸಿದ ಎಲ್ಲಾ ಸ್ಪರ್ಧಾಳುಗಳಿಗೆ ಪದಕ ಹಾಗೂ ಅಭಿನಂದನಾ ಪತ್ರ ನೀಡಲಾಗುವುದು. ಮಾಹಿತಿಗೆ ಮೊ. 9035864203/ 9035004203 ಸಂಪರ್ಕಿಸಬಹುದು ಎಂದು ಅಥರ್ವ ಲೈಫ್ ಸ್ಕಿಲ್ ಫೌಂಡೇಶನ್ ಅಧ್ಯಕ್ಷೆ ಪುಷ್ಪ ತಿಳಿಸಿದ್ದಾರೆ.



ಸೆ.26, 27ರಂದು ಮೈಸೂರು ಜಿಲ್ಲಾ ಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟ

ಮೈಸೂರು,ಸೆ.21–ಮೈಸೂರು ಜಿಲ್ಲೆಯ 9 ತಾಲೂಕುಗಳಲ್ಲಿ ನಡೆದ 2024–25ನೇ ಸಾಲಿನ ತಾಲೂಕು ಮಟ್ಟದ ದಸರಾ ಸಿ.ಎಂ. ಕಪ್ ಕ್ರೀಡಾಕೂಟದ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಹಾಗೂ ಗುಂಪು ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದ ಕ್ರೀಡಾಪಟುಗಳಿಗೆ, ಜಿಲ್ಲಾ ಮಟ್ಟದ ದಸರಾ ಸಿ.ಎಂ ಕಪ್ ಕ್ರೀಡಾಕೂಟವನ್ನು ಸೆ.26, 27ರಂದು ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಆಯೋಜಿಸಲಾಗಿರುವ ಕ್ರೀಡೆಗಳು: ಪುರುಷರಿಗೆ ಅಥ್ಲೆಟಿಕ್‌ನಲ್ಲಿ 100 ಮೀ, 200 ಮೀ, 400 ಮೀ, 800 ಮೀ, 1500ಮೀ, 5000 ಮೀ. ಓಟ, 1000ಮೀ ಓಟ, ಉದ್ದ ಜಿಗಿದ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವೆಲಿನ್ ಥ್ರೋ, ಡಿಸ್ಕಸ್ ಥ್ರೋ, 110 ಮೀ ಹರ್ಡಲ್ಸ್, 4100 ಮೀ. ರಿಲೇ, 4400 ಮೀ.ರಿಲೇ., ಮಹಿಳೆಯರಿಗೆ ಅಥ್ಲೆಟಿಕ್ಸ್‌ನಲ್ಲಿ 100 ಮೀ, 200 ಮೀ, 400 ಮೀ, 800 ಮೀ, 1500 ಮೀ, 3000 ಮೀ.ಓಟ, ಉದ್ದ ಜಿಗಿದ, ಎತ್ತರಜಿಗಿತ, ಗುಂಡುಎಸೆತ, ಟ್ರಿಪಲ್ ಜಂಪ್, ಜಾವೆಲಿನ್ ಥ್ರೋ, ಡಿಸ್ಕಸ್ ಥ್ರೋ, 100 ಮೀ, 4100 ಮೀ. ರಿಲೇ, 4100 ಮೀ.ರಿಲೇ, ವಾಲಿಬಾಲ್, ಫುಟ್ಬಾಲ್, ಖೋ–ಖೋ, ಕಬಡ್ಡಿ ಬಾಸ್ಕೆಟ್‌ಬಾಲ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಹ್ಯಾಂಡ್‌ಬಾಲ್, ಟೇಬಲ್ ಟೆನ್ನಿಸ್, ಥ್ರೋಬಾಲ್, ಬಾಲ್ ಬ್ಯಾಡ್ಮಿಂಟನ್, ಯೋಗವನ್ನು ಆಯೋಜಿಸಲಾಗಿರುತ್ತದೆ.

ಜಿಲ್ಲಾ ಮಟ್ಟದ ಕ್ರೀಡೆಗಳ ವಿವರ: ಟೆನ್ನಿಸ್, ನೆಟ್‌ಬಾಲ್, ಪುರುಷರು ಮತ್ತು ಮಹಿಳೆಯರಿಗೆ ಈಜು 100, 200, 400, ಮೀ. ಫ್ರೀ ಸ್ಟೈಲ್, 100, 200 ಮೀ. ಬ್ಯಾಕ್ ಸ್ಟ್ರೋಕ್, 100, 200ಮೀ. ಬ್ರೆಸ್ಟ್ ಸ್ಟ್ರೋಕ್, 100 ಮೀ. ಬಟರ್ ಫ್ಲೈ, 200 ಮೀ. ಇಂಡಿವಿಜಯಲ್ ಮಿಡ್ಲೆ, 4100 ಮೀ. ಫ್ರೀ ಸ್ಟೈಲ್ ರಿಲೇ ಅನ್ನು ಏರ್ಪಡಿಸಲಾಗಿದೆ. ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹರಾಗಿರುವ ಕ್ರೀಡಾಪಟುಗಳು ಸೆ.26ರಂದು ಬೆಳಗ್ಗೆ 9 ಗಂಟೆಗೆ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಕ್ರೀಡಾಸಂಘಟಕರಲ್ಲಿ ವರದಿ ಮಾಡಿಕೊಳ್ಳಬೇಕು. ಜಿಲ್ಲಾ ಮಟ್ಟದ ದಸರಾ ಕ್ರೀಡಾ ಸಿ.ಎಂ.ಕಪ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಮಾತ್ರ ಪ್ರಮಾಣ ಭತ್ಯೆಯನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಅಥವಾ ದೂ.ಸಂ.0821–2564179 ಸಂಪರ್ಕಿಸಬಹುದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳ ದಸರಾ ಸಮಿತಿಯಿಂದ 800 ಮಕ್ಕಳಿಗೆ ಒಂದು ದಿನದ 'ಮೈಸೂರು ದಸರಾ ದರ್ಶನ'



ಮೈಸೂರು,ಸೆ.21(ಎಸ್‌ಪಿಎನ್)– ಮಕ್ಕಳ ದಸರಾ ಪ್ರಯುಕ್ತ ಅ.3 ಮತ್ತು 4ರಂದು ಮೈಸೂರು ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗೆ 800 ಮಕ್ಕಳಿಗೆ ಮಕ್ಕಳ ದಸರಾ ಉಪಸಮಿತಿ ಮೈಸೂರು ದಸರಾ ದರ್ಶನ ಒಂದು ದಿನದ ಉಚಿತ ಪ್ರವಾಸಕ್ಕೆ ಅವಕಾಶ ಕಲ್ಪಿಸಲಾಗಿದೆ.

ಜಿಲ್ಲೆಯ ಎಲ್ಲಾ ತಾಲೂಕಿನಿಂದ ಆಯ್ದ ವಿದ್ಯಾರ್ಥಿಗಳಿಗೆ ಒಂದು ದಿನ ಉಚಿತ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಶ್ರೀ ಜಯಚಾಮರಾಜೇಂದ್ರ ಮೃಗಾಲಯ, ಮೈಸೂರು ಅರಮನೆ, ರಿಜನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ, ಮೈಸೂರು ನಂದಿನಿ ಡೈರಿ, ರೈಲ್ವೆ ಮ್ಯೂಸಿಯಂ, ಪ್ರಾಚ್ಯ ವಸ್ತು ಸಂಗ್ರಹಾಲಯ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ನೋಡೆಲ್ ಅಧಿಕಾರಿ ಶೋಭಾ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಹೆಚ್.ಡಿ.ಕೋಟೆ, ಮೈಸೂರು ತಾಲೂಕು, ಹುಣಸೂರು, ನಂಜನಗೂಡು, ಟಿ.ನರಸೀಪುರ, ಪಿರಿಯಾಪಟ್ಟಣ, ಕೆ.ಆರ್.ನಗರ ತಾಲೂಕಿನಿಂದ ತಲಾ 100 ವಿದ್ಯಾರ್ಥಿಗಳು, ದಕ್ಷಿಣ ವಲಯ(ಟೆಂಟ್ ಶಾಲೆ) ಮತ್ತು ಮೈಸೂರು ಉತ್ತರ (ನೇತಾಜಿ ಸುಭಾಷ್ ಚಂದ್ರ ಬೋಸ್ ಆವಾಸೀಯ ವಿದ್ಯಾಲಯ) ವಲಯದ ತಲಾ 50 ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಧ್ವನಿ–ಬೆಳಕು ತಾತ್ಕಾಲಿಕ ರದ್ದು

ಮೈಸೂರು,ಸೆ.21–ನಾಡಹಬ್ಬ ದಸರಾ–2024ರ ಸಂಬಂಧ ಪೂರ್ವಭಾವಿ ಕೆಲಸ ಕಾರ್ಯಗಳು ಪ್ರಗತಿಯಲ್ಲಿರುವುದರಿಂದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವ ಹಿನ್ನೆಲೆಯಲ್ಲಿ ಸೆ.19ರಿಂದ ಅ.20ರವರೆಗೆ ಮೈಸೂರು ಅರಮನೆ ಆವರಣದಲ್ಲಿ ಸಂಜೆ ನಡೆಯುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ದಸರಾ ವೆಬ್‌ಸೈಟ್‌ಗೆ ಚಾಲನೆ, ಯುವ ಸಂಭ್ರಮ ಪೋಸ್ಟರ್ ಬಿಡುಗಡೆ





ಮೈಸೂರಿನ ಅರಮನೆ ಮಂಡಳಿ ಕಚೇರಿಯಲ್ಲಿ ಶನಿವಾರ ಸಚಿವ ದಸರಾ ವೆಬ್‌ಸೈಟ್ ಹಾಗೂ ಯುವ ಸಂಭ್ರಮ ಕಾರ್ಯಕ್ರಮದ ಪೋಸ್ಟರ್ ಅನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಿದರು.


ಮೈಸೂರು, ಸೆ.21(ಎಂಟಿವೈ)–ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸಿದ್ಧತಾ ಕಾರ್ಯ ಬಿರುಸಾಗಿ ಸಾಗುತ್ತಿದ್ದು, ದಸರಾ ಮಹೋತ್ಸವ ಅಂಗವಾಗಿ ಸೆ.24ರಿಂದ 30ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಬಯಲುರಂಗಮಂದಿರದಲ್ಲಿ ನಡೆಯುವ 'ಯುವ ಸಂಭ್ರಮ'ದ ಪೋಸ್ಟರ್ ಬಿಡುಗಡೆ ಹಾಗೂ ದಸರಾ ವೆಬ್‌ಸೈಟ್ ಅನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಮೈಸೂರು ಅರಮನೆ ಆವರಣದಲ್ಲಿರುವ ಅರಮನೆ ಮಂಡಳಿ ಕಚೇರಿಯಲ್ಲಿ ಶನಿವಾರ ಬೆಳಗ್ಗೆ ದಸರಾ ವೆಬ್‌ಸೈಟ್‌ಗೆ ಚಾಲನೆ ನೀಡಿದರು. ಇದೇ ವೇಳೆ ದಸರಾ ಮಹೋತ್ಸವದ ಮೊದಲ ಕಾರ್ಯಕ್ರಮವಾದ ಯುವಸಂಭ್ರಮದ ಪೋಸ್ಟರ್ ಬಿಡುಗಡೆ ಮಾಡಿದರು. ಯುವ ಸಂಭ್ರಮ ಸೆ.24ರಿಂದ 30ರವರೆಗೆ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯಲಿದ್ದು, ನಟ ಶ್ರೀಮುರುಳಿ, ನಟಿ ರುಕ್ಮಿಣಿ ವಸಂತ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರಮೋದ್ ಮುತಾಲಿಕ್‌ಗೆ ಮಂಡ್ಯ ಜಿಲ್ಲೆ ಪ್ರವೇಶಿಸದಂತೆ ನಿರ್ಬಂಧ

ನಾಗಮಂಗಲ ಘರ್ಷಣೆ ಹಿನ್ನೆಲೆಯಲ್ಲಿ ಚನ್ನಪಟ್ಟಣ-ಮದ್ದೂರು ಗಡಿಯಲ್ಲಿ ತಡೆದ ಪೊಲೀಸರು

ಮಂಡ್ಯ: ನಾಗಮಂಗಲ ಕೋಮು ಗಲಭೆ



ಪ್ರಕರಣ ಹಿನ್ನೆಲೆಯಲ್ಲಿ ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಅವರಿಗೆ ಮಂಡ್ಯ ಜಿಲ್ಲೆ ಪ್ರವೇಶಿಸದಂತೆ ಸೆ.21 ರಿಂದ ಅ.5ರವರೆಗೆ ನಿರ್ಬಂಧ ವಿಧಿಸಿ ಮಂಡ್ಯ ಮತ್ತು ಪಾಂಡವಪುರ ಉಪವಿಭಾಗಾಧಿಕಾರಿಗಳಿಂದ ಪ್ರತ್ಯೇಕ ಆದೇಶ ಹೊರಡಿಸಲಾಗಿದೆ.

ಶನಿವಾರ ಮಂಡ್ಯ ಪ್ರವಾಸ ಹಮ್ಮಿಕೊಂಡಿದ್ದ ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಅವರು, ಮಂಡ್ಯ ನಗರದ ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿ, ನಾಗಮಂಗಲ ಗಲಭೆಯಲ್ಲಿ ಬಂಧಿತರಾದ ಹಿಂದೂಪರ ಮುಖಂಡರೊಂದಿಗೆ ಮಾತುಕತೆಗೆ ನಿರ್ಧಾರವಾಗಿತ್ತು. ಆದರೆ ಮುತಾಲಿಕ್ ಪ್ರಚೋದನಕಾರಿ ಭಾಷಣದ ಪ್ರವೃತ್ತಿ ಹೊಂದಿದ್ದಾರೆ. ಇವರ ವಿರುದ್ಧ 30ಕ್ಕೂ ಹೆಚ್ಚು ಕೇಸ್ ದಾಖಲಾಗಿವೆ. ಪ್ರಚೋದನಕಾರಿ ಭಾಷಣ ಮಾಡಿದರೆ ಮತ್ತೊಮ್ಮೆ ಗಲಾಟೆ ಸಾಧ್ಯತೆ ಕಾರಣ ನೀಡಿ ನಿರ್ಬಂಧ ವಿಧಿಸಿದ್ದು, ಭಾರತೀಯ ನಾಗರಿಕ ಸುರಕ್ಷತಾ ಸಂಹಿತೆ 2023 ಕಲಂ 163ರ ಅಡಿಯಲ್ಲಿ ಆದೇಶ ಹೊರಡಿಸಲಾಗಿದೆ.

ಮಂಡ್ಯ ಗಡಿ ಬಳಿ ಪ್ರವೇಶಕ್ಕೆ ನಿರ್ಬಂಧ: ಮಂಡ್ಯ ನಗರದ ಕಾರಾಗೃಹಕ್ಕೆ ಆಗಮಿಸಲು ಶನಿವಾರ ಬೆಳಿಗ್ಗೆ ಮಂಡ್ಯಗೆ ಹೊರಟಿದ್ದ ಮುತಾಲಿಕ್ ಅವರನ್ನು ಚನ್ನಪಟ್ಟಣ–ಮದ್ದೂರು ಗಡಿ ಬಳಿ ಮಂಡ್ಯ ಜಿಲ್ಲಾ ಪೊಲೀಸರು ತಡೆದರು. ಮದ್ದೂರು ತಾಲೂಕಿನ ನಿಡಘಟ್ಟ ಬಳಿ ಬ್ಯಾರಿಕೇಡ್ ಅಳವಡಿಸಿ, ಮುತಾಲಿಕ್‌ಗಾಗಿ ಕಾದು ನಿಂತಿದ್ದ ಪೊಲೀಸರು, ಬೆಳಿಗ್ಗೆಯಿಂದಲೂ ವಾಹನಗಳನ್ನು ತಪಾಸಣೆ ಮಾಡುತ್ತಿದ್ದರು. ಗಡಿಯಲ್ಲಿಯೇ ಮುತಾಲಿಕ್ ಅವರನ್ನು ತಡೆದು ಜಿಲ್ಲೆಗೆ ಪ್ರವೇಶಿಸದಂತೆ ತಾಕೀತು ಮಾಡಲಾಯಿತು.

ಇದೇ ವೇಳೆ ಆದೇಶ ಪತ್ರ ತೋರಿಸಿದ ಪೊಲೀಸರು, ಜಿಲ್ಲೆಯೊಳಗೆ ಬಾರದಂತೆ ಸೂಚನೆ ನೀಡಿದರು. ಟೀ ಕುಡಿಯಲು ಹೋಟೆಲ್‌ಗೆ ತೆರಳಲು ಮುಂದಾದಾಗ ಅದಕ್ಕೂ ಸಹ ಪೊಲೀಸರು ಅವಕಾಶ ಕೊಡಲಿಲ್ಲ. ಪೊಲೀಸರ ನಡೆಯ ವಿರುದ್ಧ ಮುತಾಲಿಕ್ ಆಕ್ರೋಶ ವ್ಯಕ್ತಪಡಿಸಿದರು.

ಹೈವೇಯಲ್ಲಿ ಮೈಸೂರಿಗೆ ತೆರಳಲು ಅವಕಾಶ: ಅವಕಾಶ ಸಿಗದ ಕಾರಣ ಎಕ್ಸ್‌ಪ್ರೆಸ್ ವೇ ಮೂಲಕ ಮೈಸೂರಿಗೆ ಹೋಗಲು ಅವಕಾಶ ಕೊಡುವಂತೆ ಪ್ರಮೋದ್ ಮುತಾಲಿಕ್ ಮನವಿ ಮಾಡಿದರು. ಮುತಾಲಿಕ್ ಮನವಿಗೆ ಮಂಡ್ಯ ಎಸ್ಪಿ ಮಲ್ಲಿಕಾರ್ಜುನ್ ಬಾಲದಂಡಿ ಸ್ಪಂದಿಸಿದರು. ದೂರವಾಣಿ ಮೂಲಕ ಎಸ್ಪಿ ಜೊತೆಗೆ ಮಾತನಾಡಿದ ಮುತಾಲಿಕ್, ನಾನು ಮಂಡ್ಯ ನಗರಕ್ಕಾಗಲಿ, ನಾಗಮಂಗಲಕ್ಕಾಗಲಿ ಹೋಗಲ್ಲ. ಮೈಸೂರಿಗೆ ತೆರಳಬೇಕು, ಹೈವೇಯಲ್ಲಿ ಸಂಚರಿಸಲು ಅವಕಾಶ ನೀಡುವಂತೆ ಮನವಿ ಮಾಡಿದ ಪರಿಣಾಮ ಮುತಾಲಿಕ್ ಮನವಿಯಂತೆ ಪೊಲೀಸ್ ಬಂದೋಬಸ್ತ್‌ನಲ್ಲಿ ಮೈಸೂರಿಗೆ ತೆರಳಲು ಅವಕಾಶ ಕಲ್ಪಿಸಲಾಯಿತು.

ಕಾಂಗ್ರೆಸ್ ವಿರುದ್ಧ ಮುತಾಲಿಕ್ ಕಿಡಿ

ಇದಕ್ಕೂ ಮುನ್ನ ಮಂಡ್ಯ ಜಿಲ್ಲೆ ಗಡಿ ಮದ್ದೂರು ತಾಲೂಕಿನ ನಿಡಘಟ್ಟ ಬಳಿ ಪ್ರಮೋದ್ ಮುತಾಲಿಕ್ ಮಾತನಾಡಿ, ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಎಲ್ಲಾ ರೀತಿಯ ಸ್ವಾತಂತ್ರ್ಯ ನೀಡಿದ್ದಾರೆ. ನಾನು ಮಂಡ್ಯಕ್ಕೆ ಭೇಟಿ ನೀಡಿದ ಬಳಿಕ ಏನಾದರೂ ಆದರೆ ನನ್ನ ಮೇಲೆ ಕೇಸ್ ಹಾಕಲಿ. ನಮ್ಮನ್ನು ತಡೆಯುವ ಕೆಲಸ ಅಕ್ಷಮ್ಯ ಅಪರಾಧ. ನಮ್ಮ ಸಂಘಟನೆ ಹಾಗೂ ನಮ್ಮ ವೈಚಾರಿಕತೆಯನ್ನು ತಡೆಯುತ್ತಿದ್ದಾರೆ ಎಂದು ಕಿಡಿಕಾರಿದರು.

ನಾನು ನಾಗಮಂಗಲಕ್ಕೆ ಹೋಗುತ್ತಿಲ್ಲ. ನಾನು ಹೋಗುತ್ತಿದ್ದದ್ದು ಮಂಡ್ಯದ ಜೈಲಿಗೆ. ನಾನು ಯಾವುದೇ ಸಭೆ ಮಾಡುತ್ತಿರಲಿಲ್ಲ. ಬಂಧಿತ ಹಿಂದೂ ಯುವಕರನ್ನು ಮಾತಾಡಿಸಲು ಹೋಗುತ್ತಿದ್ದೆ. ನಮ್ಮನ್ನು ತಡೆದಿರೋದನ್ನು ಖಂಡಿಸುತ್ತೇನೆ. ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ನಿರಂತರವಾಗಿ ಹಿಂದೂಗಳ ಮೇಲೆ ದೌರ್ಜನ್ಯವಾಗುತ್ತಿದೆ. ಇದಕ್ಕೆ ನಾಗಮಂಗಲ, ದಾವಣಗೆರೆ ಘಟನೆ ಸಾಕ್ಷಿ ಎಂದು ಆರೋಪಿಸಿದರು.

ಪ್ಯಾಲಿಸ್ಟೈನ್ ಧ್ವಜ ಹಾರಿಸುವ ಮುಸ್ಲಿಂರಿಗೆ ಏನ್ ಸಂಬಂಧ. ಇವತ್ತು ಪ್ಯಾಲಿಸ್ಟೈನ್ ಹಾರಿಸುತ್ತಾರೆ ನಾಳೆ ಪಾಕಿಸ್ತಾನದ ಧ್ವಜ ಹಾರಿಸುತ್ತಾರೆ. ಇಂತವರನ್ನು ಶೂಟ್ ಮಾಡಬೇಕು. ಈದ್ ಮೀಲಾದ್ ವೇಳೆ ಆ ಬಾವುಟ ಯಾಕೆ ಹಾರಿಸಬೇಕು. ಇದು ಕಾಂಗ್ರೆಸ್ ಕುಮ್ಮಕ್ಕಿನಿಂದಲೇ ನಡೆಯುತ್ತಿರೋದು. ಕಾಂಗ್ರೆಸ್ ದೇಶ ದ್ರೋಹಿಗಳಿಗೆ ಬೆಂಬಲ ನೀಡುತ್ತಿರುವುದರಿಂದ ಇದನ್ನು ಹಿಂದೂಗಳು ಒಪ್ಪಲ್ಲ ಎಂದರು.

ಪ್ರೋತ್ಸಾಹ ಮೊತ್ತಕ್ಕೆ ಅರ್ಜಿ ಆಹ್ವಾನ

ಮಂಡ್ಯ,ಸೆ.21– ಕೇಂದ್ರ ಸರ್ಕಾರದ ಜೆಡ್‌ಇಡಿ ಯೋಜನೆಯಡಿ ಉತ್ಪಾದನೆಯಲ್ಲಿ ತೊಡಗಿರುವ ಕೈಗಾರಿಕಾ ಘಟಕಗಳು ಪ್ರಮಾಣ ಪತ್ರವನ್ನು ಪಡೆಯಬಹುದಾಗಿದೆ. ಸದರಿ ಪ್ರಮಾಣ ಪತ್ರಗಳನ್ನು ಪಡೆಯಲು ಸರ್ಕಾರದ ವತಿಯಿಂದ ಪ್ರೋತ್ಸಾಹ ಮೊತ್ತವನ್ನು ಒದಗಿಸಲಾಗುವುದು. ಪ್ರಮಾಣ ಪತ್ರಗಳನ್ನು (https://zed.msme.gov.in) ಆನ್‌ಲೈನ್ ಮೂಲಕ ಪಡೆಯಬಹುದು.

ಗಣೇಶಮೂರ್ತಿ ವಿಸರ್ಜನೆ ವೇಳೆ ಇಬ್ಬರಿಗೆ ಚಾಕು ಇರಿತ

ಮಂಡ್ಯ ಬಳಿ ಹಳೇ ವೈಷಮ್ಯದಿಂದ ಘಟನೆ

ಮಂಡ್ಯ: ಹಳೇ ದ್ವೇಷದ ಹಿನ್ನೆಲೆಯಲ್ಲಿ ಗಣೇಶಮೂರ್ತಿ ವಿಸರ್ಜನೆ ವೇಳೆ ಇಬ್ಬರು ಯುವಕರಿಗೆ ಚಾಕುವಿನಿಂದ ಇರಿದು ಕಲ್ಲಿನಿಂದ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ಮಾಚಹಳ್ಳಿ ಗ್ರಾಮದಲ್ಲಿ ಗುರುವಾರ ರಾತ್ರಿ ಜರುಗಿದೆ.

ಮಾಚಹಳ್ಳಿ ಗ್ರಾಮದ ಸಚಿನ್(24) ಎಂಬಾತನ ಕೈ ಹಾಗೂ ಹೊಟ್ಟೆ ಭಾಗಕ್ಕೆ ಇರಿದು ಗಾಯಗೊಳಿಸಲಾಗಿದೆ. ಅದೇ ಗ್ರಾಮದ ಮತ್ತೋರ್ವ ಯುವಕ ನಂಜುಂಡಸ್ವಾಮಿ (26) ತಲೆ ಹಾಗೂ ಕಣ್ಣಿಭಾಗಕ್ಕೆ ಚಾಕುವಿನಿಂದ ಇರಿದಿದ್ದು, ಕಲ್ಲಿನಿಂದ ಹಲ್ಲೆ ಮಾಡಲಾಗಿದೆ.

ಗುರುವಾರ ರಾತ್ರಿ ಗ್ರಾಮದಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಸ್ನೇಹಿತರೊಂದಿಗೆ ಡ್ಯಾನ್ಸ್ ಮಾಡುತ್ತಾ ಗಣೇಶ ಮೂರ್ತಿ ತೆಗೆದುಕೊಂಡು ಹೋಗುತ್ತಿದ್ದ ಸಚಿನ್ ಹಾಗೂ ನಂಜುಂಡಸ್ವಾಮಿ ಅವರ ಮೇಲೆ ದರ್ಶನ್ ಎಂಬಾತ ತನ್ನ ಗ್ಯಾಂಗ್‌ನೊಂದಿಗೆ ಏಕಾಏಕಿ ಗಲಾಟೆ ಆರಂಭ ಮಾಡಿದ್ದಾನೆ. ಈ ವೇಳೆ ಮಾತಿಗೆ ಮಾತು ಬೆಳೆದು ಹಳೇ ದ್ವೇಷದ ಹಿನ್ನೆಲೆಯಲ್ಲಿ ಚಾಕುವಿನಿಂದ ಇರಿಯಲಾಗಿದೆ.

ಕಳೆದ 3 ವರ್ಷದಿಂದ ಗಾಯಾಳು ಸಚಿನ್ ಹಾಗೂ ಆರೋಪಿ ದರ್ಶನ್ ನಡುವೆ ವೈಮನಸ್ಯವಿದ್ದು, ಸಣ್ಣಪುಟ್ಟ ವಿಚಾರಗಳಿಗೆ ಇಬ್ಬರು ನಡುವೆ ಆಗಾಗ್ಗೆ ಗಲಾಟೆಗಳು ನಡೆಯುತ್ತಿತ್ತು. 5 ಬಾರಿ ಗಲಾಟೆ ನಡೆದು ಪೊಲೀಸ್ ಠಾಣೆಯಲ್ಲಿ ರಾಜಿ ಸಹ ಮಾಡಲಾಗಿತ್ತು. ಆದರೆ ನಿನ್ನೆ ಮತ್ತೆ ಗಲಾಟೆ ನಡೆದು ಮಾರಣಾಂತಿಕ ಹಲ್ಲೆ ಮಾಡಲಾಗಿದೆ. ಗಾಯಾಳುಗಳಿಗೆ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ಸಂಬಂಧ ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ,ಸೆ.21– ಸೆ.23ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿ.ಸಿ ಫಾರಂ ವಿದ್ಯುತ್ ವಿತರಣಾ ಕೇಂದ್ರಗಳಾದ ವಿ.ಸಿ ಫಾರಂ, ಶಿವಳ್ಳಿ, ದುದ್ದ, ಕನ್ನಟ್ಟಿ, ಬೇವಕಲ್ಲು, ಬಿ.ಹಟ್ನ, ಕೊಂತೇಗೌಡನ ಕೊಪ್ಪಲಿನಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಪ್ರತಿ ತಾಲೂಕಿಗೆ 1 ಶಿಶುಪಾಲನ ಕೇಂದ್ರ

ಮಂಡ್ಯ, ಸೆ.21– ಮಂಡ್ಯ ಜಿಲ್ಲೆಯಲ್ಲಿ ಒಟ್ಟು 4 ಶಿಶುಪಾಲನಾ ಕೇಂದ್ರಗಳಿವೆ. ಪ್ರತಿ ತಾಲೂಕಿಗೆ 1 ಶಿಶುಪಾಲನ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶೇಖ್ ತನ್ವೀರ್ ಆಸಿಫ್ ತಿಳಿಸಿದರು.

ಇಂದು ಜಿಲ್ಲಾ ಪಂಚಾಯತ್‌ನ ಮಿನಿ ಸಭಾಂಗಣದಲ್ಲಿ ನಡೆದ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿಶುಪಾಲನ ಕೇಂದ್ರಗಳು 6 ತಿಂಗಳಿಂದ 6 ವರ್ಷದ ಒಳಗಿನ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರ ಹಾಗೂ ಸುರಕ್ಷತೆ ಒದಗಿಸುವುದು. ಮಕ್ಕಳ ಪೋಷಣೆ ಹಾಗೂ ಆರೋಗ್ಯದ ಸ್ಥಿತಿಯನ್ನು ವಿಚಾರಿಸುವ ಕೆಲಸವಾಗಬೇಕು. ಮಕ್ಕಳ ದೈಹಿಕ ಅರಿವಿನ ಸಾಮಾಜಿಕ ಹಾಗೂ ಭಾವನಾತ್ಮಕ ಬೆಳವಣಿಗೆಯನ್ನು ಉತ್ತೇಜಿಸುವುದು ಶಿಶುಪಾಲನ ಕೇಂದ್ರದ ಉದ್ದೇಶವಾಗಿದೆ ಎಂದರು.

ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಶುಪಾಲನ ಕೇಂದ್ರಗಳ ಮಕ್ಕಳಿಗಾಗಿ ಕೈಗೊಳ್ಳಬೇಕಾಗಿರುವ ಚಟುವಟಿಕೆಗಳ ಬಗ್ಗೆ ಪಟ್ಟಿ ತಯಾರಿಸಿ ಅದರಂತೆ ಮಕ್ಕಳ ಚಟುವಟಿಕೆಗಳು ನಡೆಯಬೇಕು. ಜೊತೆಗೆ ಶಿಶುಪಾಲನ ಕೇಂದ್ರಗಳಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಬೇಕು. ಶಿಶುಪಾಲನ ಕೇಂದ್ರಗಳಿಗೆ ಆಯಾ ಸಿಡಿಪಿಓಗಳು ಆಗಾಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದರು.

ಸ್ವಯಂ ಸೇವಾ ಸಂಸ್ಥೆಯ ವಿವಿಧ ಇಲಾಖೆ/ಇತರೆ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿರಬೇಕು. ಎಲ್ಲಾ ಅರ್ಹತೆಗಳನ್ನೊಳಗೊಂಡ ಸಂಸ್ಥೆಯಿಂದ ಪ್ರಸ್ತಾವನೆಯನ್ನು ಪಡೆದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಅಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಉಪನಿರ್ದೇಶಕರುಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಬೇಕು. ಪರಿಶೀಲಿಸಿದ ನಂತರ ಅವರ ಪರಿಶೀಲನಾ ವರದಿಯನ್ನು ನಮೂದಿಸಿರುವ ತಡೆಪಟ್ಟಿಯಲ್ಲಿ ತನಿಖಾಧಿಕಾರಿಗಳು ಸ್ಪಷ್ಟ ಅಭಿಪ್ರಾಯದೊಂದಿಗೆ ನೀಡಬೇಕು ಎಂದು ತಿಳಿಸಿದರು.

ಸಮವಸ್ತ್ರ ವಿತರಣೆ...



ಪಾಂಡವಪುರ ತಾಲೂಕಿನ ಹೆಗ್ಗಡಹಳ್ಳಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಗ್ರಾಪಂ ಸದಸ್ಯ ಎಚ್.ಜೆ.ರಾಮಕೃಷ್ಣ ಅವರು, ತಮ್ಮ ತಂದೆ–ತಾಯಿ ಹೆಸರಿನಲ್ಲಿ ಸಮವಸ್ತ್ರ ವಿತರಿಸಿದರು.

ವಿಶ್ವ ಶಾಂತಿ ದಿನಾಚರಣೆ ಅಂಗವಾಗಿ ವಾಕಥಾನ್

ಮಂಡ್ಯ,ಸೆ.21– ವಿಶ್ವ ಶಾಂತಿ ದಿನಾಚರಣೆ ಅಂಗವಾಗಿ ಭಾರತೀಯ ರೆಡ್ ಕ್ರಾಸ್ ಮಂಡ್ಯ ಜಿಲ್ಲಾ ಶಾಖೆ ಹಾಗೂ ಯುವ ರೆಡ್‌ಕ್ರಾಸ್ ಘಟಕದ ವತಿಯಿಂದ ಅಂತರ ರಾಷ್ಟ್ರೀಯ ಶಾಂತಿ ದಿನದ ಅಂಗವಾಗಿ ನಮ್ಮ ನಡೆ ಮಾನವೀಯತೆಯ ಕಡೆ ವಾಕಥಾನ್ ಎಡಿಸಿ ಡಾ. ಹೆಚ್.ಎಲ್.ನಾಗರಾಜು ಚಾಲನೆ ನೀಡಿದರು.



ಎಡಿಸಿ ಡಾ.ಹೆಚ್.ಎಲ್.ನಾಗರಾಜು ಅವರು ವಾಕಥಾನ್‌ಗೆ ಚಾಲನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಿಂದ ಹೊರಟು ನಗರದ ಸರ್.ಎಂ.ವಿ.ಕ್ರೀಡಾಂಗಣದವರೆಗೆ ನಗರದ ವಿವಿಧ ಕಾಲೇಜುಗಳ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಶನಿವಾರ ವಾಕಥಾನ್ ನಡೆಸಿದರು.

ಜಾಥಾದಲ್ಲಿ ವಿವಿಧ ಕಾಲೇಜು ವಿದ್ಯಾರ್ಥಿಗಳು ಭಾಗಿಯಾಗಿ ರಕ್ತದಾನ ಜಾಗೃತಿ ಬಗ್ಗೆ ಘೋಷಣೆ ಕೂಗಿದರು. ಬಳಿಕ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಮಾತನಾಡಿ ಜನರಲ್ಲಿ ಜಾಗೃತಿ ಮೂಡಿಸಲು ಅದರಲ್ಲೂ ವಿಶೇಷವಾಗಿ ಯುವ ಮನಸುಗಳನ್ನು ಸರಿದಾರಿಗೆ ತರಲು ಜನ ಜಾಗೃತಿ ಮೂಡಿಸಲು ವಾಕಥಾನ್ ಅನ್ನು ಆಯೋಜನೆ ಮಾಡಲಾಗಿದೆ ಎಂದು ಹೇಳಿದರು.

ಎಲ್ಲರೂ ಮಾನವೀಯತೆಯಿಂದ ಯೋಚನೆ ಮಾಡಬೇಕು. ಮಾನವೀಯತೆಯ ಕಡೆ ನಮ್ಮ ನಡೆ ಇಟ್ಟುಕೊಂಡು ಜಿಲ್ಲೆಯಲ್ಲಿ ಶಾಂತಿ, ನೆಮ್ಮದಿ, ಸಮಾಧಾನದಿಂದ ಬದುಕುವ ಧ್ಯೇಯ ಇಟ್ಟುಕೊಳ್ಳಿ, ಯಾವುದೇ ಅಹಿತಕರ ಘಟನೆಗಳು ನಡೆಯಲಿಕ್ಕೆ ವಿಶೇಷವಾಗಿ ಯುವಕರು ಸಪೋರ್ಟ್ ಮಾಡಬಾರದು ಎಂದು ಹೇಳಿದರು.

ಒಮ್ಮೊಮ್ಮೆ ಧರ್ಮ, ಜಾತಿ, ಭೌಗೋಳಿಕ ಹಿನ್ನೆಲೆಯ ಉದ್ದೇಶಗಳನ್ನು ಇಟ್ಟುಕೊಂಡು ಸಣ್ಣ ಸಂಗತಿಗಳನ್ನು ದೊಡ್ಡದಾಗಿ ರಾಷ್ಟ್ರೀಯ ಸುದ್ದಿಗಳು ಆಗುತ್ತವೆ. ಇತ್ತೀಚೆಗೆ ಮಂಡ್ಯದಲ್ಲೂ ಇಂತಹ ಘಟನೆಗಳು ನಡೆಯುತ್ತಿರುವುದು ತಲೆನೋವಾಗಿದೆ ಎಂದರು.

ವಾಕಥಾನ್ ಆಚರಣೆ ಧಾರ್ಮಿಕ ಭಾವನೆಗೆ ಗೌರವ ಕೊಡುವುದು, ಸಹಕರಿಸುವುದು ವಿಶೇಷವಾದ ಮಾನವೀಯತೆ. ಆದರೆ ಕೆಲವರು ದೇಶದ್ರೋಹಿಗಳು ಜನರನ್ನು ಹೊಡೆಯಲು, ಸಮಾಜದಲ್ಲಿ ಶಾಂತಿ ಕದಡಲು ಯುವಕರನ್ನು ಎತ್ತಿಕಟ್ಟಿ ಗೊಂದಲ ಮಾಡಿ ಜಿಲ್ಲೆಗೆ, ರಾಜ್ಯಕ್ಕೆ ಕೆಟ್ಟ ಹೆಸರು ಬರಲು ಮಾಡುತ್ತಾರೆ. ಸಾಕಷ್ಟು ಜನರಿಗೆ ಹಾನಿ ಮಾಡುತ್ತಾರೆ. ಇದು ಯಾವುದು ಆಗಬಾರದು ಎಂಬ ಉದ್ದೇಶಕ್ಕೋಸ್ಕರ ಈ ಎಲ್ಲಾ ಸಂಗತಿಗಳನ್ನು ಮಾನವೀಯತೆಯ ಅಡಿಯ ಆಧಾರದ ಮೇಲೆ ಯೋಚನೆ ಮಾಡಿ ಮಾನವೀಯತೆಯ ಕಡೆ ಸಮಾಜವನ್ನು ತೆಗೆದುಕೊಂಡು ಹೋಗೋಣ ಎಂದು ಹೇಳಿದರು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಮಂಡ್ಯ ಶಾಖೆಯ ಸಭಾಧ್ಯಕ್ಷೆ ಮೀರಾ ಶಿವಲಿಂಗಯ್ಯ ಮಾತನಾಡಿ, ವಿಶ್ವ ಶಾಂತಿಯ ದಿನದ ಅಂಗವಾಗಿ ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ವಾಕಥಾನ್ ಕಾರ್ಯಕ್ರಮ ಮಾಡಲಾಗುತ್ತಿದೆ. ವಾಕಥಾನ್ ಎನ್ನುವುದು ಯಾವುದೇ ದಿನಾಚರಣೆ ಮಾಡುವುದರ ಬಗ್ಗೆ ಯೋಚನೆ ಮಾಡುತ್ತೇವೆ. ವಿಶ್ವಶಾಂತಿ ಏನಾಗುತ್ತಿದೆ, ಯಾವುದು ನಮಗೆ ಹೆಚ್ಚು ಆಘಾತಕಾರಿಯಾಗಿದೆ ಚಿಂತನೆ ಮಾಡಿ ರೆಡ್‌ಕ್ರಾಸ್ ವಾಕಥಾನ್ ಪ್ರಾರಂಭಿಸಿದೆ. ಇಂತಹ ಕಾರ್ಯಕ್ರಮದಲ್ಲಿ ಯುವಕರು ಹೆಚ್ಚು ಹೆಚ್ಚು ಭಾಗವಹಿಸಬೇಕು ಎಂದು ಹೇಳಿದರು.

ರೆಡ್‌ಕ್ರಾಸ್ ಸಂಸ್ಥೆ ಮಾನವೀಯತೆಯ ಸಂಸ್ಥೆಯಾಗಿದ್ದು ವಾಕಥಾನ್‌ನಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗಿಯಾಗಿದ್ದಾರೆ. ಚಲನೆ ಇದ್ದಷ್ಟು ಕೂಡ ಒಳ್ಳೆಯ ಯಶಸ್ಸಿನ ಕಡೆ ಸಾಗಲು ಸಾಧ್ಯ. ಆದ್ದರಿಂದ ವಾಕ್ ಥಾನ್ ಸ್ಫೂರ್ತಿಯಾಗಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ರೆಡ್ ಕ್ರಾಸ್ ಸಂಸ್ಥೆ ನಿರ್ದೇಶಕರಾದ ಕೆ.ಟಿ.ಹನುಮಂತು, ಷಡಕ್ಷರಿ, ಜಂಟಿ ಕಾರ್ಯದರ್ಶಿ ರಂಗಸ್ವಾಮಿ ಸೇರಿದಂತೆ ಇತರರು ಹಾಜರಿದ್ದರು.

ಒಂದನೇ ಪುಟದಿಂದ

ಫ್ರಿಡ್ಜ್‌ಗೆ ತುಂಬಿದ ಕ್ರೂರಿ!

ಹೊರ ಬಂದಿಲ್ಲ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಕೆಲಸ ಮಾಡುತ್ತಿದ್ದ ಜಾಗದಲ್ಲೂ ವಿಚಾರಣೆ ನಡೆಸಲಾಗಿದೆ. ಎಷ್ಟು ದಿನದಿಂದ ಈಕೆ ಕೆಲಸಕ್ಕೆ ಬಂದಿಲ್ಲ. ರಜೆ ಹಾಕುವ ಬಗ್ಗೆ ಮುಂಚಿತವಾಗಿ ಮಾಹಿತಿ ಕೊಟ್ಟಿದ್ದರೆ, ಕೆಲಸಗಾರರ ಬಳಿ ಏನಾದರೂ ಹೇಳಿಕೊಂಡಿದ್ದರೆ ಎಂಬ ಆಯಾಮದಲ್ಲೂ ತನಿಖೆ ನಡೆಯುತ್ತಿದೆ. ಆಕೆಯ ಕೊನೆಯ ಕರೆ ಬಗ್ಗೆ ಟವರ್ ಡಂಪ್ ತೆಗೆದು ಪೊಲೀಸರು ಪರಿಶೀಲನೆ ಮಾಡುತ್ತಿದ್ದಾರೆ.

ಎಸ್ಕೇಪ್ ಆಗಲು ಮಾಸ್ಟರ್ ಪ್ಲ್ಯಾನ್: ಕೊಲೆ ಮಾಡಿ ಎಸ್ಕೇಪ್ ಆಗಲು ಹಂತಕ ಮಾಸ್ಟರ್ ಪ್ಲ್ಯಾನ್ ಮಾಡಿರುವುದು ಮೇಲ್ನೋಟಕ್ಕೆ ತಿಳಿದಿದೆ. ಫ್ರಿಜ್‌ನಲ್ಲಿ ಮೃತದೇಹದ ತುಂಡು ತುಂಬಿ ಇಟ್ಟರೆ ಅಷ್ಟು ಸುಲಭವಾಗಿ ಗೊತ್ತಾಗುವುದಿಲ್ಲ. ತಪ್ಪಿಸಿಕೊಳ್ಳಲು ಸಹ ಸಮಯ ಸಿಗಲಿದೆ ಎಂದು ನಿರ್ಧರಿಸಿದ್ದಾನೆ. ಕೊಲೆ ನಡೆದು ಅಂದಾಜು 15 ದಿನಗಳ ಬಳಿಕ ವಾಸನೆ ಬರಲು ಶುರುವಾಗಿದೆ. ತಕ್ಷಣಕ್ಕೆ ಗೊತ್ತಾಗಬಾರದು ಎಂಬ ಕಾರಣಕ್ಕೆ ಫ್ರಿಜ್ ಅನ್ನು ಹಂತಕ ಆನ್ ಮಾಡಿ ಹೋಗಿದ್ದ. 15 ದಿನದ ಹಿಂದೆ ಘಟನೆ ನಡೆದಿದ್ದರೆ, ಆರೋಪಿಗೆ ತಪ್ಪಿಸಿಕೊಳ್ಳಲು ಸಾಕಷ್ಟು ಸಮಯ ಸಿಕ್ಕಿದೆ. ಹಾಗಾಗಿ ಆರೋಪಿಯ ಜಾಡು ಪತ್ತೆ ಮಾಡುವುದು ಪೊಲೀಸರಿಗೆ ಸವಾಲಾಗಿದೆ.

ಅಕ್ರಮ ಅಸ್ತ್ರ ಬಳಕೆ!

ಮುಖ್ಯ ಕಾರ್ಯದರ್ಶಿ ಅವರಿಗೆ ಬಂದ ರಾಜಭವನದ ಪತ್ರವನ್ನು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅವರಿಗೆ ವರ್ಗಾಯಿಸಲಾಗಿದೆ. ರಾಜಭವನದ ಆದೇಶದಂತೆ ದಾಖಲೆಗಳನ್ನು ಸಲ್ಲಿಸುವ ಸಂಬಂಧ ಇಲಾಖೆಯ ಅಧೀನ ಕಾರ್ಯ ದರ್ಶಿ ಅವರು, ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಅವರ ಗಮನಕ್ಕೆ ತಂದು ಅನುಮತಿ ಕೋರಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಮತ್ತು ಬಿಡಿಎ, ಡಿ.ಕೆ.ಶಿವಕುಮಾರ್ ವ್ಯಾಪ್ತಿಗೆ ಬರಲಿದ್ದು, ಅವರ ಅನುಮತಿ ಪಡೆದು ರಾಜ ಭವನಕ್ಕೆ ದಾಖಲೆಗಳನ್ನು ಸಲ್ಲಿಸಲು ನಗರಾ ಭಿವೃದ್ಧಿ ಇಲಾಖೆ ಕ್ರಮ ಕೈಗೊಂಡಿದೆ. ಗಂಗೇನಹಳ್ಳಿ ಡಿ–ನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಸಂಪುಟದ ಮೂವರು ಸಚಿವರು ಸುದ್ದಿ ಗೋಷ್ಠಿ ನಡೆಸಿ, ಮಾಜಿ ಮುಖ್ಯಮಂತ್ರಿಗಳಾದ ಎಚ್.ಡಿ. ಕುಮಾರಸ್ವಾಮಿ ಹಾಗೂ ಬಿ.ಎಸ್. ಯಡಿಯೂರಪ್ಪ ಅವರುಗಳು ನೂರು ಕೋಟಿ ರೂ. ಸರ್ಕಾರಿ ಭೂಮಿಯನ್ನು ಲಪಟಾಯಿಸಿದ್ದಾರೆ ಎಂದು ಮಾಡಿದ ಆರೋಪದ ಬೆನ್ನಲ್ಲೇ ಅರ್ಕಾವತಿ ಹಗರಣದ ಕಡತವನ್ನು ರಾಜಭವನ ಕೇಳಿದೆ.

ಸರ್ಕಾರದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಹಗರಣ ಮತ್ತು ಅದರ ತನಿಖೆಗಳ ಬಗ್ಗೆ ಕಳೆದ ನಾಲ್ಕು ದಿನಗಳಿಂದ ಒಂದಲ್ಲಾ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಭವನ ಸರ್ಕಾರದಿಂದ ಮಾಹಿತಿ ಪಡೆಯುತ್ತಿದೆ. ಅಷ್ಟೇ ಅಲ್ಲ, ಲೋಕಾಯುಕ್ತ ನಡೆಸಿರುವ ತನಿಖಾ ವರದಿಗಳು ಸರ್ಕಾರದ ಕೈಸೇರಿರುವ ಬಗ್ಗೆಯೂ ರಾಜ್ಯಪಾಲರು ಲೋಕಾಯುಕ್ತಕ್ಕೂ ಬಿಸಿ ಮುಟ್ಟಿಸಿದ್ದಾರೆ. ಕೆಂಪಣ್ಣ ವರದಿಯಲ್ಲಿ ಬಿಡಿಎ ಮತ್ತು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳನ್ನು ಮಾತ್ರ ಹೊಣೆ ಮಾಡಿ ಸಿದ್ದರಾಮಯ್ಯ ಅವರಿಗೆ ರೀ–ಡೂ ಪ್ರಕರಣದಲ್ಲಿ ಕ್ಲೀನ್‌ಚಿಟ್ ನೀಡಿತ್ತು. ಈ ಹಗರಣವನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ವಿಧಾನಸಭೆ ಒಳಗೆ ಮತ್ತು ಹೊರಗೆ ಹೋರಾಟ ನಡೆಸಲು ಬಿಜೆಪಿ ಮುಂದಾದ ಸಂದರ್ಭದಲ್ಲೆಲ್ಲಾ ಆ ಪಕ್ಷದ ಮುಖಂಡರೊಬ್ಬರು ಇದಕ್ಕೆ ಆಸ್ಪದ ಕೊಡುತ್ತಿರಲಿಲ್ಲ. ಬಸವರಾಜ ಬೊಮ್ಮಾಯಿ ಪ್ರತಿಪಕ್ಷದಲ್ಲಿ ಇದ್ದ ಸಂದರ್ಭದಲ್ಲಿ ಹಗರಣದ ಬಗ್ಗೆ ಪ್ರಸ್ತಾಪ ಎತ್ತಿದ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾರಾಮಾರಿಯೇ ನಡೆದಿತ್ತು.

ನಿಫಾ ವೈರಸ್ ಸೋಂಕಿನ ಲಕ್ಷಣ

ಪಡೆದು ಸ್ಯಾಂಪಲ್ ಅನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದರು. ಮೈಸೂರು ಜಿಲ್ಲೆಯಲ್ಲಿ ಒಂದೇ ಒಂದು ನಿಫಾ ವೈರಸ್ ಪಾಸಿಟಿವ್ ಪ್ರಕರಣ ಪತ್ತೆಯಾಗಿಲ್ಲವಾದರೂ, ಕೇರಳಾದಿಂದ ಬರುವ ಪ್ರಯಾಣಿಕರನ್ನು ವೈದ್ಯಕೀಯ ತಪಾಸಣೆಗೊಳಪಡಿಸಿ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿದ್ದೇವೆ. ಯಾವುದೇ ಆತಂಕವಿಲ್ಲ ಎಂದು ಡಾ. ಕುಮಾರಸ್ವಾಮಿ ತಿಳಿಸಿದ್ದಾರೆ. ಜ್ವರ, ಶೀತ, ನೆಗಡಿಯಂತಹ ಲಕ್ಷಣಗಳು ಕಂಡು ಬಂದ ರೋಗಿಗಳ ರಕ್ತ ಪರೀಕ್ಷೆ ಮಾಡಿಸಲಾಗುತ್ತಿದ್ದು, ಈವರೆಗೆ ನಿಫಾ ವೈರಸ್ ಪಾಸಿಟಿವ್ ಪ್ರಕರಣಗಳು ದೃಢಪಟ್ಟಿಲ್ಲ. ಆದರೆ, ಸಾರ್ವಜನಿಕರು ನಿರ್ಲಕ್ಷಿಸದೇ ಎಚ್ಚರಿಕೆಯಿಂದಿರಬೇಕೆಂದು ಹೇಳಿದ್ದಾರೆ.

14 ದಿನ ನ್ಯಾಯಾಂಗ ಬಂಧನ

ಮುನಿರತ್ನ ಪರ ವಕೀಲರು ಈ ಪ್ರಕರಣದಲ್ಲಿ ಸುದ್ದಿ ಮಾಧ್ಯಮಗಳು ನಡೆದುಕೊಳ್ಳುತ್ತಿರುವ ರೀತಿ ಸರಿಯಿಲ್ಲ ಎಂದು ಆರೋಪಿಸಿದರು. ನಮ್ಮ ಕಕ್ಷಿದಾರರ ವಿರುದ್ಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗುವ ಮುನ್ನವೇ ಮಾಧ್ಯಮಗಳಲ್ಲಿ ವರದಿ ಪ್ರಕಟಗೊಳ್ಳುತ್ತಿತ್ತು. ಪ್ರಕರಣವನ್ನು ಮಾಧ್ಯಮದವರು ತನಿಖೆ ಮಾಡುತ್ತಿದ್ದಾರೋ ಅಥವಾ ಪೋಲಿಸರೋ ಎಂದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ದೂರು ದಾಖಲಿಸಿಕೊಳ್ಳಿ ಎಂದಾಗ, ದೂರು ನೀಡಿ ಎಂದು ನ್ಯಾಯಾಧೀಶರು ಸೂಚಿಸಿದರು.

ಶಿಬಿರಗಳಲ್ಲಿ ಆನೆಗಳ ಕದನ ಮಾಮೂಲಿ; ನಗರದವರಿಗೆ ಇದು ಆತಂಕಕಾರಿ ಸಂಗತಿ!

ಧನಂಜಯ–ಕಂಜನ್ ಮಾರಾಮಾರಿಗೆ ಡಿಸಿಎಫ್ ಡಾ.ಪ್ರಭುಗೌಡ ಪ್ರತಿಕ್ರಿಯೆ



ಮೈಸೂರು, ಸೆ.21(ಎಸ್‌ಬಿಡಿ)–



ಡಾ.ಪ್ರಭುಗೌಡ

ದಸರಾ ಗಜಪಡೆಯ ಎರಡು ಆನೆಗಳು ಕಿತ್ತಾಡಿಕೊಂಡು ರಸ್ತೆಗೆ ಓಡಿಬಂದ ಘಟನೆ ಹಿನ್ನೆಲೆಯಲ್ಲಿ ಯಾವುದೇ ರೀತಿಯಲ್ಲೂ ಆತಂಕ ಪಡುವ ಅಗತ್ಯವಿಲ್ಲ ಎಂದು ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ(ಡಿಸಿಎಫ್–ವನ್ಯಜೀವಿ ವಿಭಾಗ) ಡಾ.ಐ.ಬಿ.ಪ್ರಭುಗೌಡ ತಿಳಿಸಿದ್ದಾರೆ.

ಅರಮನೆ ಆವರಣದಲ್ಲಿ ಶನಿವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಶುಕ್ರವಾರ ರಾತ್ರಿ 7.45ರ ಸುಮಾರಿನಲ್ಲಿ ಧನಂಜಯ ಆನೆಗೆ ಆಹಾರ ನೀಡುವ ವೇಳೆ ಅದರ ಹಿಂದೆ ಕಂಜನ್‌ನನ್ನು ಅದರ ಸ್ಥಳಕ್ಕೆ ಕರೆದುಕೊಂಡು ಹೋಗುವಾಗ ಕಿತ್ತಾಟ ಶುರುವಾಗಿದೆ. ಆಹಾರ ಸೇವಿಸುತ್ತಿದ್ದ ಧನಂಜಯ ಏಕಾಏಕಿ ಹಿಂದಕ್ಕೆ ತಿರುಗಿ ಕಂಜನ್ ಜೊತೆ ಕದನಕ್ಕಿಳಿದು ಅದನ್ನು ಓಡಿಸಿಕೊಂಡು ಹೋಗುತ್ತಾನೆ. ಓಡುವ ರಭಸಕ್ಕೆ ಕಂಜನ್ ಮೇಲಿದ್ದ ಕಾವಾಡಿ ಕೆಳಗೆ ಜಿಗಿದಿದ್ದಾನೆ. ಆದರೆ ಧನಂಜಯ ಮೇಲಿದ್ದ ಕಾವಾಡಿ ಅದು ಮುಖ್ಯರಸ್ತೆ ತಲುಪುವಷ್ಟರಲ್ಲಿ ನಿಯಂತ್ರಿಸಿ ವಾಪಸ್ ಕರೆತಂದಿದ್ದಾನೆ ಎಂದು ಘಟನೆ ಬಗ್ಗೆ ವಿವರಿಸಿದರು. ಎಲ್ಲವೂ ಪಳಗಿಸಿರುವ ಆನೆಗಳಾಗಿರುವುದರಿಂದ ಜನರಿಗೆ ಯಾವುದೇ ರೀತಿಯ ತೊಂದರೆ ಮಾಡಿಲ್ಲ. ಕ್ಯಾಂಪ್(ಶಿಬಿರ)ನಲ್ಲಿ ಆನೆಗಳು ಈ ರೀತಿಯಲ್ಲಿ ವರ್ತಿಸುವುದು ಸಹಜ. ಅದರಲ್ಲೂ ಎರಡು ಗಂಡಾನೆಗಳು ಜೊತೆಯಲ್ಲಿದ್ದಾಗ ಸಹಜವಾಗಿ ಕಿತ್ತಾಡುತ್ತವೆ. ಆದರೆ ಇದು ನಗರವಾಗಿರುವುದರಿಂದ ಜನರಿಗೆ ಸಹಜವಾಗಿ ಭಯವಾಗಿದೆ. ಪ್ರತಿದಿನ ಆನೆಗಳ ವರ್ತನೆಯನ್ನು ಪರಿಶೀಲಿಸಲಾಗುತ್ತದೆ. ಧನಂಜಯನಿಗೆ ಯಾವುದೇ ಮದವಿಲ್ಲ. ಉತ್ತಮ ಆಹಾರ ಸಿಗುವಾಗ ಆನೆಗಳಿಗೆ ತನ್ನಂತಾನೇ ಗತ್ತು ಬರುತ್ತದೆ. ಹಾಗಾಗಿ ತುಂಟಾಟ ಹಾಗೂ ಕಿತ್ತಾಟಗಳು ಜಾಸ್ತಿಯಾಗುತ್ತವೆ. ನಿನ್ನೆಯ ಘಟನೆಯಿಂದ ಜನ ಆತಂಕಪಡಬೇಕಿಲ್ಲ ಎಂದು ಹೇಳಿದರು.

ಈ ರೀತಿಯ ಘಟನೆಗಳು ಮರುಕಳಿಸದಂತೆ ನಿಗಾ ವಹಿಸುವಂತೆ ಮಾವುತರು ಹಾಗೂ ಕಾವಾಡಿಗಳಿಗೆ ತಿಳಿಸಲಾಗಿದೆ. ಆನೆಗಳ ಸರಪಳಿ ಬಿಚ್ಚುವಾಗ ಅದರ ಕಾವಾಡಿ ಹಾಗೂ ಮಾವುತ ಕಡ್ಡಾಯವಾಗಿ ಸ್ಥಳದಲ್ಲಿರಬೇಕು. ಆಹಾರ ನೀಡುವಾಗ ಯಾವುದೇ ಕಾರಣಕ್ಕೂ ಗಂಡು ಆನೆಗಳನ್ನು ಒಟ್ಟಿಗೆ ನಿಲ್ಲಿಸಬಾರದು ಎಂದು ಸೂಚಿಸಲಾಗಿದೆ. ನಿನ್ನೆಯೂ ಕೂಡ ಅಕ್ಕಪಕ್ಕದಲ್ಲಿ ನಿಲ್ಲಿಸಿರಲಿಲ್ಲ. ಹಿಂಭಾಗ ಕರೆದೊಯ್ಯುವಾಗ ಈ ಘಟನೆ ನಡೆದಿದೆ. ಇದು ಸಹಜ ಜಗಳ. ಏನೂ ಆತಂಕ ಪಡುವ ಅಗತ್ಯವಿಲ್ಲ ಎಂದರು.

ನಿರ್ಲಕ್ಷಿಸುವ ಘಟನೆಯಲ್ಲ; ಮುಂಜಾಗ್ರತೆ ಅಗತ್ಯ

ಕ್ಯಾಂಪ್‌ನಲ್ಲಿ ಆಹಾರ ಸೇವಿಸುವಾಗ ಗಂಡಾನೆಗಳು ಈ ರೀತಿ ಕಿತ್ತಾಡುವುದು ಸಹಜ ವರ್ತನೆಯಾಗಿರಬಹುದು. ಆದರೆ ಅರಮನೆ ಆವರಣದಲ್ಲಿದ್ದ ಎರಡು ಬಲಿಷ್ಠ ಆನೆಗಳು ಕಿತ್ತಾಡಿಕೊಂಡು, ಗೇಟ್‌ಗಳು, ಬ್ಯಾರಿಕೇಡ್‌ಗಳನ್ನು ಮುರಿದು, ಘೀಳಿಡುತ್ತಾ ರಸ್ತೆಗೆ ಓಡಿಬಂದಿರುವುದು ಸಹಜ ಘಟನೆಯಲ್ಲ. ಧನಂಜಯನ ದಾಳಿಯಿಂದ ಬೆದರಿ ಪೇರಿಕಿತ್ತ ಕಂಜನ್ ಸದಾ ವಾಹನ ಸಂಚಾರದಟ್ಟಣೆ ಇರುವ ಬೆಂಗಳೂರು–ನೀಲಗಿರಿ ರಸ್ತೆಗೆ ನುಗ್ಗಿದ್ದಾನೆ. ಸದ್ಯ ಅದನ್ನು ಬೆನ್ನತ್ತಿದ್ದ ಧನಂಜಯ, ಕಾವಾಡಿಯ ಸಮಯಪ್ರಜ್ಞೆ ಹಾಗೂ ಅವಿರತ ಪ್ರಯತ್ನದಿಂದ ರಸ್ತೆ ಅಂಚಿನಲ್ಲಿ ನಿಯಂತ್ರಣಕ್ಕೆ ಬಂದಿದೆ. ಇದರಿಂದ ಕಂಜನ್ ಸ್ವಲ್ಪ ದೂರ ಓಡಿ, ರಸ್ತೆ ಬದಿ ನಿಂತಿದೆ. ಒಂದು ವೇಳೆ ಧನಂಜಯ ನಿಯಂತ್ರಣಕ್ಕೆ ಬಾರದೆ ರಸ್ತೆಗೆ ನುಗ್ಗಿ ಕಂಜನ್‌ನನ್ನು ಅಟ್ಟಾಡಿಸಿದ್ದರೆ ಊಹಿಸಲಾಗದ ದುರಂತ ನಡೆಯುವ ಸಾಧ್ಯತೆ ಇತ್ತು. ಈ ವೇಳೆ ಅರಮನೆ ಜಯಮಾರ್ತಾಂಡ ದ್ವಾರದ ಬಳಿಯಿದ್ದ ಪ್ರವಾಸಿಗರು, ವ್ಯಾಪಾರಿಗಳು, ರಸ್ತೆಯಲ್ಲಿ ಸಾಗುತ್ತಿದ್ದ ವಾಹನ ಸವಾರರಿಗೆ ಪರಿಸ್ಥಿತಿಯ ಗಂಭೀರತೆ ಅರಿವಾಗಿರುತ್ತದೆ. ಆದ್ದರಿಂದ ಈ ಘಟನೆಯನ್ನು ನಿರ್ಲಕ್ಷಿಸದೆ ಅರಣ್ಯಾಧಿಕಾರಿಗಳು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮೊದಲ ಟೆಸ್ಟ್‌ನ 3ನೇ ದಿನದಾಟ; ಬಾಂಗ್ಲಾದೇಶ 158/4, ವಿರಾಟ್ ಕೊಹ್ಲಿ ದಾಖಲೆ ಮುರಿದ ಶುಭ್‌ಮನ್ ಗಿಲ್

ಚೆನ್ನೈ: ಭಾರತ–ಬಾಂಗ್ಲಾದೇಶ ನಡುವಿನ ಮೊದಲ ಟೆಸ್ಟ್ ಪಂದ್ಯದ ಮೂರನೇ ದಿನದಾಟ ಮಂದಬೆಳಕಿನ ಕಾರಣ ಅಂತ್ಯವಾಗಿದ್ದು, ಬಾಂಗ್ಲಾದೇಶ 4 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿ ಸೋಲಿನ ಸಂಕಷ್ಟದಲ್ಲಿ ಸಿಲುಕಿದೆ.



ಚೆನ್ನೈನ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ನೀಡಿರುವ 515 ರನ್ ಬೃಹತ್ ಗುರಿಯನ್ನು ಬೆನ್ನು ಹತ್ತಿರುವ ಬಾಂಗ್ಲಾದೇಶ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ 158ಕ್ಕೆ 4 ಪ್ರಮುಖ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದೆ.

ಬಾಂಗ್ಲಾಪರ ಆರಂಭಿಕರಾಗಿ ಕಣಕ್ಕಿಳಿದ ಝಾಕಿರ್ ಹಸನ್ (33 ರನ್) ಮತ್ತು ಶಾದ್ಮನ್ ಇಸ್ಲಾಂ (35 ರನ್) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ ಈ ಜೋಡಿ 62ರನ್ ಕಲೆ ಹಾಕಿತು. ಆದರೆ ಈ ಹಂತದಲ್ಲಿ ದಾಳಿಗಿಳಿದ ಅಶ್ವಿನ್ ಶಾದ್ಮನ್ ಇಸ್ಲಾಂರ ವಿಕೆಟ್ ಪಡೆದರು.

ಕೊಹ್ಲಿ ದಾಖಲೆ ಮುರಿದ ಗಿಲ್: ಇನ್ನು ಈ ಪಂದ್ಯದಲ್ಲಿ ಶತಕದ ಮೂಲಕ ಭಾರತದ ಬೃಹತ್ ಮೊತ್ತಕ್ಕೆ ನೆರವಾದ ಗಿಲ್ ಭಾರತದ ರನ್ ಮೆಷಿನ್ ವಿರಾಟ್ ಕೊಹ್ಲಿ ಅವರ ದಾಖಲೆಯೊಂದನ್ನು ಹಿಂದಿಕ್ಕಿದ್ದಾರೆ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಸರಣಿಯಲ್ಲಿ ಒಟ್ಟು 62 ಇನಿಂಗ್ಸ್ ಆಡಿರುವ ಕೊಹ್ಲಿ 4 ಶತಕ ಬಾರಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಅತೀ ಹೆಚ್ಚು ಶತಕ ಸಿಡಿಸಿದ ಆಟಗಾರ ಎಂಬ ಕೀರ್ತಿ ಹೊಂದಿದ್ದರು. ಇದೀಗ 5ನೇ ಶತಕದೊಂದಿಗೆ ಶುಭ್‌ಮನ್ ಗಿಲ್ ಕೊಹ್ಲಿಯನ್ನು ಹಿಂದಿಕ್ಕಿದ್ದಾರೆ.

ಕೂರ್ಗಳ್ಳಿ ಹಾಲು ಉತ್ಪಾದಕರ ಸಂಘಕ್ಕೆ ನ್ಯಾಯಯುತ ಚುನಾವಣೆಗೆ ಆಗ್ರಹಿಸಿ ಪ್ರತಿಭಟನೆ



ಕೂರ್ಗಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಡೈರಿ ಎದುರು ಸಂಘದ ಸದಸ್ಯರು, ಷೇರುದಾರರು ಶನಿವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಸೆ.21(ಎಂಕೆ)– ಮೈಸೂರು ತಾಲೂಕಿನ ಕೂರ್ಗಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯನ್ನು ನ್ಯಾಯ ಸಮ್ಮತ ರೀತಿ ನಡೆಸುವಂತೆ ಒತ್ತಾಯಿಸಿ ಸಂಘದ ಸದಸ್ಯರು, ಷೇರುದಾರರು ಶನಿವಾರ ಗ್ರಾಮದ ಡೈರಿ ಎದುರು ದಿಢೀರ್ ಪ್ರತಿಭಟನೆ ನಡೆಸಿದರು.

ಸೆ.28 ರಂದು ಸಂಘದ ಅಧ್ಯಕ್ಷ, ಕಾರ್ಯದರ್ಶಿ ಮತ್ತು ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ನ್ಯಾಯಯುತವಾಗಿ ಚುನಾವಣೆ ನಡೆಸದೇ ಹಿಂದಿನಿಂದಲೂ ಅಧಿಕಾರದಲ್ಲಿದ್ದವರೇ ಮುಂದುವರೆಯುತ್ತಿದ್ದಾರೆ. ಹಾಲು ಉತ್ಪಾದಕರ ಸಹಕಾರ ಸಂಘದಿಂದ ಸದಸ್ಯತ್ವ ಪಡೆಯದವರೂ ಸದಸ್ಯರಾಗಿದ್ದು, ಅಕ್ರಮವಾಗಿ ಆಯ್ಕೆಯಾಗುತ್ತಿದ್ದಾರೆ ಎಂದು ದೂರಿದರು.

ಸಂಘದಿಂದ ಬೋನಸ್ ಹಣ ಕೊಡುವಾಗ ಖಾಲಿ ಕಾಗದದ ಮೇಲೆ ಷೇರುದಾರರ ಸಹಿ ಪಡೆದು, ನಂತರ ಸಹಿ ಮಾಡಿಸಿಕೊಂಡ ಖಾಲಿ ಕಾಗದದ ಮೇಲೆ ಅಧ್ಯಕ್ಷ, ಕಾರ್ಯದರ್ಶಿಗಳಾಗಿ ಮುಂದುವರೆಯಲು ಯಾವುದೇ ಅಭ್ಯಂತರ ಇಲ್ಲ. ಇವರನ್ನೇ ಮುಂದುವರಿಸಬಹುದು ಎಂದು ಷೇರುದಾರರ ಅಭಿ ಪ್ರಾಯವನ್ನು ತಾವೇ ಬರೆದುಕೊಂಡು ಮೇಲಾಧಿಕಾರಿಗಳಿಗೆ ಕೊಟ್ಟು ಇದುವರೆಗೂ ಮುಂದುವರೆದುಕೊಂಡು ಬಂದಿದ್ದಾರೆ. ಸಂಘದ ವಾರ್ಷಿಕ ಸಭೆಗಳನ್ನು ನಡೆಸುವುದಿಲ್ಲ. ವೆಚ್ಚದ ಯಾವುದೇ ಮಾಹಿತಿಯನ್ನೂ ನೀಡುವುದಿಲ್ಲ ಎಂದು ಆರೋಪಿಸಿದರು.

ಈಗಲೂ ಅವರೇ ಚುನಾವಣೆಗೆ ಸ್ಪರ್ಧೆ ಮಾಡಿದ್ದಾರೆ. ಜೊತೆಗೆ ಇವರಲ್ಲದೆ, 12 ಸ್ಥಾನಕ್ಕೆ 21 ಜನ ಸ್ಪರ್ಧೆ ಮಾಡಿದ್ದಾರೆ. ಇವರಲ್ಲಿ ಕೆಲವರು ಚುನಾವಣೆಗೆ ಸ್ಪರ್ಧೆ ಮಾಡಲು ಅನರ್ಹರು. ಸಂಘದ ಸದಸ್ಯರಲ್ಲದವರೂ ಚುನಾವಣೆಗೆ ನಿಂತಿದ್ದಾರೆ. ಹಾಗಾಗಿ ಈ ಚುನಾವಣೆಯನ್ನು ಮುಂದೂಡಬೇಕು ಇಲ್ಲವೇ ನ್ಯಾಯಯುತ ಹಾಗೂ ಕ್ರಮಬದ್ಧವಾಗಿ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದರು. ಸಂಘದ ಸದಸ್ಯರು, ಮುಖಂಡರಾದ ನಾಗರಾಜು, ಧನಂಜಯ, ನಾಗಣ್ಣ, ಜಯರಾಮು, ಅಮಿತ್, ಕೃಷ್ಣ, ಮಾದೇಶ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ರೈತರಿಗೆ ತರಬೇತಿ

ಮೈಸೂರು,ಸೆ.21–ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಸೆ.26ರಂದು 'ಕೃಷಿಯೊಂದಿಗೆ ಹೈನುಗಾರಿಕೆ' ಕುರಿತು ರೈತ/ ರೈತಮಹಿಳೆಯರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಸಕ್ತರು ತರಬೇತಿ ಸಂಯೋಜಕಿ ವಜ್ರೇಶ್ವರಿ ಮೊ: 8277933179 ಗೆ ಕರೆಮಾಡಿ ತಮ್ಮ ಹೆಸರು ನೋಂದಾಯಿಸತಕ್ಕದ್ದು. ರೈತರು ತರಬೇತಿಗೆ ಬರುವಾಗ FRUIT ನಂಬರ್, ರೇಷನ್ ಕಾರ್ಡ್, ಆಧಾರ್ ಮತ್ತು ಬ್ಯಾಂಕ್ ಪಾಸ್ ಪುಸ್ತಕ ಜೆರಾಕ್ಸ್ ಪ್ರತಿಗಳನ್ನು ತಪ್ಪದೇ ತರಬೇಕು. ಮೈಸೂರು ಜಿಲ್ಲೆಯ 50 ರೈತ/ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ

ಈದ್ ಮಿಲಾದ್ ಉನ್ ನಬಿ ಕ್ರಿಕೆಟ್ ಟೂರ್ನಮೆಂಟ್ ಟ್ರೋಫಿ ಗೆದ್ದ ಟೈಟಾನ್ ತಂಡ

ಮೂನ್‌ಸ್ಟಾರ್ ಕ್ರಿಕೆಟ್ ತಂಡ ರನ್ನರ್-ಅಪ್



ಮೈಸೂರು ಮಿಲಾದ್ ಕ್ರಿಕೆಟ್ ಅಸೋಸಿಯೇಷನ್ ವತಿಯಿಂದ ಈದ್ ಮಿಲಾದ್-ಉನ್-ನಬಿ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಟೈಟಾನ್ ಕ್ರಿಕೆಟ್ ತಂಡ ಗೆಲುವು ಸಾಧಿಸಿ ಟ್ರೋಫಿ ಪಡೆದುಕೊಂಡಿತು.

ಮೈಸೂರು,ಸೆ.21-ಮೈಸೂರು ಮಿಲಾದ್ ಕ್ರಿಕೆಟ್ ಅಸೋಸಿಯೇಷನ್ ವತಿಯಿಂದ ಈದ್ ಮಿಲಾದ್-ಉನ್-ನಬಿ ಕ್ರಿಕೆಟ್ ಟೂರ್ನಮೆಂಟ್ ಸೀಸನ್-09 ಪಂದ್ಯಗಳನ್ನು ಮೈಸೂರು ವಿವಿಯ ಪೆವಿಲಿಯನ್ ಮೈದಾನದಲ್ಲಿ ನಡೆಸಲಾಯಿತು.

ಇದರಲ್ಲಿ ಟೈಟಾನ್ ಕ್ರಿಕೆಟ್ ತಂಡ ಗೆಲುವು ಸಾಧಿಸಿ, ಮೂನ್‌ಸ್ಟಾರ್ ಕ್ರಿಕೆಟ್ ತಂಡವು ರನ್ನರ್-ಅಪ್ ಗಳಿಸಿತು.

ಒಟ್ಟು 24 ತಂಡಗಳು ಭಾಗವಹಿಸಿದ್ದವು. ಇವರ ಪೈಕಿ ಮೈಸೂರು ಟೈಟಾನ್ ಕ್ರಿಕೆಟ್ ತಂಡ ಮೊದಲ ಸ್ಥಾನವನ್ನು, ಮೂನ್ ಸ್ಟಾರ್ ಕ್ರಿಕೆಟ್ ತಂಡ 2ನೇ ಸ್ಥಾನವನ್ನು ಹಾಗೂ ಮೈಸೂರು ಟೈಟಾನ್ ಇಲೆವೆನ್ ತಂಡ 3ನೇ ಸ್ಥಾನವನ್ನು ಪಡೆದವು. ಮೈಸೂರು ಟೈಟಾನ್ ಕ್ರಿಕೆಟ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳನ್ನು ಕಳೆದುಕೊಂಡು ಒಟ್ಟು 198 ರನ್‌ಗಳನ್ನು ಗಳಿಸಿತು. ಮೂನ್‌ಸ್ಟಾರ್ ಕ್ರಿಕೆಟ್ ತಂಡವು 183 ರನ್‌ಗಳನ್ನು ಗಳಿಸಿ ಆಲ್‌ಔಟ್ ಆಯಿತು.

115 ರನ್‌ಗಳನ್ನು ಮತ್ತು 3 ವಿಕೆಟ್‌ಗಳನ್ನು ಪಡೆದ ರೋಹನ್ ನವೀನ್ ಅವರನ್ನು ಮ್ಯಾನ್ ಆಫ್ ದಿ ಮ್ಯಾಚ್ ಎಂದು ಘೋಷಿಸಲಾಯಿತು. ಇಮ್ರಾನ್ ಕೆ.ಆರ್.ಪೇಟೆ ಬೆಸ್ಟ್ ಬ್ಯಾಟ್ಸ್‌ಮನ್ ಮತ್ತು ಮ್ಯಾನ್ ಆಫ್ ದಿ ಸೀರೀಸ್ ಹಾಗೂ ಕಿಫಾಯತ್ ಬೆಸ್ಟ್ ಬೌಲರ್ ಪ್ರಶಸ್ತಿ ಪಡೆದರು.

ಮೈಸೂರು ಟೈಟಾನ್ ತಂಡದ ಸದಸ್ಯರು: ಅಬ್ದುಲ್ ಸಲಾಂ (ನಾಯಕ); ಯೂನುಸ್ ಅಲಿ ಖಾನ್, ರೋಹನ್ ನವೀನ್, ಆದಿತ್ಯ ಮಣಿ, ಸೈಯದ್ ಝೇನ್, ಹಬೀಬ್, ಸಿಬ್‌ಟೇನ್ ಅಲಿ, ಮೊಹಮ್ಮದ್ ಹಸ್ನನ್, ಮೊಹಮ್ಮದ್ ಷಫೀವುಲ್ಲಾ, ಇಮ್ರಾನ್ ಕೆ.ಆರ್.ಪೇಟೆ.

ಮೈಸೂರು ಮಿಲಾದ್ ಕ್ರಿಕೆಟ್ ಅಸೋಸಿಯೇಷನ್ ಸದಸ್ಯರಾದ ಅಕ್ರಮ್, ಝಮೀರ್ ಅಹಮದ್, ಸುಹೇಲ್ ಬೇಗ್, ಮುಬಾರಕ್, ಅಬ್ರಾರ್ ಅಹಮದ್, ಜಾವೀದ್ ಪಾಷ, ಕೌಸರ್ ಪಾಷ, ರಹಮಾನ್, ಅಝರ್, ಸಗೀರ್, ಮಹಬೂಬ್, ನೂರ್ ಅಹಮದ್, ಹಸೀಬ್, ಸೈಫ್, ಸಿದ್ಧಿಕ್, ಅಫ್ರೋಜ್ ಮತ್ತಿತರರು ಉಪಸ್ಥಿತರಿದ್ದರು.

ಕುಕ್ಕರಹಳ್ಳಿ ಪ್ರೌಢಶಾಲೆ ವಿದ್ಯಾರ್ಥಿಗಳು ವಾಲಿಬಾಲ್ ಪಂದ್ಯಾವಳಿಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆ



ಮೈಸೂರು ತಾಲೂಕು ಮಟ್ಟದ ಮಟ್ಟದ ವಾಲಿಬಾಲ್ ಕ್ರೀಡಾಕೂಟದಲ್ಲಿ ಗೆಲುವು ಸಾಧಿಸಿ, ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುವ ಕುಕ್ಕರಹಳ್ಳಿ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಶುಕ್ರವಾರ ಅಭಿನಂದಿಸಲಾಯಿತು. ಬಸವ ಮಾರ್ಗ ಸಂಸ್ಥೆಯ ಸಂಸ್ಥಾಪಕ ಬಸವಣ್ಣ, ಮುಖ್ಯ ಶಿಕ್ಷಕ ಆರ್.ಚಂದ್ರ, ದೈಹಿಕ ಶಿಕ್ಷಣ ಶಿಕ್ಷಕಿ ಜಿ.ಸಾವಿತ್ರಿ, ಸಹ ಶಿಕ್ಷಕಿ ಬಿ.ಆರ್.ವಾಣಿ ಮತ್ತಿತರರಿದ್ದರು.

ಮೈಸೂರು, ಸೆ.21(ಎಸ್‌ಬಿಡಿ)- ಬಸವ ಮಾರ್ಗ ಸಂಸ್ಥೆ ದತ್ತು ಪಡೆದಿರುವ ಮೈಸೂರಿನ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ತಾಲೂಕು ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಗೆಲುವು ಸಾಧಿಸಿ, ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆಯ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಸಹಯೋಗದಲ್ಲಿ ಇತ್ತೀಚೆಗೆ ಮಹರ್ಷಿ ಶಾಲೆ ಆವರಣದಲ್ಲಿ ನಡೆದ ತಾಲೂಕು ಮಟ್ಟದ ವಾಲಿಬಾಲ್ ಕ್ರೀಡಾಕೂಟದ ರೋಚಕ ಫೈನಲ್ ಪಂದ್ಯದಲ್ಲಿ ವಿಜಯ ವಿಠಲ ಶಾಲೆ ತಂಡವನ್ನು ಮಣಿಸುವ ಮೂಲಕ ಕುಕ್ಕರಹಳ್ಳಿ ಶಾಲೆ ತಂಡ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಹಾಗೆಯೇ ಸೆಂಟ್ ಥಾಮಸ್ ಶಾಲೆ ಆವ ರಣದಲ್ಲಿ ನಡೆದ ಅಂತರ ಪ್ರೌಢಶಾಲಾ ವಾಲಿಬಾಲ್ ಮತ್ತು ಥ್ರೋಬಾಲ್ ಪಂದ್ಯಾವಳಿಯಲ್ಲೂ ಈ ಶಾಲೆಯ ವಿದ್ಯಾರ್ಥಿಗಳು ಪಾಲ್ಗೊಂಡು ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೆ ಅಭಿನಂದನೆ: ಈ ಹಿನ್ನೆಲೆಯಲ್ಲಿ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳನ್ನು ಶುಕ್ರವಾರ ಅಭಿನಂದಿಸಲಾಯಿತು.

ಈ ವೇಳೆ ಬಸವ ಮಾರ್ಗ ಸಂಸ್ಥೆಯ ಸಂಸ್ಥಾಪಕ ಬಸವಣ್ಣ ಮಾತನಾಡಿ, ಸದೃಢ ದೇಹದಲ್ಲಿ ಮಾತ್ರ ಸದೃಢ ಮನಸ್ಸು ಇರಲು ಸಾಧ್ಯ. ನೀವು ಭಗವದ್ಗೀತೆ ಓದುವ ಮುನ್ನ ಆಟವಾಡಿ ಬೆವರು ಸುರಿಸಿ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಮಕ್ಕಳು ಪಠ್ಯಕ್ಕೆ ಸೀಮಿತವಾಗದೆ ಕ್ರೀಡಾ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ಇದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯದೊಂದಿಗೆ ಓದಿನ ಬಗ್ಗೆ ಆಸಕ್ತಿಯೂ ಹೆಚ್ಚುತ್ತದೆ ಎಂದು ಸಲಹೆ ನೀಡಿದರು.

ಇದೇ ವೇಳೆ ಶಾಲೆಯ ಶಿಕ್ಷಕರು ಹಾಗೂ ಮಕ್ಕಳು, ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಪ್ರೋತ್ಸಾಹಿಸುವ ಮೂಲಕ ಶಾಲೆಯ ಉನ್ನತಿಗೆ ಕಾರಣವಾಗಿರುವುದಾಗಿ ಬಣ್ಣಿಸಿ, ಬಸವ ಮಾರ್ಗ ಸಂಸ್ಥೆಯ ಬಸವಣ್ಣ ಅವರಿಗೆ ಕೃತಜ್ಞತೆ ಸಲ್ಲಿಸಿದರು. ಶಾಲೆಯ ಮುಖ್ಯ ಶಿಕ್ಷಕರಾದ ಆರ್.ಚಂದ್ರ, ದೈಹಿಕ ಶಿಕ್ಷಣ ಶಿಕ್ಷಕಿ ಜಿ.ಸಾವಿತ್ರಿ, ಸಹ ಶಿಕ್ಷಕಿ ಬಿ.ಆರ್.ವಾಣಿ ಮತ್ತಿತರರಿದ್ದರು.

ನೇರ ಸಂದರ್ಶನಕ್ಕೆ ಆಹ್ವಾನ

ಮೈಸೂರು, ಸೆ.21-ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಷಯಗಳ (ಖಾಯಂ ಅಧ್ಯಾಪಕರ ಭೋಧನಾ ಕಾರ್ಯಭಾರ ಹೊರತುಪಡಿಸಿ) ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಲು ನೇರ ಸಂದರ್ಶನವನ್ನು ಏರ್ಪಡಿಸಲಾಗಿದೆ. ಸಂದರ್ಶನವು ಸೆಪ್ಟೆಂಬರ್ 23, 24, ಮತ್ತು ಅಕ್ಟೋಬರ್ 05 ರಂದು ನಡೆಯಲಿದೆ. ಇದಕ್ಕೆ ಸಂಬಂಧಿಸಿದಂತೆ ಸಂಪೂರ್ಣ ವಿವರ ಹಾಗೂ ನಿಗಧಿಪಡಿಸಿದ ದಿನಾಂಕಗಳಲ್ಲಿ ಬದಲಾವಣೆಯ ಬಗ್ಗೆ ಮಾಹಿತಿಗಾಗಿ www.uni-mysore.ac.in ನ್ನು ಸಂಪರ್ಕಿಸಬಹುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಸಚಿವರು(ಸಿಬ್ಬಂದಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ಮಹಿಷ ಪ್ರತಿಮೆ ಸಮಗ್ರ ಅಧ್ಯಯನ ಅವಶ್ಯ

'ಮಹಿಷ ಮಂಡಲ ಒಂದು ಅಧ್ಯಯನ' ವಿಚಾರ ಸಂಕಿರಣ ಉದ್ಘಾಟಿಸಿದ ಮೈಸೂರು ವಿವಿ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಅಭಿಮತ



ಮಹಿಷ ದಸರಾ ಆಚರಣಾ ಸಮಿತಿ ವತಿಯಿಂದ ಮಹಿಷ ಮಂಡಲೋತ್ಸವದ ಅಂಗವಾಗಿ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ 'ಮಹಿಷ ಮಂಡಲ ಒಂದು ಅಧ್ಯಯನ' ವಿಚಾರ ಸಂಕಿರಣವನ್ನು ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಉದ್ಘಾಟಿಸಿದರು.

ಮೈಸೂರು, ಸೆ.21(ಜಿಎ)-ಚಾಮುಂಡಿ ಬೆಟ್ಟದ ಮೇಲೆ 400 ವರ್ಷಗಳ ಹಿಂದೆ ಮಹಿಷನ ಪ್ರತಿಮೆ ನಿರ್ಮಾಣವಾಗಿದೆ ಎಂದು ಹೇಳುತ್ತಾರೆ. ಆದರೆ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆಸಕ್ತರು ಇದರ ಬಗ್ಗೆ ಅಧ್ಯಯನ ಮಾಡಬೇಕು ಎಂದು ಮೈಸೂರು ವಿವಿ ವ್ಯವಹಾರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಸಲಹೆ ನೀಡಿದರು.

ಮಹಿಷ ದಸರಾ ಆಚರಣಾ ಸಮಿತಿ ವತಿಯಿಂದ ಮಹಿಷ ಮಂಡಲೋತ್ಸವದ ಅಂಗವಾಗಿ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ 'ಮಹಿಷ ಮಂಡಲ ಒಂದು ಅಧ್ಯಯನ' ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚಾಮುಂಡಿ ಬೆಟ್ಟದಲ್ಲಿರುವ ದೇವಾಲಯ, ನಂದಿ, ಮೆಟ್ಟಿಲುಗಳನ್ನು ಯಾರು ನಿರ್ಮಿಸಿದರು ಎಂಬುದರ ಬಗ್ಗೆ ಪೂರ್ಣ ಮಾಹಿತಿ ಇದೆ. ಆದರೆ, ಮಹಿಷ ಪ್ರತಿಮೆ ಯಾರು ನಿರ್ಮಾಣ ಮಾಡಿದರು, ಎಷ್ಟು ವೆಚ್ಚವಾಗಿದೆ ಎಂಬುದರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಇವುಗಳ ಮಾಹಿತಿ ಇರಬೇಕಾದರೆ, ಮಹಿಷ ಪ್ರತಿಮೆ ಬಗ್ಗೆಯೂ ಇರುತ್ತದೆ. ಆದರೆ, ಬೇಕೆಂದು ಮುಚ್ಚಿಟ್ಟಿದ್ದಾರೆ. ಅದನ್ನು ಅಧ್ಯಯನ ಮಾಡಿ ಎಂದರು.

ಮಹಾಭಾರತದಲ್ಲಿಯೂ ಮಹಿಷೂರಿನ ಬಗ್ಗೆ ಉಲ್ಲೇಖವಿದೆ. ಅಶೋಕ ಚಕ್ರವರ್ತಿಯ ಮೂರನೇ ಶತಮಾನದಲ್ಲಿ ಬೌದ್ಧ ಬಿಕ್ಕುಗಳನ್ನು ಧರ್ಮ ಪ್ರಚಾರಕ್ಕೆ ಕಳುಹಿಸಿಕೊಟ್ಟಿದ್ದರು. ಅವರೇ ಮಹಿಷ ಎಂಬ ಮಾತಿದೆ. ಈ ಎಲ್ಲಾ ಸತ್ಯ ದರ್ಶನವಾಗಬೇಕಾದರೆ, ದೃಷ್ಟಿಕೋನ ಬದಲಾಗಬೇಕು ಎಂದರು.

ಇತಿಹಾಸದಿಂದ ಪುರಾಣಕ್ಕೆ ಸಾಕಷ್ಟು ಗೊಂದಲ ಸೃಷ್ಟಿಯಾಗುತ್ತದೆ. ಇತಿಹಾಸವನ್ನು ಬರೆಯುವವರು ಪೂರ್ವಗ್ರಹ ಪೀಡಿತರಾದರೆ, ಸುಳ್ಳನ್ನು ಇತಿಹಾಸ ಎಂದು ನಂಬಿಸುತ್ತಾರೆ. ಇದೇ ರೀತಿ ಕಾಲಗರ್ಭದಲ್ಲಿ ಸಾಕಷ್ಟು ವಿಷಯಗಳು ಇರುತ್ತದೆ. ಮಹಿಷ ಮಂಡಲ ಅಂದರೆ, ಕೇವಲ ಮೈಸೂರು ನಗರವಲ್ಲ. ದಕ್ಷಿಣದ ಭಾಗವಲ್ಲ. ಇದನ್ನು ಇತಿಹಾಸ, ಆಧುನಿಕ ಇತಿಹಾಸ, ಪುರಾಣ, ಪ್ರಾಚೀನ ಇತಿಹಾಸವನ್ನು ತಿಳಿದುಕೊಳ್ಳಬೇಕು. ಆದರೆ ಕೆಲವರು ಇತಿಹಾಸಕ್ಕೂ ಪುರಾಣಕ್ಕೂ ಸಂಬಂಧ ಕಲ್ಪಿಸಿ ಚರ್ಚೆ ಮಾಡುತ್ತಾರೆ ಎಂದು ತಿಳಿಸಿದರು.

ಇತಿಹಾಸಕ್ಕೆ ಆಧಾರ ಬೇಕು. ಆಧುನಿಕ ಇತಿಹಾಸ ವಾಸ್ತವಕ್ಕೆ ಹತ್ತಿರವಾಗಿರುತ್ತದೆ. ಪ್ರಾಚೀನ ಇತಿಹಾಸಕ್ಕೆ ಕೈ ಬರಹಗಳನ್ನು ನೋಡುತ್ತೇವೆ. ಅದಕ್ಕಿಂತ ಹಿಂದಿನ ಇತಿಹಾಸವನ್ನು ತಿಳಿಯಲು ಕೆತ್ತನೆಗಳನ್ನು ನೋಡುತ್ತೇವೆ. ಕೇವಲ ವರ್ಣನೆಯಿಂದ ಮೂಡಿರುವ ಇತಿಹಾಸವೇ ಪುರಾಣವಾಗಿದೆ. ಸಾವಿರಾರು ವರ್ಷಗಳ ಇತಿಹಾಸವಿರುವ ದೇಶ ಕೆಲವೊಮ್ಮೆ ಅಸ್ತಿತ್ವವನ್ನು ಉಳಿಸಿಕೊಳ್ಳಲು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿರುತ್ತಾರೆ. ಸಾಕ್ಷಿಗಳನ್ನು ನಿರ್ಮೂಲನೆ ಮಾಡುತ್ತಾರೆ. ಸಂಪೂರ್ಣ ನಾಶವಾದಾಗ ಸತ್ಯವನ್ನು ತೋರಿಸಲು ಸಾಧ್ಯವಾಗಲ್ಲ. ಒಳ್ಳೆಯದ್ದನ್ನು ತಾವು ಹಾಕಿಕೊಂಡು ಒಳ್ಳೆಯವರು ನಮ್ಮವರು ಎಂದು ಹೇಳಿಕೊಳ್ಳುವವರ ಮನಸ್ಥಿತಿ ಇದೆ ಎಂದರು.

ಅಧ್ಯಯನ ಮಾಡುವವರು ಪ್ರಶ್ನೆ ಮಾಡಬೇಕು. ಸಾಕಷ್ಟು ಗೊಂದಲವಿರುವುದರಿಂದ ಈ ಹಬ್ಬ ಏಕೆ ಮಾಡಬೇಕು. ಹಬ್ಬಗಳ ಉದ್ದೇಶ, ಇತಿಹಾಸ, ವಿಧಾನ ಗೊತ್ತಿದ್ದರೆ ಮಾಡಬೇಕು. ಮಹಿಷ ಮಂಡಲದ ಉತ್ಸವ ಎಂದರೆ, ಹಬ್ಬ ಎಂದು ಬರುತ್ತದೆ. ಅದು ದಸರಾವೇ ಆದರೆ, ದಸರಾ ನಾಡಿನ ಪ್ರತಿಷ್ಠೆಯ ಸಂಭ್ರಮದ ಹಬ್ಬವಾಗಿದೆ. ಮೈಸೂರಿಗೂ ಈ ಹಬ್ಬಕ್ಕೂ ಏನು ಸಂಬಂಧ, ಇದರ ಬಗ್ಗೆ ಇರುವ ಕಲ್ಪನೆಯನ್ನು ಮುಕ್ತ ಮನಸ್ಸಿನಿಂದ ಅಧ್ಯಯನ ಮಾಡಬೇಕು. ಮೈಸೂರು ದಸರಾ ವಿಶ್ವವಿಖ್ಯಾತವಾಗಿದ್ದು, ಬಹಳ ವಿಸ್ತಾರವಾಗಿ ವಿವಿಧ ರೀತಿಯಲ್ಲಿ ಆಚರಣೆ ಮಾಡಲಾಗುತ್ತಿದೆ. ಇದು ವೈಚಾರಿಕ ದಸರಾವಾಗಿದ್ದು, ಮಹಿಷ ಮಂಡಲೋತ್ಸವ ಐತಿಹಾಸಿಕವಾದ ಹಬ್ಬ. ಈ ಬಗ್ಗೆ ಸರಿ ತಪ್ಪುಗಳ ಚರ್ಚೆಯಾಗಬೇಕು. ಯಾರೋ ವಿರೋಧಿಸಿದರೆ, ಸತ್ಯ ಸುಳ್ಳು ಆಗುವುದಿಲ್ಲ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮಿ, ಸಮಿತಿ ಅಧ್ಯಕ್ಷ ಪುರುಷೋತ್ತಮ್, ಚಿಂತಕ ಡಾ.ಕೃಷ್ಣಮೂರ್ತಿ ಚಮರಂ, ಮಹಿಳಾ ಹೋರಾಟಗಾರ್ತಿ ಜಯಲಕ್ಷ್ಮಿ, ಡಾ.ಸಿ.ಜಿ.ಲಕ್ಷ್ಮಿಪತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಹಿಷಾಸುರನ ಮುಚ್ಚಿಟ್ಟು ದಸರಾ ಆಚರಿಸುವುದು ಎಷ್ಟು ಸರಿ?!

ಜ್ಞಾನಪ್ರಕಾಶ್ ಸ್ವಾಮೀಜಿ ಪ್ರಶ್ನೆ

ಮೈಸೂರು: ಚಾರಿತ್ರಿಕ ಹಿನ್ನೆಲೆಯ ಮಹಿಷಾಸುರನ ಮುಚ್ಚಿಟ್ಟು ದಸರಾ ಮಾಡುವುದು ಎಷ್ಟು ಸರಿ ಎಂದು ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ಪ್ರಶ್ನಿಸಿದರು. 'ಮಹಿಷಮಂಡಲ ಒಂದು ಅಧ್ಯಯನ' ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಮುಚ್ಚಿಟ್ಟ ಇತಿಹಾಸ ಹೊರತರಬೇಕು ಎಂದರಲ್ಲದೆ, ಇಂದು ದೇಶದ ಒರಿಸ್ಸಾ, ಬಿಹಾರ, ರಾಜಸ್ಥಾನಗಳಲ್ಲೂ ಆಚರಣೆ ನಡೆಯುತ್ತಿದೆ. ವಿಶ್ವವಿದ್ಯಾಲಯದಲ್ಲಿ ಮಹಿಷಾ ಪಡೆ ರಚನೆಗೆ ಯುವಜನರೂ ಮುಂದಾಗುತ್ತಿದ್ದಾರೆ ಎಂದರು.

ಮಹಿಷಾ ದಸರಾ ಬದಲು ಮಹಿಷಾ ಮಂಡಲೋತ್ಸವ ಎಂದು ಹೆಸರು ಬದಲಾಯಿಸಲು ಕಾರಣ ಸಾಂಸ್ಕೃತಿಕ ನಗರಿಯಲ್ಲಿ ಸಂಘರ್ಷ ಬೇಡ ಎನ್ನುವುದು ನಮ್ಮ ಉದ್ದೇಶ. ನಮ್ಮ ಬುದ್ಧನ ಮಧ್ಯಮ ಮಾರ್ಗ. ಮನುಷ್ಯನ ತಲೆಗೆ ಆನೆಯನ್ನು ಜೋಡಿಸಿದರೆ ಗಣಪ ಅನ್ನುತ್ತೀರಾ, ಹಂದಿ ತಲೆಯನ್ನು ಜೋಡಿಸಿದರೆ ವರಹಾ ಎನ್ನುತ್ತೀರಾ. ಆದರೆ ಬುದ್ಧ ಧಮ್ಮದ ತ್ರಿಪಿಟಕಗಳಲ್ಲಿ ಮಹಿಷ ಪದದ ಉಲ್ಲೇಖವಿದೆ ಎಂದು ಹೇಳಿದರೆ ಪ್ರಶ್ನಿಸುತ್ತೀರಾ. ಸುಳ್ಳಿನಿಂದ ಹೊರಬಂದು ಪ್ರಬುದ್ಧ ಭಾರತವನ್ನು ನಿರ್ಮಿಸಿ ಎಂದು ಜ್ಞಾನಪ್ರಕಾಶ್ ಸ್ವಾಮೀಜಿ ಹೇಳಿದರು.

ಮಾತೆತ್ತಿದ್ದರೆ ಧರ್ಮಸ್ಥಳ ನಮ್ಮದು, ಬಾಲಾಜಿ ನಮ್ಮವ, ಅಯ್ಯಪ್ಪ ನಮ್ಮವ ಎಂದು ಹೇಳುತ್ತಾರೆ, ಅದು ಸತ್ಯ ಕೂಡ. ಈ ದೇಶದಲ್ಲಿ ಎಲ್ಲಿ ಭೂಮಿ ಅಗೆದರೂ ಸಿಗುವುದು ಬುದ್ಧನೇ, ಧಮ್ಮಚಕ್ರವೇ. ಆದರೆ, ಇಂದು ನಮ್ಮ ಆರಾಧನಾ ಸ್ಥಳಗಳು ನಮ್ಮವಾಗಿ ಉಳಿದಿಲ್ಲ. ಗಣೇಶನ ಮೂರ್ತಿ ಕೂರಿಸಿ ಪೂಜೆ ಮಾಡುತ್ತಿರುವ ನಮ್ಮವರು ಅಂಬೇಡ್ಕರ್ ಅವರು ಕೈಗಿತ್ತ ಪೆನ್ ಅನ್ನು ಮರೆತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ದೇಶದ ದೊಡ್ಡ ಸುಳ್ಳಿನ ಕಾರ್ಖಾನೆ ನಾಗಪುರದ ಕಾರ್ಯಾಲಯವಾಗಿದ್ದು, ಇತಿಹಾಸವನ್ನು ಮುಚ್ಚಿಹಾಕಲು. ಅದು ಸೃಷ್ಟಿಸಿದ ವಿಚಾರಗಳ ಪರಿಣಾಮ ಮೊದಲು ತಟ್ಟಿದ್ದು ದಲಿತರನ್ನು, ಇದಕ್ಕೆ ಪ್ರತಿರೋಧವಾಗಿಯೇ ಅಂಬೇಡ್ಕರ್ ನಾಗಪುರದಲ್ಲಿ ಬುದ್ಧ ಧಮ್ಮವನ್ನು ಅಪ್ಪಿಕೊಂಡರು. ಇತಿಹಾಸವನ್ನು ಮರೆತ ಸಮುದಾಯವು ತನ್ನ ಸಮಾಧಿಯನ್ನು ತಾನೇ ತೋಡಿಕೊಳ್ಳುತ್ತದೆ. ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ ನಾಗಪುರದ ಕಾರ್ಯಾಲಯವು ನಮ್ಮನ್ನು ಸಂಪೂರ್ಣ ನಾಶ ಮಾಡುತ್ತದೆ ಎಂದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಸೆ.21- ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿ ನಿರ್ವಹಣಾ ಕೆಲಸದ ನಿಮಿತ್ತ ಸೆ.22ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಎಕ್ಸೆಲ್ ಪಬ್ಲಿಕ್ ಶಾಲೆ, ವಿನ್ಯಾಸ್, ಕೂರ್ಗಳ್ಳಿ ಕೆರೆ ಸುತ್ತಮುತ್ತ ಗೋಪಾಲನ್ ಕಾಂಪೌಂಡ್, ವಿಪ್ರೋ, ಮೆರಿಟಾರ್, ಪಟ್ಟಾಬಿ ಎಂಟರ್‌ಪ್ರೈಸಸ್, ಮಿಲೆನಿಯಂ, ಎಲ್&ಟಿ, ಮಾರ್ಕ್ ಬ್ಯಾಟರಿಸ್ ರಸ್ತೆ, ಚಾಮುಂಡಿ ಸಿಲ್ಕ್ಸ್ ಹಾಗೂ ಸುತ್ತಮುತ್ತ ಹಾಗೂ M/s, BEML, M/s, Auto motive Axles, M/s, Infosysನ ಇ.ಹೆಚ್.ಟಿ ಪ್ರದೇಶಗಳಲ್ಲಿ ಹಾಗೂ ಕಡಕೊಳ ವಿದ್ಯುತ್ ಸ್ವೀಕರಣಾ ವ್ಯಾಪ್ತಿಯ ಕಡಕೊಳ, ಕೆ.ಐ.ಎ.ಡಿ.ಬಿ ಇಂಡಸ್ಟ್ರೀ ಯಲ್ ಏರಿಯಾ, ಬ್ಯಾತಹಳ್ಳಿ, ಸಿಂಧುವಳ್ಳಿ, ದಡದಹಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ, ಮರಸೆ, ಮಾಕನಹುಂಡಿ, ಕೂಡನಹಳ್ಳಿ, ಕೋಚನಹಳ್ಳಿ, ವಿಮಾನ ನಿಲ್ದಾಣ, ಬಿರೇ ಗೌಡನಹುಂಡಿ, ಕೆ.ಎಂ. ಹುಂಡಿ, ಬಿ.ಜಿ ಹುಂಡಿ, ಕೆ.ಎನ್. ಹುಂಡಿ, ಆಯರಹಳ್ಳಿ, ಕಿರಾಳು, ದೂರ, ಮುರುಡಗಳ್ಳಿ, ತಳೂರು, ಡಿ. ಕಾಟೂರು, ಟಿ.ವಿ.ಎಸ್. ಫ್ಯಾಕ್ಟರಿ ಹಾಗೂ ಸುತ್ತಮುತ್ತ ವಿದ್ಯುತ್ ಸರಬ ರಾಜಿನಲ್ಲಿ ವ್ಯತ್ಯಯವಾಗಲಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಹುಟ್ಟುಹಬ್ಬ: ರಕ್ತದಾನ ಶಿಬಿರ



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ವರುಣಾ ವಿಧಾನಸಭಾ ಕ್ಷೇತ್ರದ ವರುಣಾ ಗ್ರಾಮದಲ್ಲಿ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಇದಕ್ಕೆ ಚಾಲನೆ ನೀಡಿ, ಪ್ರಧಾನಿಯವರ ಸೇವಾ ಕಾರ್ಯಗಳನ್ನು ಪ್ರಶಂಶಿಸಿದರು. ಈ ವೇಳೆ ನಗರ್ಲೆ ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಸದಾನಂದ, ಕೆ.ಎಸ್.ಮಾದಪ್ಪ, ಗುರುಸ್ವಾಮಿ, ಎಳವರಹುಂಡಿ ಸಿದ್ದಪ್ಪ, ವಾಸು, ಶರತ್ ಪುಟ್ಟಬುದ್ಧಿ, ವರುಣಾ ಮಧು, ಮಂಜುನಾಥ್, ಹದಿನಾರು ನಂಜುಂಡಸ್ವಾಮಿ, ಶ್ರೀಧರ್, ಸಂತೋಷ್ ಇತರರು ಉಪಸ್ಥಿತರಿದ್ದರು.

2019ರಿಂದ 2023ರ ಅವಧಿಯ ಟಿಎಸ್‌ಆರ್, ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿ ಪ್ರಕಟ

ಬೆಂಗಳೂರು, ಸೆ.21- ಕನ್ನಡ ಪತ್ರಿಕೋದ್ಯಮದಲ್ಲಿ ಅನುಪಮ ಸೇವೆ ಸಲ್ಲಿಸಿದ ಪತ್ರಕರ್ತರಿಗೆ ನೀಡುವ ಟಿ.ಎಸ್.ರಾಮಚಂದ್ರ ರಾವ್ (ಟಿಎಸ್‌ಆರ್)ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಕನ್ನಡ ಪತ್ರಿಕೆ ಅಥವಾ ಪತ್ರಿಕಾ ಸಮೂಹವನ್ನು ಕಟ್ಟಿ ಬೆಳೆಸಿದ ಪತ್ರಕರ್ತರ ಸಾಧನೆ ಗುರುತಿಸಿ ನೀಡುವ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರಕಟಿಸಿದೆ.

ಕೋವಿಡ್ ಸೇರಿ ನಾನಾ ಕಾರಣಗಳಿಂದ ವಿಳಂಬವಾಗಿದ್ದ 2019ರಿಂದ 2023ನೇ ಸಾಲಿನ ಒಟ್ಟು 5 ವರ್ಷಗಳ ಅವಧಿಯ ಪ್ರಶಸ್ತಿಗಳನ್ನು ಘೋಷಿಸಲಾಗಿದೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅಧ್ಯಕ್ಷತೆಯ ರಚಿತವಾದ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಹಿರಿಯ ಪತ್ರಕರ್ತರಾದ ಡಾ.ಈಶ್ವರ ದೈತೋಟ, ಶಾಂತಲಾ ಧರ್ಮರಾಜ್, ಎಂ.ಎಸ್.ಮಣಿ ಹಾಗೂ ಸದಸ್ಯ ಕಾರ್ಯದರ್ಶಿಗಳಾದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ್ ಅವರಿದ್ದರು. ಈ ಸಮಿತಿಯ ಶಿಫಾರಸ್ಸುಗಳನ್ನು ಸರಕಾರ ಅನುಮೋದಿಸಿ ಪ್ರಶಸ್ತಿ ಘೋಷಿಸಿದೆ.



ಟಿಎಸ್‌ಆರ್ ಪ್ರಶಸ್ತಿ

2019ನೇ ಸಾಲಿಗೆ ಶಿವಾಜಿ ಎಸ್. ಗಣೇಶನ್: ಇವರು 1978ರಿಂದ ಪ್ರಜಾ ವಾಣಿ ಕನ್ನಡ ದಿನಪತ್ರಿಕೆಯ ವಿವಿಧ ಹುದ್ದೆಗಳಲ್ಲಿ ಸುಮಾರು 33 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ತುಮಕೂರು, ನವದೆಹಲಿ ಸೇರಿದಂತೆ ವಿವಿಧೆಡೆ ವರದಿಗಾರರಾಗಿ ಸೇವೆ ಸಲ್ಲಿಸಿ, ಪ್ರಸ್ತುತ ಆಂದೋಲನ ದಿನಪತ್ರಿಕೆಯಲ್ಲಿ ಅಂಕಣ ಬರಹ ಮುಂದುವರಿಸಿದ್ದಾರೆ.

2020ನೇ ಸಾಲಿಗೆ ಶ್ರೀಕಾಂತಾಚಾರ್ಯ ಆರ್.ಮಣೂರ: 1973ರಿಂದ ಸಂಯುಕ್ತ ಕರ್ನಾಟಕದಲ್ಲಿ ಸೇವೆ ಆರಂಭಿಸಿದ ಇವರು ಇದೇ ಪತ್ರಿಕೆಯ ವಿವಿಧ ಹುದ್ದೆಗಳಲ್ಲಿ 44 ವರ್ಷಗಳ ಸೇವೆ ಸಲ್ಲಿಸಿ ಕಲಬುರಗಿ ಆವೃತ್ತಿಯ ಕಾರ್ಯನಿರ್ವಾಹಕ ಸಂಪಾದಕರಾಗಿ ನಿವೃತ್ತರಾಗಿದ್ದಾರೆ

2021ನೇ ಸಾಲಿಗೆ ಡಾ.ಆರ್. ಪೂರ್ಣಿಮಾ: 1981ರಿಂದ ವೃತ್ತಿ ಆರಂಭಿಸಿದ ಅವರು ಪ್ರಜಾವಾಣಿ ಉದಯವಾಣಿಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ, ವಿವಿಧ ಮಾಧ್ಯಮ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಿದ ಅನುಭವ ಹೊಂದಿದ್ದಾರೆ. ಕನ್ನಡದ ಪ್ರಮುಖ ದಿನಪತ್ರಿಕೆಯ ಸಂಪಾದಕ ಸ್ಥಾನದ ಜವಾಬ್ದಾರಿ ಹೊತ್ತ ಪ್ರಥಮ ಮಹಿಳೆ ಎಂಬ ಹಿರಿಮೆ ಇವರದ್ದು.

2022ನೇ ಸಾಲಿಗೆ ಡಾ.ಪದ್ಮರಾಜ ದಂಡಾವತಿ: ಇವರು 1982ರಲ್ಲಿ ಪ್ರಜಾವಾಣಿಗೆ ಸೇರಿ 36 ವರ್ಷಗಳಿಗೂ ಹೆಚ್ಚು ಕಾಲ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಕಾರ್ಯನಿರ್ವಾಹಕ ಸಂಪಾದಕರಾಗಿ ನಿವೃತ್ತರಾಗಿದ್ದಾರೆ.

2023ನೇ ಸಾಲಿಗೆ ಡಾ.ಸರಜೂ ಕಾಟ್ಕರ್: ಇವರು ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ದಿ ಇಂಡಿಯನ್ ಎಕ್ಸ್‌ಪ್ರೆಸ್ ಸೇರಿದಂತೆ ವಿವಿಧ ಪತ್ರಿಕೆಗಳಲ್ಲಿ 45 ವರ್ಷ ಕಾಲ ಸೇವೆ ಸಲ್ಲಿಸಿದ್ದಾರೆ.

ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿ

2019ನೇ ಸಾಲಿಗೆ ಗದಗ ಜಿಲ್ಲೆಯ ಬೆಟಗೇರಿಯ ನವೋದಯ ದಿನಪತ್ರಿಕೆ ಸಂಪಾದಕ ರಾಜೀವ್ ಕಿದಿಯೂರ, 2020ನೇ ಸಾಲಿಗೆ ಸಂವಾದ ಮಾಸಪತ್ರಿಕೆ ಸಂಪಾದಕ ಇಂದೂಧರ ಹೊನ್ನಾಪುರ, 2021ನೇ ಸಾಲಿಗೆ ಶಿವಮೊಗ್ಗದ ಕ್ರಾಂತಿದೀಪ ಕನ್ನಡ ದಿನಪತ್ರಿಕೆ ಸಂಪಾದಕ ಎನ್.ಮಂಜುನಾಥ, 2022ನೇ ಸಾಲಿಗೆ ಮುಂಬೈನ ಕರ್ನಾಟಕ ಮಲ್ಲ ಪತ್ರಿಕೆ ಸಂಪಾದಕ ಚಂದ್ರಶೇಖರ್ ಪಾಲೆತ್ತಾಡಿ, 2023ನೇ ಸಾಲಿಗೆ ಕಲಬುರಗಿಯ ಕರ್ನಾಟಕ ಸಂಧ್ಯಾಕಾಲ ಸಂಜೆ ದಿನ ಪತ್ರಿಕೆ ಸಂಪಾದಕ ಶಿವಲಿಂಗಪ್ಪ ದೊಡ್ಡಮನಿ ಅವರನ್ನು ಆಯ್ಕೆ ಮಾಡಲಾಗಿದೆ. ಇವೆರಡೂ ಪ್ರಶಸ್ತಿಗಳು 2 ಲಕ್ಷ ರೂ. ನಗದು ಹಾಗೂ ಸ್ಮರಣಿಕೆಗಳನ್ನು ಒಳಗೊಂಡಿರುತ್ತವೆ. ಪ್ರಶಸ್ತಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಶೀಘ್ರದಲ್ಲೇ ಹಮ್ಮಿಕೊಳ್ಳಲಾಗುವುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ವಾಷಿಂಗ್ಟನ್ ಡಿಸಿಯಲ್ಲಿ ಭಾರತೀಯ ರಾಯಭಾರಿ ಕಚೇರಿ ಅಧಿಕಾರಿ ನಿಗೂಢ ಸಾವು

ವಾಷಿಂಗ್ಟನ್ ಡಿಸಿ: ಭಾರತೀಯ ರಾಯಭಾರಿ ಕಚೇರಿಯ ಅಧಿಕಾರಿಯೊಬ್ಬರು ಸೆ.18ರಂದು ವಾಷಿಂಗ್ಟನ್ ಡಿ.ಸಿಯಲ್ಲಿರುವ ರಾಯಭಾರ ಕಚೇರಿಯ ಆವರಣದಲ್ಲಿ ನಿಗೂಢವಾಗಿ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಭಾರತೀಯ ರಾಯಭಾರ ಕಚೇರಿಯು ಈ ಘಟನೆಯನ್ನು ದೃಢಪಡಿಸಿದೆ. ಪ್ರಸ್ತುತ ಸ್ಥಳೀಯ ಪೊಲೀಸರು ಮತ್ತು ಗುಪ್ತಚರ ಇಲಾಖೆಯಿಂದ ತನಿಖೆ ನಡೆಯುತ್ತಿದೆ. ರಾಯಭಾರ ಕಚೇರಿಯು ಅಧಿಕಾರಿಯ ನಿಧನದ ಬಗ್ಗೆ ತೀವ್ರ ವಿಷಾದವನ್ನು ವ್ಯಕ್ತಪಡಿಸಿದೆ. ಸೆ.18ರ ಸಂಜೆ ಭಾರತೀಯ ರಾಯಭಾರ ಕಚೇರಿಯ ಸದಸ್ಯರೊಬ್ಬರು ನಿಧನರಾಗಿದ್ದಾರೆ. ದೇಹವನ್ನು ತ್ವರಿತವಾಗಿ ಭಾರತಕ್ಕೆ ಹಿಂದಿರುಗಿಸಲು ಅನುಕೂಲವಾಗುವಂತೆ ಸಂಬಂಧಿತ ಏಜೆನ್ಸಿಗಳು ಮತ್ತು ಮೃತರ ಕುಟುಂಬದೊಂದಿಗೆ ನಿಕಟ ಸಂವಹನ ನಡೆಸಲಾಗುತ್ತಿದೆ ಎಂದು ರಾಯಭಾರ ಕಚೇರಿ ತಿಳಿಸಿದೆ. ಆತ್ಮಹತ್ಯೆಯ ಸಾಧ್ಯತೆ ಸೇರಿದಂತೆ ಸಾವಿಗೆ ನಿರ್ದಿಷ್ಟ ಕಾರಣ ತಿಳಿಯಲು ಅಧಿಕಾರಿಗಳು ವಿವಿಧ ಕೋನಗಳನ್ನು ಪರಿಶೀಲಿಸುತ್ತಿದ್ದಾರೆ. ತನಿಖೆಯು ಎಲ್ಲಾ ಮಾರ್ಗಗಳನ್ನು ಹುಡುಕಲಾಗುತ್ತಿದ್ದು, ಕಾನೂನು ಜಾರಿ ನಿರ್ದೇಶನಾಲಯದೊಂದಿಗೆ ಸಂಪೂರ್ಣ ಸಹಕರಿಸುತ್ತಿದ್ದೇವೆ ಎಂದು ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಏರ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ವಾಯುಪಡೆ ಮುಂದಿನ ಮುಖ್ಯಸ್ಥ

ನವದೆಹಲಿ: ಪ್ರಸ್ತುತ ವಾಯುಪಡೆಯ ಉಪ ಮುಖ್ಯಸ್ಥರಾಗಿರುವ ಏರ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಅವರನ್ನು ವಾಯುಪಡೆಯ ಮುಂದಿನ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಅವರು ಸೆ. 30 ರಂದು ಏರ್ ಚೀಫ್ ಮಾರ್ಷಲ್ ವಿವೇಕ್ ರಾಮ್ ಚೌಧರಿ ಅವರಿಂದ ವಾಯುಪಡೆಯ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.



ವಾಯುಸೇನೆಯಲ್ಲಿ ಅಮರ್ ಪ್ರೀತ್ ಸಿಂಗ್ ಅವರು ಸುಮಾರು 40 ವರ್ಷಗಳ ಕಾಲ ಸುದೀರ್ಘ ಮತ್ತು ವಿಶಿಷ್ಟ ಸೇವೆಯನ್ನು ನೀಡಿದ್ದಾರೆ. ಸಿಂಗ್ ಅವರನ್ನು ಡಿಸೆಂಬರ್ 1984ರಲ್ಲಿ ಭಾರತೀಯ ವಾಯುಪಡೆಯ ಫೈಟರ್ ಪೈಲಟ್ ಸ್ಟ್ರೀಮ್‌ಗೆ ನಿಯೋಜಿಸಲಾಗಿತ್ತು. ವಿವಿಧ ಕಮಾಂಡ್, ಸಿಬ್ಬಂದಿ, ಸೂಚನಾ ಮತ್ತು ವಿದೇಶಿ ನೇಮಕಾತಿಗಳಲ್ಲಿ ಅಪಾರವಾದ ಅನುಭವವನ್ನು ಹೊಂದಿದ್ದಾರೆ. ಅವರು ರಾಷ್ಟ್ರೀಯ ರಕ್ಷಣಾ ಅಕಾಡೆಮಿ, ರಕ್ಷಣಾ ಸೇವೆಗಳ ಸಿಬ್ಬಂದಿ ಕಾಲೇಜು ಮತ್ತು ರಾಷ್ಟ್ರೀಯ ರಕ್ಷಣಾ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿದ್ದು, ಏರ್ ಆಫೀಸರ್ ಅರ್ಹ ಫ್ಲೈಯಿಂಗ್ ಬೋಧಕ ಮತ್ತು ಪ್ರಾಯೋಗಿಕ ಪರೀಕ್ಷಾ ಪೈಲಟ್ ಆಗಿದ್ದು, ವಿವಿಧ ಸ್ಥಿರ ಮತ್ತು ರೋಟರಿ-ವಿಂಗ್ ವಿಮಾನಗಳಲ್ಲಿ 5,000 ಗಂಟೆಗಳ ಹಾರಾಟದ ಅನುಭವ ಹೊಂದಿದ್ದಾರೆ.

ಬ್ಯೂಟಿಫುಲ್ ಗವರ್ನರ್‌ಗೆ 13 ವರ್ಷ ಜೈಲು ಶಿಕ್ಷೆ

ಚೀನಾ: ಚೀನಾದಲ್ಲಿ ಮಹಿಳಾ ಅಧಿಕಾರಿಯೊಬ್ಬರು ತೋರಿದ ದುರ್ವರ್ತನೆಗಾಗಿ 13 ವರ್ಷಗಳ ಜೈಲು ಶಿಕ್ಷೆ ಮತ್ತು ಒಂದು ಮಿಲಿಯನ್ ಯುವಾನ್ (ಅಂದಾಜು 1.18 ಕೋಟಿ) ದಂಡ ವಿಧಿಸಲಾಗಿದೆ. ತನ್ನ ನೋಟದಿಂದಲೇ 'ಬ್ಯೂಟಿಫುಲ್ ಗವರ್ನರ್' ಅಡ್ಡಹೆಸರು ಹೊಂದಿದ್ದ ಜಾಂಗ್ ಯಾಂಗ್ ಗಿಜೌ ಪ್ರಾಂತ್ಯದ ಕ್ವಿಯಾನ್ನನ್ ಪ್ರಿಫೆಕ್ಚರ್‌ನಲ್ಲಿ ಚೀನಾದ ಕಮ್ಯುನಿಸ್ಟ್ ಪಾರ್ಟಿ ಗವರ್ನರ್ ಮತ್ತು ಉಪ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಈಕೆ 58 ಪುರುಷ ಅಧೀನ ಅಧಿಕಾರಿಗಳೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದಾಳೆ ಮತ್ತು ಸುಮಾರು 60 ಮಿಲಿಯನ್ ಯುವಾನ್ ಲಂಚವನ್ನು ಸ್ವೀಕರಿಸಿದ್ದಾಳೆ ಎಂದು ಆರೋಪಿಸಲಾಗಿದೆ. 52 ವರ್ಷ ವಯಸ್ಸಿನ ಜಾಂಗ್ ನೀಡಿದ ಅನುಕೂಲಗಳಿಂದಾಗಿ ಕೆಲವರು ಆಕೆಯ ಪ್ರೇಮಿಯಾಗಲು ಕೂಡ ಸಿದ್ಧರಿದ್ದರು. ಆದರೆ ಇತರರು ಆಕೆಯ ಅಧಿಕಾರಕ್ಕೆ ಹೆದರಿ ಇಷ್ಟವಿಲ್ಲದೆ ಈ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಜಾಂಗ್ ಅವರು ಅಧಿಕಾರವಧಿ ಕೆಲಸ ಮತ್ತು ವ್ಯಾಪಾರ ಪ್ರವಾಸಗಳಿಗೆ ಹೋಗುವ ನೆಪದಲ್ಲಿ ತನ್ನ ಪ್ರೇಮಿಗಳೊಂದಿಗೆ ಸಮಯ ಕಳೆಯುತ್ತಿದ್ದರು ಎಂದು ವರದಿ ತಿಳಿಸಿದೆ. ಜಾಂಗ್ ಅವರನ್ನು ಏಪ್ರಿಲ್ 2023ರಲ್ಲಿ ಬಂಧಿಸಲಾಗಿತ್ತು.



ಲೆಬನಾನ್‌ನಲ್ಲಿ ಪೇಜರ್‌ಗಳ ಸ್ಫೋಟ: ಕೇರಳ ಮೂಲದ ವ್ಯಕ್ತಿಯ ಕೈವಾಡ!

ಲೆಬನಾನ್: ಲೆಬನಾನ್‌ನಲ್ಲಿ ಪೇಜರ್‌ಗಳ ಸ್ಫೋಟಕ್ಕೆ ಸಂಬಂಧಿಸಿದಂತೆ ನಾರ್ವೆಯಲ್ಲಿರುವ ಕೇರಳ ಮೂಲದ ವ್ಯಕ್ತಿ ರಿನ್ಸನ್ ಜೋಸ್ ಈ ಕೃತ್ಯದಲ್ಲಿ ಭಾಗಿಯಾಗಿದ್ದಾನೆ ಎಂದು ಹೇಳಲಾಗಿದೆ. ಈ ವ್ಯಕ್ತಿ ನಾರ್ವೇಜಿಯನ್‌ಕ್ಕೆ ಡಿಜಿಟಲ್ ಕಂಪನಿಯ ಬಗ್ಗೆ ಕಲಿಯಲು ಬಂದಿದ್ದ ಎಂದು ಹೇಳಲಾಗಿದೆ. ರಿನ್ಸನ್ ಜೋಸ್ ಕೇರಳದ ವಯನಾಡಿನವನು. ಈ ಉಗ್ರಗಾಮಿ ಗುಂಪಿಗೆ ಪೇಜರ್‌ಗಳ ಪೂರೈಕೆಯಲ್ಲಿ ತೊಡಗಿಸಿಕೊಂಡಿದ್ದ ಎಂದು ವರದಿ ಹೇಳಿದೆ. ಪೇಜರ್‌ಗಳು ಸ್ಫೋಟಗೊಂಡ 2 ದಿನಗಳ ನಂತರ, ಬಲ್ಗೇರಿಯನ್ ರಾಜ್ಯ ಭದ್ರತಾ ಸಂಸ್ಥೆ DANS, ದೇಶದ ಆಂತರಿಕ ಸಚಿವಾಲಯದೊಂದಿಗೆ ಸಮಾಲೋಚನೆ ನಡೆಸಿದೆ. ಈಗಾಗಲೇ ಪ್ರಾಥಮಿಕ ತನಿಖೆಯಲ್ಲಿ ಕೇಳಿ ಬಂದಿರುವ ಕಂಪನಿಗಳನ್ನು ತನಿಖೆ ನಡೆಸಲಾಗುತ್ತದೆ. ನಾರ್ಟಾಗ್ಲೋಬಲ್ ಲಿಮಿಟೆಡ್ ಈ ಸ್ಫೋಟಕಗಳನ್ನು ನೀಡಿದೆ ಎಂದು ಹೇಳಲಾಗಿದೆ. ಈ ಈ ಕಂಪನಿ ನಾರ್ವೇಜಿಯನ್‌ನಲ್ಲಿರುವ ರಿನ್ಸನ್ ಜೋಸ್ ಅವರ ಒಡೆತನದಲ್ಲಿದೆ ಎಂದು ಹೇಳಲಾಗಿದೆ. ಇನ್ನು ಸ್ಫೋಟಗೊಂಡ ಪೇಜರ್‌ಗಳನ್ನು ಬಲ್ಗೇರಿಯಾದಲ್ಲಿ ಯಾವುದೇ ವಸ್ತುಗಳನ್ನು ತಯಾರಿಸಲು, ಆಮದು ಮಾಡಿಕೊಳ್ಳಲು, ರಫ್ತು ಮಾಡಲು ಬಳಸಿಲ್ಲ. ಒಟ್ಟಿನಲ್ಲಿ ಭಯೋತ್ಪಾದನಾ ಕೃತ್ಯಕ್ಕಾಗಿ ಬಳಸಲಾಗಿದೆ ಎಂದು DANS ಹೇಳಿದೆ.



ಟರ್ಕಿಯ ಭಾರತದ ನೂತನ ರಾಯಭಾರಿ ಮುಕ್ತೇಶ್‌ಕುಮಾರ್ ಪರದೇಶಿ


ನವದೆಹಲಿ: ಮಧ್ಯಪ್ರಾಚ್ಯ ಸೇರಿದಂತೆ ಪ್ರಾದೇಶಿಕ ಬಿಕ್ಕಟ್ಟುಗಳ ಪರಿಹಾರದಲ್ಲಿ ಭಾರತ ಪ್ರಮುಖ ರಾಷ್ಟ್ರವಾಗಿ ಹೊರಹೊಮ್ಮಿರುವಂತೆಯೇ ಅನುಭವಿ ರಾಯಭಾರಿ ಮುಕ್ತೇಶ್‌ಕುಮಾರ್ ಪರದೇಶಿ ಅವರನ್ನು ಟರ್ಕಿಯ ಭಾರತದ ನೂತನ ರಾಯಭಾರಿಯಾಗಿ ನೇಮಿಸಲಾಗಿದೆ.



ಪರದೇಶಿ ಅವರು, 1991-ಬ್ಯಾಚ್‌ನ ಭಾರತೀಯ ವಿದೇಶಾಂಗ ಸೇವಾ ಅಧಿಕಾರಿಯಾಗಿದ್ದು, ಪ್ರಸ್ತುತ ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಶೀಘ್ರದಲ್ಲಿಯೇ ಅಧಿಕಾರ ವಹಿಸಿಕೊಳ್ಳುವ ಸಾಧ್ಯತೆಯಿದೆ ಎಂದು MEA ಹೇಳಿಕೆಯಲ್ಲಿ ತಿಳಿಸಿದೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಭಾರತ ಆಯೋಜಿಸಿದ್ದ ಜಿ-20 ಶೃಂಗಸಭೆಯ ಯಶಸ್ವಿ ಹಾಗೂ ಉಕ್ರೇನ್ ಸಂಘರ್ಷದ ಬಗ್ಗೆ ಭಿನ್ನಾಭಿಪ್ರಾಯ ನಿವಾರಿಸುವ ಮೂಲಕ ನಾಯಕರ ಘೋಷಣೆ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಉನ್ನತ ಅಧಿಕಾರಿಗಳ ಗುಂಪಿನಲ್ಲಿ ಪರದೇಶಿ ಪ್ರಮುಖರಾಗಿದ್ದರು. ವಿರಂದರ್ ಪಾಲ್ ಅವರ ನಿಧನದ ನಂತರ ಟರ್ಕಿಯ ಭಾರತದ ರಾಯಭಾರಿ ಹುದ್ದೆಯು ಜೂನ್‌ನಿಂದ ತೆರವಾಗಿದೆ.

ಕಾಫಿ ಕ್ರಾಪ್ ಮೊಬೈಲ್ ಅಪ್ಲಿಕೇಷನ್ ಬಿಡುಗಡೆ

ಕೃಷಿಯಲ್ಲಿ ತಂತ್ರಜ್ಞಾನ ಬಳಕೆ ಭವಿಷ್ಯಕ್ಕೆ ಲಾಭ : ಸಂಸದ ಯದುವೀರ್ ಅಭಿಮತ



ಪೊನ್ನಂಪೇಟೆ ತಾಲೂಕಿನ ಹಳ್ಳಿಗಟ್ಟು ಸಿ.ಐ.ಟಿ ಕಾಲೇಜಿನ ವಿನೂತನ ಆವಿಷ್ಕಾರದ ಕಾಫಿ ಕ್ರಾಪ್ ಕೇರ್ ಮೊಬೈಲ್ ಅಪ್ಲಿಕೇಷನ್ ಬಿಡುಗಡೆಗೊಳಿಸಲಾಯಿತು.

ಗೋಣಿಕೊಪ್ಪ, ಸೆ.21– ಕೃಷಿಯಲ್ಲಿ ತಂತ್ರಜ್ಞಾನ ಬಳಕೆ ಭವಿಷ್ಯಕ್ಕೆ ಲಾಭ ಎಂದು ಮೈಸೂರು – ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಪೊನ್ನಂಪೇಟೆ ತಾಲೂಕಿನ ಹಳ್ಳಿಗಟ್ಟು ಸಿ.ಐ.ಟಿ ಕಾಲೇಜಿನ ವಿನೂತನ ಆವಿಷ್ಕಾರವಾದ ಕಾಫಿ ಕ್ರಾಪ್ ಕೇರ್ ಮೊಬೈಲ್ ಅಪ್ಲಿಕೇಷನ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಜಿಲ್ಲೆಯ ವಿಶೇಷತೆಯ ಭಾಗವಾಗಿದೆ. ಭಾರತ ದೇಶ ವಿಶ್ವ ಮಟ್ಟದಲ್ಲಿ ವಿಶೇಷತೆಯನ್ನು ಕಾಪಾಡಿಕೊಂಡಿದೆ. ಕಾಫಿ ಉದ್ಯಮದಿಂದ ಕಾಫಿ ಬೆಳೆ ಮತ್ತು ಪ್ರಕೃತಿ ಪೋಷಣೆಗೂ ಪೂರಕ ವಾತಾವರಣ ಸೃಷ್ಟಿಯಾಗಿದೆ. ಕಾಫಿ ಬೆಳೆಯಲ್ಲಿನ ನೂತನ ತಂತ್ರಜ್ಞಾನದಿಂದ ದೇಶಕ್ಕೂ ಲಾಭವಿದೆ ಎಂದು ಅಭಿಪ್ರಾಯಪಟ್ಟರು. ಕೊಡಗು ಜಿಲ್ಲೆ ಅಭಿವೃದ್ಧಿ ಪೂರಕವಾಗಿದೆ. ಇಲ್ಲಿನ ವಾತಾವರಣ, ಪರಿಸರ ಪೋಷಣೆ ದೇಶಕ್ಕೆ ಲಾಭವಾಗಿದೆ. ಕಾಲೇಜಿನ ವಿನೂತನ ಆವಿಷ್ಕಾರವಾದ ಕಾಫಿ ಕ್ರಾಪ್ ಕೇರ್ ಮೊಬೈಲ್ ಅಪ್ಲಿಕೇಷನ್ ರೈತರಿಗೆ ವರದಾನ ಆಗಬೇಕಿದೆ ಎಂದರು.

ವಿದ್ಯಾರ್ಥಿಗಳ ಪ್ರಯತ್ನ ದೇಶಕ್ಕೆ ಲಾಭವಾಗಬೇಕಿದೆ. ಸಾಕಷ್ಟು ಯೋಜನೆಗಳು ನವೋದ್ಯಮಿಗಳ ಉದಯಕ್ಕೆ ನೆರವಾಗುತ್ತಿದೆ. ತಂತ್ರಜ್ಞಾನ ನೆರವಾಗುವಂತಾಗಬೇಕಿದೆ ಎಂದರು.

ಕೋಕೆನ್ ರೊಬೊಟಿಕ್ಸ್ ಸಿಇಒ ಕೊಕ್ಕೇಂಗಡ ದರ್ಶನ್ ಮಾತನಾಡಿ, ತಂತ್ರಜ್ಞಾನ ಭವಿಷ್ಯಕ್ಕೆ ನೆರವಾಗುವ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. ಕೃಷಿಯಲ್ಲಿ ಕೂಡ ತಂತ್ರಜ್ಞಾನದ ಬಳಕೆ ಹೆಚ್ಚು ಪ್ರಯೋಜನಕಾರಿ ಎಂದರು.

ಮೆಚ್ಚುಗೆ; ತಂತ್ರಜ್ಞಾನ ಕಾಫಿ ಬೆಳೆಗಾರರಿಗೆ ಕಾಫಿ ಬೆಳೆಯಲು ಇಳುವರಿ ಹೆಚ್ಚಿಸುವ ಕುರಿತು, ಗುಣಮಟ್ಟ ಕಾಯ್ದುಕೊಳ್ಳುವ ಕುರಿತು ಅಗತ್ಯ ಮಾಹಿತಿಯನ್ನು ಒದಗಿಸುವ ಬಗ್ಗೆ ಮೆಚ್ಚುಗೆ ವ್ಯಕ್ತವಾಯಿತು. ರಸಗೊಬ್ಬರ ಬಳಕೆ, ಬೆಳೆಯ ನೈಜ ಮಾರುಕಟ್ಟೆಯ ನಿರ್ದಿಷ್ಟ ಬೆಲೆ, ಮಾರುಕಟ್ಟೆಯ ಮೌಲ್ಯ ಪಡೆಯುವುದರಿಂದ ಕೃಷಿಕರಿಗೆ ಲಾಭ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಕೊಡವ ಎಜುಕೇಷನ್ ಸೊಸೈಟಿ ಅಧ್ಯಕ್ಷ ಡಾ.ಮುಕ್ಕಾಟೀರ ಸಿ ಕಾರ್ಯಪ್ಪ, ಕಾರ್ಯದರ್ಶಿ ಚೆರಿಯಪಂಡ ರಾಕೇಶ್ ಪೂವಯ್ಯ, ಉಪಾಧ್ಯಕ್ಷ ಕೆ. ಎ. ಚೆಣ್ಣಪ್ಪ ಇದ್ದರು.

ತಿರುಪತಿ ಲಡ್ಡುವಿನ ಬಗ್ಗೆ ತನಿಖೆಯಾಗಲಿ

ತಿರುಪತಿಯ ಲಡ್ಡುವಿನಲ್ಲಿ ದನದ ಕೊಬ್ಬು ಬಳಕೆಯಾಗಿದೆ ಎಂಬ ವಿಚಾರವಾಗಿ ಮಾತನಾಡಿದ ಯದುವೀರ್ ಇದೊಂದು ಗಂಭೀರವಾದ ವಿಚಾರ ಎಂದರು.

ಪೊನ್ನಂಪೇಟೆಯಲ್ಲಿ ಮಾಧ್ಯಮದ ಜತೆ ಅಭಿಪ್ರಾಯ ಹಂಚಿಕೊಂಡ ಅವರು, ಎಲ್ಲಾ ದೇವಾಲಯಕ್ಕೆ ತನ್ನದೇ ಆದ ಪಾವಿತ್ರ್ಯತೆ ಇರುತ್ತದೆ. ಇದು ನಿಜ ಆದರೆ ಭಕ್ತಾದಿಗಳಿಗೆ ತುಂಬಾ ನೋವಾಗುತ್ತದೆ. ನಿಜ ಎಂದಾದರೆ ಸಂಬಂಧಪಟ್ಟವರ ಮೇಲೆ ಕ್ರಮ ಆಗಬೇಕಿದೆ. ತನಿಖೆಯಲ್ಲಿ ಇದು ಗೊತ್ತಾಗಬೇಕಿದೆ. ನ್ಯಾಯ ಕೊಡುವ ಕಾರ್ಯ ಮಾಡಬೇಕಿದೆ ಎಂದು ಒತ್ತಾಯಿಸಿದರು.

ರಾಜ್ಯದ ಹಲವೆಡೆ ಗಣೇಶ ವಿಸರ್ಜನೆ ವೇಳೆ ನಡೆದ ಗಲಭೆ ಪ್ರಕರಣದ ಬಗ್ಗೆ ಬಿಜೆಪಿಯವರ ಕುಮ್ಮಕ್ಕು ಕಾರಣ ಎಂದು ಸಿಎಂ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಗಣೇಶ ವಿಸರ್ಜನೆ ವೇಳೆ ಕಲ್ಲು ತೂರಾಟ, ಬೆಂಕಿ ಹಾಕೋದು, ಆರ್‌ಎಸ್‌ಎಸ್ ಕಚೇರಿಗೆ ನುಗ್ಗೋದು ಇದೆಲ್ಲಾ ಯಾರ ಆಡಳಿತದಲ್ಲಿ ನಡೆಯುತ್ತಿದೆ ಎಂದು ಪ್ರಶ್ನಿಸಿದರು.

ಕಾನೂನು ಸುವ್ಯವಸ್ಥೆಯನ್ನು ಸರಕಾರ ಸರಿಯಾಗಿ ಮಾಡಲಿ. ಕಾನೂನು ಸುವ್ಯವಸ್ಥೆ ಸರಿಯಾಗಿದ್ದರೆ ಈ ಗಲಭೆ ನಡೆಯುತ್ತಿರಲಿಲ್ಲ ಎಂದು ರಾಜ್ಯ ಸರ್ಕಾರದ ಬಗ್ಗೆ ಕಿಡಿಕಾರಿದರು. ಘಟನೆಗಳನ್ನು ನೋಡಿ ಸಚಿವರು ಹೇಳಿಕೆ ಕೊಡಬೇಕು. ಮೊದಲೇ ಸಣ್ಣ ಘಟನೆ ಎಂದು ಹೇಳಿಕೆ ನೀಡಬಾರದು ಎಂದು ಗೃಹ ಸಚಿವರ ನಡೆ ಬಗ್ಗೆ ಯದುವೀರ್ ಟೀಕಿಸಿದರು. ನಡೆದ ಘಟನೆ ನೋಡಿದರೆ ಅಲ್ಲಿ ಬೇರೆಯದೇ ಸ್ಟೋರಿ ಇದೆ. ಈ ಬಗ್ಗೆ ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದರು.

ನಮ್ಮ ಧಾರ್ಮಿಕ ಭಾವನೆಗೆ ದಕ್ಕೆ ತರುತ್ತಿರುವುದು ತುಂಬಾ ನೋವಿನ ವಿಚಾರವಾಗಿದೆ. ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡಬೇಕಿದೆ. ಆಗ ನಾವು ಶಾಂತಿಯಿಂದ ಇರುತ್ತೇವೆ. ನಮಗೆ ನ್ಯಾಯ ಕೊಡದಿದ್ದಲ್ಲಿ ನಮಗೂ ಕಷ್ಟ ಆಗುತ್ತದೆ ಎಂದು ರಾಜ್ಯ ಸರ್ಕಾರದ ಆಡಳಿತದ ಬಗ್ಗೆ ಟೀಕೆ ವ್ಯಕ್ತಪಡಿಸಿದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರಕ್ಕೆ ಅಡ್ಡಿಯಾಗಿದ್ದ ಜಲ್ಲಿಕಲ್ಲು ತೆರವುಗೊಳಿಸಿದ ಪೊಲೀಸರು



ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹರಡಿದ್ದ ಜಲ್ಲಿಕಲ್ಲನ್ನು ತೆರವು ಮಾಡುತ್ತಿರುವುದು.

ಮಡಿಕೇರಿ,ಸೆ.21– ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹರಡಿದ್ದ ಜಲ್ಲಿಕಲ್ಲು ತೆರವು ಮಾಡುವ ಮೂಲಕ ನಗರ ಸಂಚಾರಿ ಪೊಲೀಸರು ಸಾರ್ವಜನಿಕರ ಕೋರಿಕೆಗೆ ಸ್ಪಂದಿಸಿದ್ದಾರೆ. ನಗರದ ಜಿಲ್ಲಾಡಳಿತ ತಡೆಗೋಡೆ ಕಾಮಗಾರಿಗೆಂದು ಗುತ್ತಿಗೆದಾರರು ಜಲ್ಲಿಕಲ್ಲುಗಳನ್ನು ತಂದು ತಡೆಗೋಡೆಯ ಪಕ್ಕದಲ್ಲೇ ಸುರಿದಿದ್ದರು. ಈ ಜಲ್ಲಿ ಕಲ್ಲುಗಳು ಹೆದ್ದಾರಿಗೆ ಹರಡಿಕೊಂಡು ದ್ವಿಚಕ್ರ ವಾಹನ ಸೇರಿದಂತೆ ಇತರೆ ಲಘು ವಾಹನಗಳ ಸಂಚಾರಕ್ಕೆ ಅನಾನುಕೂಲ ಉಂಟುಮಾಡಿತ್ತು. ಮಾತ್ರವಲ್ಲದೇ ಶನಿವಾರ ಬೆಳಗಿನ ವೇಳೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಮಹಿಳೆಯೋರ್ವರು ಜಲ್ಲಿಕಲ್ಲಿನಿಂದ ಜಾರಿ ಬಿದ್ದು ಅಪಾಯದಿಂದ ಪಾರಾಗಿದ್ದರು.

ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಹೆದ್ದಾರಿಗೆ ಹರಡಿದ್ದ ಜಲ್ಲಿಕಲ್ಲುಗಳನ್ನು ತೆರವು ಮಾಡಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡುವಂತೆ ಇಲಾಖೆಗಳನ್ನು ಕೋರಿದ್ದರು. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ಸಂಚಾರಿ ಪೊಲೀಸರು ಜೆಸಿಬಿ ಯಂತ್ರದ ಸಹಾಯದಿಂದ ಹೆದ್ದಾರಿ ಬದಿಯಲ್ಲೇ ಸುರಿಯಲಾಗಿದ್ದ ಜಲ್ಲಿ ಕಲ್ಲುಗಳನ್ನು ತೆರವು ಮಾಡುವ ಮೂಲಕ ಸಾರ್ವಜನಿಕರ ಮನವಿಗೆ ಸ್ಪಂದಿಸಿದ್ದಾರೆ.

ಈ ಸಂದರ್ಭ ಸಂಚಾರಿ ಠಾಣಾಧಿಕಾರಿ ಶ್ರೀಧರ್, ಎಎಸ್ಐ ನಂದ .ಐ.ಪಿ ಮತ್ತು ಸಿಬ್ಬಂದಿ ಹಾಜರಿದ್ದರು. ಪೊಲೀಸರ ಕಾರ್ಯದಿಂದ ವಾಹನ ಸವಾರರು ನಿರಾಳರಾಗಿದ್ದಾರೆ.

ಪೋಷಣ್ ಮಾಸಾಚರಣೆ: ಆರೋಗ್ಯ ತಪಾಸಣೆ

ಮಡಿಕೇರಿ ಸೆ.21– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಆಜಾದ್ ನಗರ ಮತ್ತು ದಾಸವಾಳ ಬೀದಿ ಅಂಗನವಾಡಿ ಕೇಂದ್ರಗಳಲ್ಲಿ ಪೋಷಣ್ ಮಾಸಾಚರಣೆ ಅಂಗವಾಗಿ 0–5 ವರ್ಷದ ಮಕ್ಕಳಿಗೆ, ಗರ್ಭಿಣಿ, ಬಾಣಂತಿಯರಿಗೆ ಚುಚ್ಚುಮದ್ದು ಮತ್ತು ಆರೋಗ್ಯ ತಪಾಸಣೆ ಕಾರ್ಯಕ್ರಮ ನೆರವೇರಿತು. ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮೇಪಾಡಂಡ ಸವಿತಾ ಕೀರ್ತನ್ ಅವರು ಮಕ್ಕಳ ಪೋಷಕರಿಗೆ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಬಗ್ಗೆ ಮಾಹಿತಿ ನೀಡಿದರು. ಆರೋಗ್ಯ ಇಲಾಖೆ ಕಾರ್ಯಕ್ರಮಗಳ ಬಗ್ಗೆ ನೀಲಿಮ್ ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕರು ತಿಳಿಸಿದರು. ಪಿಎಚ್ ಸಿಓಗಳಾದ ಶಬ್ನಂ, ಅಶ್ವಿನಿ ಆಶಾ, ದೇವಿಪ್ರಸಾದ್ ಹೆಲ್ತ್ ಇನ್‌ಸ್ಪೆಕ್ಟರ್ ಆರೋಗ್ಯ ಇಲಾಖೆ ಸಿಬ್ಬಂದಿ ಇದ್ದರು.

ಸೆ.25, ವಿರಾಜಪೇಟೆಯಲ್ಲಿ ಹುತಾತ್ಮರ ದಿನಾಚರಣೆ

ವಿರಾಜಪೇಟೆ, ಸೆ.21– ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ಆಶ್ರಯದಲ್ಲಿ ಸೆ.25 ರಂದು ಇಲ್ಲಿನ ಭಾರತೀಯ ಸ್ಟೇಟ್ ಬ್ಯಾಂಕ್ ಮುಂಭಾಗದಲ್ಲಿರುವ ಅಮರ್ ಜವಾನ್ ಸ್ಮಾರಕದಲ್ಲಿ ಹುತಾತ್ಮರ ದಿನಾಚರಣೆಯನ್ನು ಆಚರಿಸಲಾಗುವುದು ಎಂದು ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ಹೇಳಿದರು.

ಸಂಘದ ವತಿಯಿಂದ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹುತಾತ್ಮರ ದಿನಾಚರಣೆಯ ಅಂಗವಾಗಿ ಯೋಧರ ಸ್ಮಾರಕ ಸ್ತಂಭದ ಆವರಣದಲ್ಲಿ ಜಿಲ್ಲಾ ಪೊಲೀಸ್ ತುಕಡಿಯ ಗೌರವದೊಂದಿಗೆ ಸ್ಮಾರಕಕ್ಕೆ ಪುಷ್ಪಗುಚ್ಛ ಅರ್ಪಿಸಿ ದೇಶ ರಕ್ಷಣೆಗಾಗಿ ಹುತಾತ್ಮರಾದ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸಲಾಗುವುದು ಎಂದರು.

ಉಪಾಧ್ಯಕ್ಷ ರಾಜ ಚಂದ್ರಶೇಖರ್ ಮಾತನಾಡಿ, ಹುತಾತ್ಮರ ದಿನಾಚರಣೆಯಲ್ಲಿ ಅತಿಥಿಗಳಾಗಿ ಮಹಾವೀರ ಚಕ್ರ ಪಡೆದ ಕರ್ನಲ್ ಪುಟ್ಟಿಚಂಡ ಗಣಪತಿ, ಮಡಿಕೇರಿ ಗೋಲ್ಡನ್ ಫಾಮ್ ಕ್ಯಾಂಟಿನ್ ವ್ಯವಸ್ಥಾಪಕರಾದ ಲೆಫ್ಟಿನೆಂಟ್ ಕರ್ನಲ್ ಮುಲ್ಲೆರ ಕಾವೇರಪ್ಪ, ವಿರಾಜಪೇಟೆ ಶಾಸಕ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ತಹಸೀಲ್ದಾರ್ ರಾಮಚಂದ್ರ, ಡಿ.ವೈ.ಎಸ್.ಪಿ ಮೋಹನ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಕೆ.ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ ಉಪಸ್ಥಿತಲಿರುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ಮುಗ್ಗೆರ ನಂದಾ, ಖಜಾಂಚಿ ತೋರೆರ ಪೂವಯ್ಯ, ನಿರ್ದೇಶಕ ಅಣ್ಣಳಮಾಡ ಸುಬ್ಬಯ್ಯ ಉಪಸ್ಥಿತರಿದ್ದರು.



ಸೈನಿಕರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ತಹಸೀಲ್ದಾರ್‌ರನ್ನು ನಿಂದಿಸಿದ ಅಶೋಕ್ ವಿರುದ್ಧ ಆಕ್ರೋಶ

ಜಿಲ್ಲಾ ಕಾಂಗ್ರೆಸ್ ಐಎನ್‌ಟಿಯುಸಿ ವತಿಯಿಂದ ತೀವ್ರ ಖಂಡನೆ



ಜಿಲ್ಲಾ ಕಾಂಗ್ರೆಸ್‌ನ ಐಎನ್‌ಟಿಯುಸಿ ಸಂಘಟನೆ ಜಿಲ್ಲಾಧ್ಯಕ್ಷ ಅಣ್ಣಯ್ಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಡಿಕೇರಿ, ಸೆ.21– ಕುಶಾಲನಗರ ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಸಂಬಂಧಿಸಿದಂತೆ ಕಾನೂನಿನ ಚೌಕಟ್ಟಿನಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಹಶೀಲ್ದಾರ್‌ರನ್ನು ನಿಂದಿಸಿರುವ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರ ನಡೆಯನ್ನು ತೀವ್ರವಾಗಿ ಖಂಡಿಸುವುದಾಗಿ ಜಿಲ್ಲಾ ಕಾಂಗ್ರೆಸ್‌ನ ಐಎನ್‌ಟಿಯುಸಿ ಸಂಘಟನೆಯ ಜಿಲ್ಲಾಧ್ಯಕ್ಷ ಬಿ.ಡಿ.ಅಣ್ಣಯ್ಯ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಶಾಲನಗರ ಪುರಸಭೆಗೆ ನಾಮನಿರ್ದೇಶಿತಗೊಂಡಿರುವ ಇಬ್ಬರು ಸದಸ್ಯರಿಗೆ ನಿಯಮಾನುಸಾರ ಮತ ಚಲಾಯಿಸುವ ಹಕ್ಕು ಇದೆ. ಈ ವಿಚಾರದಲ್ಲಿ ಕಾನೂನಿನ ಆದೇಶದಂತೆ ತಹಶೀಲ್ದಾರ್ ನಡೆದುಕೊಂಡಿದ್ದಾರೆ. ಆದರೆ ಕಾನೂನಿನ ಬಗ್ಗೆ ಅರಿವಿಲ್ಲದ ಬಿಜೆಪಿ ಮಂದಿ ಪ್ರತಿಭಟನೆ ನಡೆಸಿ ಗೊಂದಲ ಸೃಷ್ಟಿಸಿದ್ದಾರೆ. ಸ್ಥಳಕ್ಕೆ ಬಂದ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ತಮ್ಮ ಸ್ಥಾನದ ಘನತೆಯನ್ನು ಮರೆತು ತಹಶೀಲ್ದಾರರನ್ನು ನಿಂದಿಸಿದ್ದಾರೆ ಎಂದು ಆರೋಪಿಸಿದರು.

ವಿರೋಧ ಪಕ್ಷದ ನಾಯಕರು ಸರ್ಕಾರಿ ಅಧಿಕಾರಿಗಳೊಂದಿಗೆ ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ಮೊದಲು ಅರಿತುಕೊಳ್ಳಲಿ. ನಾಮ ನಿರ್ದೇಶಿತ ಸದಸ್ಯರಿಗೆ ಇರುವ ಮತದಾನದ ಹಕ್ಕಿನ ಕುರಿತು ಜಾರಿಯಲ್ಲಿರುವ ಆದೇಶವನ್ನು ಅಧ್ಯಯನ ಮಾಡಲಿ ಎಂದು ಅವರು ಒತ್ತಾಯಿಸಿದರು.

ಕೊಡಗು ಜಿಲ್ಲೆಯ ಇಬ್ಬರು ಕಾಂಗ್ರೆಸ್ ಶಾಸಕರು ಮಾಡುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಸಹಿಸದೆ ಬಿಜೆಪಿ ಮಂದಿ ಪ್ರತಿ ಹಂತದಲ್ಲೂ ಗೊಂದಲ ಸೃಷ್ಟಿಸುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ 350 ಕೋಟಿ ರೂ.ಗಳಿಗಿಂತಲೂ ಅಧಿಕ ಅನುದಾನ ಬಂದಿದೆ. ಇನ್ನು ಮುಂದೆಯೂ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ. ಇದನ್ನು ಸಹಿಸದ ಬಿಜೆಪಿ ಪ್ರಮುಖರು ಬೇದರಿಕೆ ತಂತ್ರ ಅನುಸರಿಸುತ್ತಿದ್ದಾರೆ ಎಂದು ಅಣ್ಣಯ್ಯ ಆರೋಪಿಸಿದರು. ಈಗಾಗಲೇ ಎರಡು ಕ್ಷೇತ್ರಗಳಲ್ಲಿ ಬಿಜೆಪಿಗೆ ಸೋಲು ನೀಡುವ ಮೂಲಕ ಜನ ತಕ್ಕ ಪಾಠ ಕಲಿಸಿದ್ದಾರೆ. ಆದರೂ ಎಚ್ಚೆತ್ತುಕೊಳ್ಳದ ಬಿಜೆಪಿ ಮಂದಿ ನಿಯಮಬಾಹಿರವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಐಎನ್‌ಟಿಯುಸಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷರಾದ ಮಿನಾಜ್ ಪ್ರವೀಣ್, ಕಾಂಗ್ರೆಸ್ ಪ್ರಮುಖರಾದ ಮಲ್ಲೇಶ್, ಕೆ.ಕೆ.ಸೋಮಣ್ಣ ಹಾಗೂ ಕೆ.ಪಿ.ಸೋಮಣ್ಣ ಉಪಸ್ಥಿತರಿದ್ದರು.

ಬಾಲಕೃಷ್ಣ ಸಾಬು ನಿಧನ



ನಾಪೋಕ್ಲು, ಸೆ.21– ಕಾರುಗುಂದ ಗ್ರಾಮದ ಕೊಡಪಾಲು ದಿವಂಗತ ಸುಬ್ರಾಯ ಅವರ ಪುತ್ರ ಬಾಲಕೃಷ್ಣ ಸಾಬು(74) ಶುಕ್ರವಾರ ನಿಧನರಾದರು. ಬಾಲಕೃಷ್ಣ ಸಾಬು ಅವರ ಅಂತ್ಯಕ್ರಿಯೆ ಶನಿವಾರ ಕಾರುಗುಂದದಲ್ಲಿ ಜರುಗಿತು. ಮೃತರು ಪತ್ನಿ ಉಮಾವತಿ, ಓರ್ವ ಪುತ್ರ, ಪುತ್ರಿಯನ್ನು ಅಗಲಿದ್ದಾರೆ.

ಕಾಡಂಚಿನ ಗ್ರಾಮಗಳಲ್ಲಿ ಶಿಕ್ಷಕರ ಕೆಲಸ ಶ್ಲಾಘನೀಯ



ಹನೂರು, ಸೆ.21– ಭೌತಿಕವಾಗಿ ವಿಸ್ತೀರ್ಣ ಹೊಂದಿರುವ ಗುಡ್ಡಗಾಡು ಪ್ರದೇಶ ಹೆಚ್ಚಿರುವ ನಮ್ಮ ಶೈಕ್ಷಣಿಕ ವಲಯದಲ್ಲಿ ಶಿಕ್ಷಕರ ಕೆಲಸ ಅತ್ಯಂತ ಶ್ಲಾಘನೀಯವಾಗಿದೆ ಎಂದು ಶಾಸಕ ಎಂ.ಆರ್. ಮಂಜುನಾಥ್ ಹೇಳಿದರು.

ಪಟ್ಟಣದ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ಶನಿವಾರ ಶಾಲಾ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಹನೂರು ತಾಲೂಕಿನ ಉದ್ದಗಲಕ್ಕೂ ಕಾಡಂಚಿನ ಪ್ರದೇಶಗಳಲ್ಲಿಯೂ ಶಿಕ್ಷಕರ ಸೇವೆ ಅನನ್ಯವಾಗಿದೆ. ಇವರಿಂದಲೇ ಮಕ್ಕಳು ಉನ್ನತ ಶಿಕ್ಷಣ ಪಡೆಯಲು ಮುಂದಾಗುತ್ತಿದ್ದಾರೆ. ಹೀಗಾಗಿ ಶಿಕ್ಷಕರ ಸೇವೆಯನ್ನು ನೆನೆಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಹನೂರು ತಾಲೂಕಿನಲ್ಲಿ ಶಿಕ್ಷಕರ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಜೊತೆಗೆ ಗುರುಭವನ ಮಾಡಲು ಈಗಾಗಲೇ ತಹಸೀಲ್ದಾರರು ಪ್ರಯತ್ನ ಮಾಡಿದ್ದು, ಮುಂದಿನ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದ ವೇಳೆಗೆ ಭವನದ ಜಾಗವನ್ನು ನೀಡಲು ಮುಂದಾಗುತ್ತೇವೆ ಎಂದು ಭರವಸೆ ನೀಡಿದರು.

ನಂತರ ಕಸಾಪ ನಿಕಟಪೂರ್ವ ಜಿಲ್ಲಾಧ್ಯಕ್ಷ ಬಿ.ಎಸ್. ವಿನಯ್, ತಹಸೀಲ್ದಾರ್ ಗುರುಪ್ರಸಾದ್ ಮಾತನಾಡಿದರು.

ಈ ವೇಳೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೃಷ್ಣೇಗೌಡ, ಪಪಂ ಸದಸ್ಯರಾದ ಮಹೇಶ್, ಹರೀಶ್, ಸಂಪತ್ ಕುಮಾರ್, ಬಿಇಒ ಗುರುಲಿಂಗಯ್ಯ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಮಹದೇವ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ, ವೆಂಕಟೇಶ್ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

ಪೌರಕಾರ್ಮಿಕರಿಗೆ ಆರೋಗ್ಯ ಕಾಳಜಿ ಅಗತ್ಯ

ಮೈಸೂರು ಅಪೋಲೊ ಆಸ್ಪತ್ರೆಗೆ ಆರೋಗ್ಯ ತಪಾಸಣೆಗಾಗಿ ಬಸ್‌ನಲ್ಲಿ ಹೊರಟ ಪೌರಕಾರ್ಮಿಕರ ತಂಡಕ್ಕೆ ಹಸಿರು ನಿಶಾನೆ



ಚಾ.ನಗರದ ನಗರಸಭೆ ಆವರಣದಲ್ಲಿ ನಗರಸಭೆ ವತಿಯಿಂದ 40 ಮಂದಿ ಪೌರಕಾರ್ಮಿಕರನ್ನು ಆರೋಗ್ಯ ತಪಾಸಣೆಗಾಗಿ ಮೈಸೂರಿನ ಅಪೋಲೊಗೆ ಕಳುಹಿಸಿಕೊಟ್ಟ ತಂಡಕ್ಕೆ ಜಿಲ್ಲಾಧಿಕಾರಿ ಶಿಲ್ಪಾನಾಗ್, ನಗರಸಭಾಧ್ಯಕ್ಷ ಎಸ್.ಸುರೇಶ್ ಬೀಳ್ಕೊಟ್ಟರು.

ಚಾಮರಾಜನಗರ,ಸೆ.21– ನಗರವನ್ನು ಪ್ರತಿನಿತ್ಯ ಸ್ವಚ್ಛ ಮಾಡುವ ನಗರಸಭೆ ಪೌರಕಾರ್ಮಿಕರನ್ನು ಆರೋಗ್ಯವಂತರನ್ನಾಗಿ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಹೇಳಿದರು.

ನಗರದ ನಗರಸಭೆ ಆವರಣದಲ್ಲಿ ಶನಿವಾರ ಬೆಳಿಗ್ಗೆ ನಗರಸಭೆ ವತಿಯಿಂದ ಪ್ರಪ್ರಥಮ ಬಾರಿಗೆ 40 ಮಂದಿ ಪೌರಕಾರ್ಮಿಕರನ್ನು ಆರೋಗ್ಯ ತಪಾಸಣೆಗಾಗಿ ಮೈಸೂರಿನ ಅಪೋಲೊಗೆ ಕಳುಹಿಸಿಕೊಟ್ಟ ತಂಡಕ್ಕೆ ಹಸಿರು ನಿಶಾನೆ ತೋರಿ ಮಾತನಾಡಿದರು, ನಗರದ ಮೂಲೆ ಮೂಲೆಯಲ್ಲಿರುವ ಕಸವನ್ನು ಪೌರಕಾರ್ಮಿಕರು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ. ಇದರಿಂದ ಅವರಿಗೆ ಅನೇಕ ಕಾಯಿಲೆ ಬರುವ ಸಾಧ್ಯತೆಗಳು ಇರುವುದರಿಂದ ಮುಂಜಾಗ್ರತವಾಗಿ ಕಾರ್ಮಿಕರ ಆರೋಗ್ಯ ಕಾಪಾಡಬೇಕಾದದ್ದು, ನಮ್ಮೆಲ್ಲರ ಕರ್ತವ್ಯವಾಗಿದೆ. ಪೌರಕಾರ್ಮಿಕರು ತಮ್ಮ ಆರೋಗ್ಯದ ಬಗ್ಗೆ ನಿಗಾ ವಹಿಸಿ ಇಂತಹ ಉಚಿತ ಆರೋಗ್ಯ ತಪಾಸಣೆಗಳ ಲಾಭ ಪಡೆಯಬೇಕು ಎಂದರು.

ಕಳೆದ ಬಾರಿ ನಡೆದ ಪೌರಕಾರ್ಮಿಕರ ಕುಂದು–ಕೊರತೆ ಸಭೆಯಲ್ಲಿ ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಮಾಡಿಸಿಕೊಡುವಂತೆ ಕೇಳಿಕೊಂಡಿದ್ದರು. ಪೌರಕಾರ್ಮಿಕರ ಆಶಯದಂತೆ ಪ್ರಪ್ರಥಮ ಬಾರಿಗೆ ನಗರಸಭೆ ವತಿಯಿಂದ ಮೊದಲ ಬಾರಿಗೆ 40 ಪೌರಕಾರ್ಮಿಕರ ತಂಡವನ್ನು ಆರೋಗ್ಯ ತಪಾಸಣೆಗೆ ಕಳುಹಿಸಲಾಗುತ್ತಿದೆ. ಈ ತಪಾಸಣೆ ಮೂಲಕ ನಿಮ್ಮ ಆರೋಗ್ಯ ಸ್ಥಿತಿ ಗೊತ್ತಾದರೆ ಅದನ್ನು ಹುಷಾರಾಗಿ ನೋಡಿಕೊಂಡು ಉತ್ತಮ ಚಿಕಿತ್ಸೆ ಪಡೆಯಲು ಇಂತಹ ಆರೋಗ್ಯ ಶಿಬಿರ ಸಹಕಾರಿಯಾಗಿದೆ. ಇದನ್ನು ಸದುಪಯೋಗಪಡಿಸಿಕೊಂಡ ಎಲ್ಲರೂ ಆರೋಗ್ಯವಂತರಾಗಿರಿ, ಇಡೀ ನಗರವನ್ನೇ ಸ್ವಚ್ಛತೆ ಮಾಡುವ ನಿಮ್ಮ ಆರೋಗ್ಯದ ಕಾಳಜಿ ಬಹಳ ಮುಖ್ಯವಾಗಿದೆ. ಚಾಮರಾಜನಗರ ನಗರಸಭೆಗೆ ಇತಿಹಾಸದಲ್ಲೇ ಹೊಸ ಮುನ್ನುಡಿ ಬರೆಯಿರಿ. ಇದೇ ರೀತಿ ಪ್ರತಿ ವರ್ಷ ಮಾಡೋಣ. ಎಲ್ಲರಿಗೂ ಒಳ್ಳೆಯದಾಗಲಿ ಎಂದರು.

ಪೌರಕಾರ್ಮಿಕ ಆರೋಗ್ಯಕ್ಕೆ ವಿಶೇಷ ಕಾಳಜಿ: ನಗರಸಭಾ ಅಧ್ಯಕ್ಷ ಎಸ್. ಸುರೇಶ್ ಮಾತನಾಡಿ, ನಗರವನ್ನು ಸ್ವಚ್ಛ ಮಾಡುವ ಪೌರಕಾರ್ಮಿಕರ ಆರೋಗ್ಯ ಕಾಪಾಡಲು ನಗರಸಭೆ ಬದ್ಧವಾಗಿದ್ದು, ಅವರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಲಾಗುವುದು, ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಮಮತ ಬಾಲಸುಬ್ರಹ್ಮಣ್ಯ, ಸದಸ್ಯ ಚಂದ್ರಶೇಖರ್, ಪೌರಾಯುಕ್ತ ರಾಮದಾಸ್, ಹಿರಿಯ ಆರೋಗ್ಯ ನಿರೀಕ್ಷಿಕ ಮಂಜುನಾಥ್, ಕಿರಿಯ ಆರೋಗ್ಯ ನಿರೀಕ್ಷಕಿ ಪುಷ್ಪಾ ಹಾಗೂ ಪೌರಕಾರ್ಮಿಕರು ಹಾಜರಿದ್ದರು.

ಕ್ಷೇತ್ರದ ಜನರ ನಿರೀಕ್ಷೆ ಹುಸಿಗೊಳಿಸಿದ ಸಂಸದ ಸುನೀಲ್ ಬೋಸ್

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಆರೋಪ

ಸಂಸದರಾಗಿ ನೂರು ದಿನವಾದರೂ ಒಂದು ಕೆಡಿಪಿ ಸಭೆ ನಡೆಸಿಲ್ಲ, ಕ್ಷೇತ್ರಕ್ಕೆ ಮೂರು ದಿನ ಕೂಡ ಭೇಟಿ ನೀಡಿಲ್ಲ

ಚಾಮರಾಜನಗರ, ಸೆ.21– ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನೀಲ್ ಬೋಸ್ ಗೆದ್ದು ನೂರು ದಿನವಾದರೂ ಕ್ಷೇತ್ರಕ್ಕೆ 3 ದಿನ ಕೂಡ ಭೇಟಿ ಕೊಟ್ಟಿಲ್ಲ, ಒಂದು ಪ್ರಗತಿ ಪರಿಶೀಲನಾ ಸಭೆ ನಡೆಸಿಲ್ಲ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಿಂದ ಬಹುಮತ ಪಡೆದು ಸಂಸದರಾಗಿ ಆಯ್ಕೆ ಮಾಡಿದರೂ ಕೂಡ ಕ್ಷೇತ್ರದ ಜನರಿಗೆ ಭಾರಿ ನಿರಾಶೆಯನ್ನುಂಟು ಮಾಡಿದ್ದಾರೆ. ಸಂಸದರು ಚುನಾಯಿತರಾಗಿ 100 ದಿನಗಳಾಗಿವೆ. ಆದರೆ ಕೇಂದ್ರಕ್ಕೆ 3 ದಿನವಾದರೂ ಬಂದು ಕ್ಷೇತ್ರದ ಸಮಸ್ಯೆ ಆಲಿಸಿಲ್ಲ ಎಂದರು.

ಸಂಸದರ ಕಚೇರಿ ತೆರೆದಿಲ್ಲ: ಗುಂಡ್ಲುಪೇಟೆ, ಚಾಮರಾಜನಗರ, ಕೊಳ್ಳೇಗಾಲಕ್ಕೆ ನಗರಸಭಾ, ಪುರಸಭಾ ಚುನಾವಣೆಯ ಮತದಾನ ಮಾಡಲು ಬಂದಿದ್ದು ಬಿಟ್ಟರೆ ಜನರ ಸಮಸ್ಯೆ ಆಲಿಸಲು ಬರುವ ಪ್ರಯತ್ನ ಮಾಡಿಲ್ಲ. ಸಂಸದರಾಗಿ ನೂರು ದಿನವಾದರೂ ಒಂದು ಕಚೇರಿ ತೆರೆದು ಕ್ಷೇತ್ರದ ಜನರಿಗೆ ಒಂದು ಅರ್ಜಿ ಕೊಡುವ ಅವಕಾಶ ಕಲ್ಪಿಸಿಕೊಟ್ಟಿಲ್ಲ. ಒಂದು ಪ್ರಗತಿ ಪರಿಶೀಲನಾ ಸಭೆ ಮಾಡಿಲ್ಲ. ರಾಜ್ಯದ ಸಂಸದರು ಕ್ಷೇತ್ರದಲ್ಲಿ ಈಗಾಗಲೇ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದಾರೆ. ಕೋಟಿಗಟ್ಟಲೇ ಅನುದಾನ ತರುತ್ತಿದ್ದಾರೆ. ನೀವೇಕೆ ಮಾಡುತ್ತಿಲ್ಲ ನಿಮಗೆ ಕ್ಷೇತ್ರದ ಜನರ ಮೇಲೆ ಕಾಳಜಿ ಇಲ್ಲವೇ? ನೀವು ಸ್ಪಷ್ಟಪಡಿಸಬೇಕು ಎಂದು ಅವರು ಆಗ್ರಹಿಸಿದರು.

ಕ್ಷೇತ್ರದ ಜನರು ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್ ಗೆದ್ದರೆ ಕ್ಷೇತ್ರ ಅಭಿವೃದ್ಧಿ ಆಗುತ್ತದೆ ಎಂಬ ನಿರೀಕ್ಷೆಯಿಟ್ಟು ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲಿಸಿದರು. ಸಂಸದರು ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಿಲ್ಲ. ಮಹದೇವಪ್ಪ ವಾರಕ್ಕೊಮ್ಮೆ ಬರದಿದ್ದರೂ ಪರವಾಗಿಲ್ಲ ತಿಂಗಳೊಮ್ಮೆ ಆದರೂ ಜಿಲ್ಲೆಗೆ ಬರುವ ಮೂಲಕ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಒತ್ತಾಯಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಮೂಡ್ನಾಕೂಡು ಪ್ರಕಾಶ್ ಮಾತನಾಡಿದರು.

ಹಿಂದೆ ಕ್ಷೇತ್ರದ ಸಂಸದರಾಗಿದ್ದ ದಿವಂಗತ ಶ್ರೀನಿವಾಸಪ್ರಸಾದ್ ಅನಾರೋಗ್ಯದ ಸಮಸ್ಯೆಯ ನಡುವೆ ಕೂಡ ಪ್ರಗತಿ ಪರಿಶೀಲನೆ ಸಭೆಗಳನ್ನು ನಡೆಸುತ್ತಿದ್ದರು. ನಿಮಗೇನಾಗಿದೆ. ಯುವ ಸಂಸದರಾದ ನೀವು ಕ್ಷೇತ್ರದ ಅಭಿವೃದ್ಧಿಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ರಾಷ್ಟ್ರೀಯ ಹೆದ್ದಾರಿ, ಅಪಘಾತಗಳಲ್ಲಿ ಪತ್ರಿಕಾ ವರದಿಯಂತೆ 180 ಕ್ಕೂಹೆಚ್ಚು ಸಾವುಗಳು ಸಂಭವಿಸಿವೆ. ಒಬ್ಬ ಸಂಸದರಾಗಿ ಹೆದ್ದಾರಿ ರಸ್ತೆ ಸುರಕ್ಷತಾ ಕ್ರಮಗಳ ಬಗ್ಗೆ ಅಧಿಕಾರಿಗಳ ಸಭೆ ನಡೆಸುವ ಕನಿಷ್ಠ ಕಾಳಜಿ ವಹಿಸಿಲ್ಲ. ಯಳಂದೂರು ತಾಲೂಕಿನ ಎಳೆಪಿಳ್ಳಾರಿ ದೇವಸ್ಥಾನದ ಬಳಿ ಚಿರತೆ ಓಡಿಸಲು ಅರಣ್ಯ ಸಿಬ್ಬಂದಿಗಳು ಹಾರಿಸಿದ ಗುಂಡಿಗೆ ನಾಲ್ವರು ಗಾಯಗೊಂಡಿದ್ದಾರೆ ಸೌಜನ್ಯಕ್ಕಾದರೂ ಭೇಟಿ ನೀಡಿ ಸಾಂತ್ವನ ಹೇಳುವ ಪ್ರಯತ್ನ ಮಾಡಿಲ್ಲ ಎಂದು ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಹದೇವಸ್ವಾಮಿ, ಜಿಲ್ಲಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹದೇವಸ್ವಾಮಿ, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಎಸ್.ಸಿ. ಮೋರ್ಚಾದ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಜಿಲ್ಲಾ ಮಾಧ್ಯಮ ಸಹ ಪ್ರಮುಖ್ ರಾಮಸಮುದ್ರ ಶಿವಣ್ಣ ಹಾಜರಿದ್ದರು.

ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಮೆರವಣಿಗೆ



ಸುತ್ತೂರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೆಯ ಜಯಂತಿ ಮಹೋತ್ಸವ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಭಾಗವಹಿಸಿದ್ದವರಿಗೆ ವಿ.ಸೋಮಣ್ಣ ಅಭಿಮಾನಿ ಬಳಗ, ಇಂಚರ ಗ್ರೂಪ್ಸ್ ವತಿಯಿಂದ ಹರವೆ ವಿರಕ್ತ ಮಠಾಧ್ಯಕ್ಷರಾದ ಶ್ರೀ ಸರ್ಪಭೂಷಣ ಸ್ವಾಮೀಜಿ ಅವರ ನೇತೃತ್ವದಲ್ಲಿ ನೀರಿನ ಬಾಟಲ್, ಮೈಸೂರು ಪಾಕ್ ವಿತರಿಸಲಾಯಿತು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಸೆ.21– ಮೆಡಿಕಲ್ ಕಾಲೇಜು ಫೀಡರ್‌ನ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಸೆ.22ರಂದು ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಮೆಡಿಕಲ್ ಕಾಲೇಜು ಫೀಡರ್, ಉತ್ತುವಳ್ಳಿ, ಯಡಪುರ, ಮಲ್ಲಯ್ಯನಪುರ, ಮೂಡಲಪುರ, ಹೊಸ ಆರ್‌ಟಿಒ, ಉತ್ತುವಳ್ಳಿ ಇಂಡಸ್ಟ್ರೀಯಲ್ ಏರಿಯಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸಬೇಕೆಂದು ನಿಗಮದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.25, ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ

ಚಾಮರಾಜನಗರ, ಸೆ.21– ಗುಂಡ್ಲುಪೇಟೆ ತಾಲೂಕು ಆಡಳಿತದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸುವ ಸಂಬಂಧ ಪೂರ್ವಭಾವಿ ಸಭೆಯನ್ನು ಗುಂಡ್ಲುಪೇಟೆ ತಹಶೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಸೆ.25ರಂದು ಬೆಳಗ್ಗೆ 10.30 ಗಂಟೆಗೆ ತಹಶೀಲ್ದಾರ್ ಕಚೇರಿಯ ಸಭಾ ಭವನದಲ್ಲಿ ಏರ್ಪಡಿಸಲಾಗಿದೆ.

ಈ ಸಭೆಗೆ ಗುಂಡ್ಲುಪೇಟೆ ತಾಲೂಕಿನ ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಆಗಮಿಸುವಂತೆ ಗುಂಡ್ಲುಪೇಟೆ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಡಿಎಸ್ ಸದಸ್ಯತ್ವ ನೋಂದಣಿ: ಚಾ.ನಗರ ಹೆಚ್ಚುವರಿ ಉಸ್ತುವಾರಿಯಾಗಿ ಹೆಚ್.ಕೆ.ರಾಮು ನೇಮಕ



ಚಾಮರಾಜನಗರ,ಸೆ.21 ಜಾತ್ಯಾತೀತ ಜನತಾದಳದ ಸದಸ್ಯತ್ವ ನೋಂದಣಿ ಅಭಿಯಾನವನ್ನು ಹಮ್ಮಿಕೊಂಡಿದ್ದು, ಇದನ್ನು ಯಶಸ್ವಿಗೊಳಿಸಲು ಪಕ್ಷದ ವತಿಯಿಂದ ಹೆಚ್ಚುವರಿ ಉಸ್ತುವಾರಿಗಳನ್ನಾಗಿ ಆಯಾ ಜಿಲ್ಲೆಗಳಿಗೆ ನೇಮಕ ಮಾಡಲಾಗಿದೆ. ಅದರಂತೆ ಚಾಮರಾಜನಗರ ಜಿಲ್ಲಾ ಜೆಡಿಎಸ್ ಸದಸ್ಯತ್ವ ಅಭಿಯಾನದ ಉಸ್ತುವಾರಿಯನ್ನಾಗಿ ಜೆಡಿಎಸ್ ಮುಖಂಡ ಹೆಚ್.ಕೆ.ರಾಮು ಅವರನ್ನು ನೇಮಕ ಮಾಡಲಾಗಿದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಈ ಸದಸ್ಯತ್ವ ನೋಂದಣಿ ಅಭಿಯಾನವನ್ನು ಸೆಪ್ಟೆಂಬರ್ ತಿಂಗಳಲ್ಲಿ ಆರಂಭಿಸಿ, ಅಕ್ಟೋಬರ್ ತಿಂಗಳಲ್ಲಿ ಪೂರ್ಣಗೊಳಿಸುವಂತೆ ಅವರು ಸೂಚಿಸಿದ್ದಾರೆ ರಾಮು ಅವರು ಹಲವಾರು ವರ್ಷಗಳ ಕಾಲ ರಾಜ್ಯ ಸರ್ಕಾರಿ ನೌಕರರ ಸಂಘ ಮತ್ತು ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕೆಲ ವರ್ಷಗಳ ಹಿಂದೆ ಜೆಡಿಎಸ್ ಸೇರಿ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಹುದುಗು ಕಲೆ ಪ್ರವೀಣ ಪುಟ್ಟರಾಜು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಅದು ಸಾವಿರದ ಒಂಭೈನೂರ ಎಪ್ಪತ್ತರ ದಶಕದ ಆರಂಭದ ಕಾಲ. ಅಮೆರಿಕಾದ ಖಗೋಳ ವಿಜ್ಞಾನಿ ಚಾರ್ಲ್ಸ್ ಡ್ಯೂಕ್ ಅವರು ಚಂದ್ರನ ಯಾತ್ರೆ ಮುಗಿಸಿ ಬಂದಿದ್ದರು. ಅವರು ಮದ್ರಾಸ್ (ಚೆನ್ನೈ)ಗೆ ಭೇಟಿ ನೀಡಿದ್ದರು. ಅಲ್ಲಿನ ಗಣ್ಯಾತಿಗಣ್ಯರು, ಅಧಿಕಾರಿಗಳು ಎಲ್ಲರೂ ಸೇರಿ ಚಾರ್ಲ್ಸ್ ಡ್ಯೂಕ್ ಅವರಿಗೆ ಒಂದು ವಿಶೇಷವಾದ ಉಡುಗೊರೆಯನ್ನು ನೀಡಬೇಕೆಂದು ನಿರ್ಧರಿಸಿದರು. ಅದರಂತೆ ಖಗೋಳ ವಿಜ್ಞಾನಿ ಚಾರ್ಲ್ಸ್ ಡ್ಯೂಕ್ ಅವರ ಭಾವಚಿತ್ರವನ್ನು ಮರದ ಹುದುಗು ಕಲೆಯಲ್ಲಿ ರೂಪಿಸಿ ಅವರಿಗೆ ನೀಡಲಾಯಿತು. ಅದನ್ನು ಕಂಡೊಡನೆಯೇ 'ವ್ಹಾಹ್, ಎಂಥಾ ಮಹದದ್ಭುತ ಕಲಾಕೃತಿ!' ಎಂದು ಮಹದಚ್ಚರಿಯಿಂದ ಉದ್ಗರಿಸಿದ ಚಾರ್ಲ್ಸ್ ಡ್ಯೂಕ್, ಇಂಥಾ ಅಪೂರ್ವ ಕಲಾಕೃತಿಯನ್ನು ಕೆತ್ತಿದ ಮಹಾಶಿಲ್ಪಿಯನ್ನು ತಾನು ನೋಡಲೇಬೇಕೆಂದು ಬಯಸಿದರು. ಆ ಕಲಾವಿದನನ್ನು ಕರೆಸಿ ಅವನ ಅನನ್ಯ ಕಲಾಕೌಶಲಕ್ಕೆ ಅಭಿನಂದಿಸಿದರು. ಹೀಗೆ ವಿಶ್ವವಿಖ್ಯಾತ ಖಗೋಳ ವಿಜ್ಞಾನಿ ಚಾರ್ಲ್ಸ್ ಡ್ಯೂಕ್ ಅವರಿಂದ ಶಹಬ್ಬಾಸ್‌ಗಿರಿ ಪಡೆದಂತಹ ಮೇರು ಕಲಾವಿದರೇ ರಿಚರ್ಡ್ ಪುಟ್ಟರಾಜು ಅರ್ಥಾತ್ ಆರ್.ಪುಟ್ಟರಾಜು.

ಚಿತ್ತದ ತುಂಬ ಚಿತ್ರಕಲೆಯನ್ನೇ ತುಂಬಿಕೊಂಡು ಅದನ್ನೇ ಉಸಿರಾಡುತ್ತಾ ಇಳಿವಯಸ್ಸಿನಲ್ಲೂ ಚಿತ್ರಕಲಾ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳಿಗೆ ಮುನ್ನುಡಿ ಬರೆಯುತ್ತಲೇ ಇರುವ ಆರ್. ಪುಟ್ಟರಾಜು ತಮ್ಮ ಪ್ರತಿಭಾಶಕ್ತಿಯಿಂದ, ಅಪೂರ್ವ ಕಲಾವಂತಿಕೆಯಿಂದ ಚಿತ್ರ ಕಲಾಭಿರುಚಿಯುಳ್ಳ ದೇಶ -ವಿದೇಶದ ಮಹನೀಯರಿಂದ ಮೆಚ್ಚುಗೆ ಪಡೆದರು. ಇವರು ಸೃಷ್ಟಿಸಿರುವ ಒಂದೊಂದು ಚಿತ್ರ ಕಲಾಕೃತಿ ಒಂದಕ್ಕಿಂತ ಒಂದು ಚೆಂದವಿದ್ದು, ವಸ್ತು ವೈವಿಧ್ಯತೆಯಲ್ಲೂ ವಿಶೇಷವಾಗಿದ್ದು ತಮ್ಮ ಆಕರ್ಷಕ ಚಿತ್ತಾರದಿಂದ ಬರಸೆಳೆದು ಬಂಧಿಸಿಕೊಳ್ಳುತ್ತವೆ. ಇವರ ಅಗಾಧ ಪ್ರತಿಭಾ ಶಕ್ತಿ ಎಂತಹವರನ್ನೂ ಶರಣಾಗುವಂತೆ ಮಾಡುತ್ತದೆ. ಅಂಥಾ ಕಲಾನೈಪುಣ್ಯತೆ, ಕುಂದಣದ ಕುಶಲತೆ, ಚಂದನದ ಶ್ರೇಷ್ಠತೆ, ಸೃಜನಶೀಲ ಕಲಾವರೇಣ್ಯ ಪುಟ್ಟರಾಜು ಅವರದು. ಅದಕ್ಕೇನೆ ಇವರು ಹುದುಗು ಕಲೆಯ ರವಿವರ್ಮ ಎಂದೇ ಪ್ರಸಿದ್ಧರು.

ಬಹುಮುಖಿ ಪ್ರತಿಭಾ ಸಂಪನ್ನರಾದ ಪುಟ್ಟರಾಜು ಬಹುಮುಖ್ಯವಾಗಿ ಚಿತ್ರಕಲಾ ಪರಿಣತರು. ಇನ್ಲೇ ಕಲೆಯಲ್ಲಿ ಬಹು ನಿಪುಣರು. ಹಾಗೆಯೇ ಸಾಂಪ್ರದಾಯಿಕ ಚಿತ್ರಕಲೆ, ನವ್ಯಕಲಾ ಪ್ರಕಾರ ಹಾಗೂ ಶಿಲ್ಪಕಲಾಕೃತಿಗಳನ್ನು ವಿವಿಧ ಬಗೆಯಲ್ಲಿ ಚಿತ್ರಿಸುವಲ್ಲಿ ಚಾಣಾಕ್ಷರು. ಹುದುಗು ಕಲೆಯಲ್ಲಂತೂ ಸಿದ್ಧಹಸ್ತರು.

ಭಾರತೀಯ ಕರಕುಶಲ ಪರಂಪರೆಯಲ್ಲಿ ಕರ್ನಾಟಕಕ್ಕೊಂದು ವಿಶಿಷ್ಟ ಸ್ಥಾನವಿದೆ. ಅದರಲ್ಲೂ ವಿಶೇಷವಾಗಿ ಅರಮನೆಗಳ ನಾಡು ಕಲೆ, ಸಾಹಿತ್ಯ, ಸಂಸ್ಕೃತಿಗಳ ತವರೂರೆಂದೇ ಖ್ಯಾತಿ ಗಳಿಸಿರುವ ಮೈಸೂರಿಗೆ ಈ ವಿಷಯದಲ್ಲಿ ಮತ್ತಷ್ಟು ಮಹತ್ವದ ಸ್ಥಾನವುಂಟು. ಕುಂದಣಕಲೆ, ಕಾಷ್ಠ ಶಿಲ್ಪಕಲೆ, ದಾರು ಕಲೆ, ಹುದುಗು ಕಲೆ, ಮರದ ಕೊಲಾಜ್, ಉಬ್ಬು ಚಿತ್ರಕಲೆ ಹೀಗೆಲ್ಲಾ ಕರೆಸಿಕೊಳ್ಳುವ ಇನ್ಲೇ ಕಲೆಗೆ ಅಂದರೆ ಮರದ ಹುದುಗು ಕಲೆ ಮೈಸೂರು ಮಹಾರಾಜರ ಕಾಲದಿಂದಲೂ ಅತ್ಯಂತ ಹೆಸರುವಾಸಿಯಾದದ್ದು. ಒಂದು ರೀತಿ ಇದು ಮೈಸೂರಿನ ಪರಂಪರೆಗಳ ತೋರು ಮಾರ್ಗವೂ ಹೌದು. ವಿಶಿಷ್ಟ ಕಲಾ ಪ್ರಕಾರವೂ ನಿಜ. ಇಂತಹ ವಿಶಿಷ್ಟ ಕಲೆಯನ್ನು ದೇಶಾದ್ಯಂತ ಅಷ್ಟೇ ಏಕೆ ವಿಶ್ವದಾದ್ಯಂತ ಪ್ರಸಿದ್ಧಿಗೊಳಿಸಿದವರ ಪೈಕಿ ಮೊದಲ ಹೆಸರು ಪುಟ್ಟರಾಜು ಅವರದು.

ಇವರ ಬದುಕು, ಸಾಧನೆ, ಸಿದ್ಧಿಯದೇ ಒಂದು ಯಶೋಗಾಥೆ. ಹುದುಗು ಕಲೆಯಲ್ಲಿ ಮರವೇ ಕ್ಯಾನ್ವಾಸ್. ವಿವಿಧ ವರ್ಣಗಳ ಮರದ ತೆಳು ಪದರಗಳು ಹಾಗೂ ಚಕ್ಕೆಗಳೇ ಬಣ್ಣಗಳು. ಮರವನ್ನು ಕುಯ್ಯಲು ಬಳಸುವ ಗರಗಸವೇ ದೊಡ್ಡ ಕುಂಚ. ಮರದ ತುಂಡುಗಳನ್ನು ಸಣ್ಣ ಸಣ್ಣ ಚಕ್ಕೆಗಳಾಗಿ ಕೆತ್ತುವ ಹತ್ತರಿ, ಉಳಿಗಳೇ ಚಿಕ್ಕ ಚಿಕ್ಕ ಕುಂಚಗಳು. ಬೀಟೆ ಮರದ ಹಲಗೆಯ ಮೇಲೆ ಬೇಕಾದ ರೇಖಾಚಿತ್ರವನ್ನು ಬಿಡಿಸಿಕೊಂಡು ಆ ಜಾಗವನ್ನು ಕೆತ್ತಿ ವಿವಿಧ ರೀತಿಯ ಬಣ್ಣಗಳ ಮರ, ದಂತ, ಲೋಹ, ಗಾಜನ್ನು ಅದೇ ಆಕಾರಕ್ಕೆ ತಕ್ಕಂತೆ ಕತ್ತರಿಸಿ ಕೆತ್ತಿದ ಜಾಗದಲ್ಲಿ ಹುದುಗಿಸಿ ಚಿತ್ರಕಲಾ ಕೃತಿಯನ್ನು ನಿರ್ಮಿಸುವುದು ಹುದುಗು ಕಲೆಯ ವಿಶೇಷ. ಇಲ್ಲಿ ಪ್ರತಿಯೊಂದು ಹಂತವೂ ಕಲಾವಿದನಿಗೆ ಬಹಳ ಕಠಿಣ ಹಾಗೂ ಸವಾಲಿನ ಕೆಲಸವಾಗಿರುತ್ತದೆ. ಆದ್ದರಿಂದ ಹುದುಗು ಕಲೆಯೆಂದರೆ ಹುಡುಗಾಟವಲ್ಲ. ಬಹಳ ಶ್ರಮ, ಆಸಕ್ತಿ, ತಾಳ್ಮೆ, ತಪಸ್ಸನ್ನು ಬೇಡುವ ಕಷ್ಟಕರ ಕಲೆಯಿದು. ಹಾಗಾಗಿ ಅಷ್ಟು ಸುಲಭಕ್ಕೆ ಎಲ್ಲರಿಗೂ ಒಲಿಯುವ, ಸಿದ್ಧಿಸುವ ಕಲೆ ಇದಲ್ಲ. ಇಂತಹ ಕಲೆಯನ್ನು ಸಿದ್ಧಿಸಿಕೊಂಡಿರುವುದೇ ಪುಟ್ಟರಾಜು ಮಹಾ ಸಾಧನೆ.

ಪುಟ್ಟರಾಜು ಜನಿಸಿದ್ದು 1938ರ ಅಕ್ಟೋಬರ್ 10ರಂದು. ನಮ್ಮ ದೇಶ ಸ್ವಾತಂತ್ರ್ಯದ ಗಾಳಿಯನ್ನು ಕುಡಿಯಲು ಎದುರು ನೋಡುತ್ತಿದ್ದ ದಿನಗಳವು. ಆಗ ಇಂದು ಚಾಮರಾಜನಗರ ಜಿಲ್ಲೆಯಲ್ಲಿರುವ ಕೊಳ್ಳೇಗಾಲ ತಾಲೂಕು ಮದ್ರಾಸ್ ಪ್ರಾಂತ್ಯದಲ್ಲಿತ್ತು. ಈ ತಾಲೂಕಿನ ಮುಳ್ಳೂರು ಗ್ರಾಮ ಇವರ ಜನ್ಮಸ್ಥಳ. ಜನ್ಮವಿತ್ತವರು ಕ್ರೈಸ್ತ ದಂಪತಿ ರಿಚರ್ಡ್ ಮತ್ತು ಜೋನ್ ಮೇರಿ.

ಚಿಕ್ಕಂದಿನಿಂದಲೇ ಚರ್ಚ್‌ನಲ್ಲಿ ಜ್ಞಾನೋಪದೇಶ ತರಗತಿಗಾಗಿ ಕೆಲವು ಆಕರ್ಷಕ ಚಿತ್ರಗಳನ್ನು ಬಿಡಿಸಿ ಮುಂದಿನ ತನ್ನ ಕಲಾ ಜೀವನಕ್ಕೆ ಬಾಲ್ಯದಲ್ಲೇ ಪುಟ್ಟರಾಜು ದೊಡ್ಡದಾಗಿ ನಾಂದಿಯಾಡಿದ್ದ. ಇವುಗಳನ್ನು ನೋಡಿದ ಚರ್ಚಿನ ಪಾದ್ರಿಗಳಾಗಿದ್ದ ಫಾದರ್ ಹ್ಯಾಂಡಿಕೋರ್ಟ್ ಪುಟ್ಟರಾಜುವಿನ ಕಲಾ ಪ್ರತಿಭೆಯನ್ನು ಮೊದಲಿಗೆ ಗುರುತಿಸಿದರು. ಮುಂದೆ ಅವರು ಮೈಸೂರಿಗೆ ವರ್ಗವಾದಾಗ ಪುಟ್ಟರಾಜುವನ್ನೂ ಕರೆದುಕೊಂಡು ಬಂದು 1956ರಲ್ಲಿ ಚಾಮರಾಜೇಂದ್ರ ತಾಂತ್ರಿಕ ಶಾಲೆಗೆ ಸೇರಿಸಿ ಬೆಳೆವ ಸಸಿಗೆ ಪ್ರೋತ್ಸಾಹದ ನೀರೆರೆದರು. ಅಲ್ಲಿ ಪುಟ್ಟರಾಜು ಐದು ವರ್ಷಗಳ ಇನ್ಲೇ ಕಲೆಯ ಶಿಕ್ಷಣವನ್ನು ನಾಲ್ಕೇ ವರ್ಷಗಳಲ್ಲಿ ಮುಗಿಸಿ ಮತ್ತೆ ಅಲ್ಲಿಯೇ ಐದು ವರ್ಷಗಳ ಚಿತ್ರಕಲೆಯ ಡಿಪ್ಲೊಮಾವನ್ನೂ ನಾಲ್ಕೇ ವರ್ಷಗಳಲ್ಲಿ ಪೂರ್ಣಗೊಳಿಸಿ ಎಲ್ಲರ ಗಮನ ಸೆಳೆದರು. ಲತೀಫ್, ವೈ.ಸುಬ್ರಮಣ್ಯರಾಜು, ಎಫ್.ಎಂ. ಸೂಫಿ ಮತ್ತು ಎಂ.ಜೆ. ಶುದ್ಧೋಧನ ಅವರಂತಹ ಮಹಾನ್ ಕಲಾವಿದ ಗುರುವರ್ಯರ ಗರಡಿಯಲ್ಲಿ ಪಳಗಿದ ಪುಟ್ಟರಾಜು ಕಲೆಗಾರಿಕೆಯ ಸೂಕ್ಷ್ಮತೆಗಳನ್ನೆಲ್ಲಾ ಅರಗಿಸಿಕೊಂಡು ಗುರುಗಳನ್ನು ಮೀರಿಸಿದ ಶಿಷ್ಯನಾದರು.

ಮದ್ರಾಸಿನ ಪ್ರತಿಷ್ಠಿತ ವಿಕ್ಟೋರಿಯಾ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ಗೆ ಮರದ ಉಬ್ಬು ಕೆತ್ತನೆ ಶಿಲ್ಪಗಳನ್ನು ಮಾಡಿಕೊಟ್ಟಿದ್ದ ಪುಟ್ಟರಾಜು ಅಲ್ಲಿನವರ ಗಮನ ಸೆಳೆದಿದ್ದರು. ಅಲ್ಲದೆ, ಮೊದಲ ಬಾರಿಗೆ 1980ರಲ್ಲಿ ಮದ್ರಾಸಿನಲ್ಲಿ ಹುದುಗು ಮತ್ತು ಮರದ ಕಲಾಕೃತಿಗಳ ರಚನೆಯ ಬಗ್ಗೆ ಕಾರ್ಯಾಗಾರವನ್ನೂ ಆರಂಭಿಸಿ ನೂರಾರು ಇನ್ಲೇ ಕಲಾವಿದರ ಸೃಷ್ಟಿಗೆ ಕಾರಣರಾದರು. 1993ರಲ್ಲಿ ಮೈಸೂರಿಗೆ ಹಿಂದಿರುಗಿದ ಪುಟ್ಟರಾಜು ಅಲ್ಲಿಂದೀಚೆಗೆ ತಮ್ಮ ಚಿತ್ರಕಲಾ ಕೈಂಕರ್ಯಕ್ಕೆ ರಾಜರೂರು ಮೈಸೂರನ್ನು ಕರ್ಮಭೂಮಿ ಮಾಡಿಕೊಂಡು ಯುವ ಪೀಳಿಗೆಗೆ ತಮ್ಮ ಕಲಾ ಕೌಶಲವನ್ನು ಧಾರೆಯೆರೆಯುತ್ತಿದ್ದಾರೆ. ಸದಾ ಪ್ರಯೋಗಶೀಲರಾಗಿ ಏನಾದರೂ ಹೊಸತನ್ನು ಸಾಧಿಸಲು ತುಡಿಯುವ ಪುಟ್ಟರಾಜು ಅವರು ರಾಷ್ಟ್ರಕವಿ ಕುವೆಂಪು, ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ, ಇಂದಿರಾ ಗಾಂಧಿ, ಎಂ.ಜಿ.ಆರ್., ಜಯಲಲಿತಾ, ರಾಜಕುಮಾರಿ ಡಯಾನ, ದೇವದಾಸ್ ಚಲನಚಿತ್ರದ ಐಶ್ವರ್ಯರೈ, ಗಣಪತಿ ಸಚ್ಚಿದಾನಂದ ಸ್ವಾಮೀಜಿ ಜೊತೆಗೆ ಪ್ರಕೃತಿ, ಪ್ರಾಣಿ, ಪಕ್ಷಿಗಳು ಸೇರಿದಂತೆ ಒಂದೂವರೆ ಸಾವಿರಕ್ಕೂ ಹೆಚ್ಚು ಉಬ್ಬು ಚಿತ್ರಗಳನ್ನು ನಿರ್ಮಿಸಿದ್ದಾರೆ. ಇದೊಂದು ದಾಖಲೆಯೇ ಸರಿ!.

ಪುಟ್ಟರಾಜು ಅವರ ಮತ್ತೊಂದು ಹೆಗ್ಗಳಿಕೆಯೆಂದರೆ ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಅಜರಾಮರವಾಗಿರುವ ರಾಜಾ ರವಿವರ್ಮನ 35ಕ್ಕೂ ಹೆಚ್ಚು ಕಲಾಕೃತಿಗಳನ್ನು ದಾರು ಶಿಲ್ಪ ಮಾಧ್ಯಮದಲ್ಲಿ 700ಕ್ಕೂ ಹೆಚ್ಚಿನ ಮರದ ಚಕ್ಕೆ ಮತ್ತು ಪದರಗಳನ್ನು ಬಳಸಿ ಹೊಸ ರೀತಿಯಲ್ಲಿ ಮರು ಸೃಷ್ಟಿಸಿರುವುದು. ಇದು ಅಸಾಧ್ಯವನ್ನು ಸಾಧ್ಯಗೊಳಿಸಿದ ಅಪರೂಪದ ಕಲಾವಂತಿಕೆಯಾಗಿದೆ.

ಕಲಾವಿದ ಆರ್.ಪುಟ್ಟರಾಜು ಅವರ ಜೀವಮಾನದ ಚಿತ್ರಕಲಾ ಸೇವೆಗಾಗಿ 2005ರಲ್ಲಿ ನಾಡಿನ ಪ್ರತಿಷ್ಠಿತ ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ಪ್ರಶಸ್ತಿ, ರೋಟರಿ ಪ್ರಶಸ್ತಿ, 2008ರಲ್ಲಿ ಕರ್ನಾಟಕ ಸರ್ಕಾರದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹೀಗೆ ಹತ್ತು ಹಲವು ಪ್ರಶಸ್ತಿ-ಪುರಸ್ಕಾರ, ಗೌರವ- ಸನ್ಮಾನಗಳಿಗೆ ಭಾಜನರಾಗಿದ್ದಾರೆ.


***



ಪ್ರಧಾನಿ ಮೋದಿ ತಾಯಿಂಯೊಂದಿಗೆ ಇರುವ ಸನ್ನಿವೇಶವನ್ನು ತಮ್ಮ ಹುದುಗು ಕಲೆಯ ಮೂಲಕ ನಿರೂಪಿಸುತ್ತಿರುವ ಪುಟ್ಟರಾಜು



ವಾರಭವಿಷ್ಯ



22.9.2024 ರಿಂದ 28.9.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕನ್ಯಾ, ಚಂದ್ರ-ವೃಷಭ, ಮಿಥುನ, ಕಟಕ, ಕುಜ-ಮಿಥುನ, ಬುಧ-ಸಿಂಹ, ಕನ್ಯಾ, ಗುರು-ವೃಷಭ, ಶುಕ್ರ-ತುಲಾ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನಾನಾ ರೀತಿಯಿಂದ ಧನ ಸಂಗ್ರಹ, ವಾಹನ ಖರೀದಿಗೆ ಯೋಗವಿದೆ. ಬೃಹತ್ ಉದ್ಯಮಿಗಳಿಗೆ ಬೃಹಸ್ಪತಿಯ ಕರುಣೆಯಿಂದ ನಿರೀಕ್ಷೆ ಮೀರಿ ವಹಿವಾಟು. ಸ್ತ್ರೀಯರು ಅಲಂಕಾರಿಕ ವಸ್ತುಗಳಿಗೆ ಧಾರಾಳ ಹಣ ವ್ಯಯಿಸುವರು. ಉದ್ಯೋಗಾಕಾಂಕ್ಷಿಗಳಿಗೆ ಯಥಾಸ್ಥಿತಿ ಮುಂದುವರೆಯುವುದು. ಪ್ರೀತಿ-ಪ್ರಣಯ ವಿಷಯಗಳು ಆಶಾದಾಯಕವಾಗಿದೆ. ಸರ್ಕಾರಿ ನೌಕರರು ಅಡ್ಡದಾರಿಯಲ್ಲಿ ಸಾಗಿ ತೊಂದರೆ ಪಡುವರು.

ಶ್ರೀ ಗಣಪತಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ-1

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನಿಮ್ಮ ರಾಶಿಗೆ ಬರುವ ಉಚ್ಛ ಚಂದ್ರನಿಂದ ವಾರದ ಆದಿಗೆ ಶುಭ ಸುದ್ದಿ ಬಂದು ಮನಸ್ಸಿಗೆ ಹರ್ಷ. ಸಣ್ಣ ಕೈಗಾರಿಕೆಯವರಿಗೆ ಮಾರಾಟದಲ್ಲಿ ಹೆಚ್ಚಳ. ದ್ವಿದಳ ಧಾನ್ಯ, ಎಣ್ಣೆ ಕಾಳು ವ್ಯಾಪಾರಿಗಳಿಗೆ ಹಾಗೂ ಕೃಷಿಕರಿಗೆ ಉತ್ತಮ ಆದಾಯ. ವಾರ ಮಧ್ಯೆ ಆತ್ಮೀಯರ ಭೇಟಿ. ಕಷ್ಟ ಸುಖದ ಮಾತುಗಳು. ಸಹೋದರರಲ್ಲಿ ಇರುಸು-ಮುರುಸು. ವಾತ ಸಂಬಂಧಿ ಕಾಯಿಲೆ ಕಾಡಿಸುತ್ತದೆ.

ನವಗ್ರಹ ದರ್ಶನ. ಶುಭ ಸಂಖ್ಯೆ-5

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸಪ್ತಾಹದ ಆರಂಭಕ್ಕೆ ಪರೋಪಕಾರ ಬುದ್ಧಿ, ಸಾಮಾಜಿಕ ಗೌರವ, ವ್ಯಾಪಾರ ವ್ಯವಹಾರಗಳು ದ್ವಿಗುಣಗೊಳ್ಳುವುದು. ನಿಮ್ಮ ಸಂತಾನಕ್ಕೆ ಉದ್ಯೋಗ ದೊರೆಯುವುದು. ಸಹೋದರ ವರ್ಗದಲ್ಲಿ ವಿರಸ ಹಾಗೂ ಅಪನಂಬಿಕೆಗಳು. ವಾರ ಮಧ್ಯೆ ಅನಿರೀಕ್ಷಿತ ಮೂಲಗಳಿಂದ ಧನ ಸಂಚಯ. ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಟ್ರಿಪ್‌ಗಳು ದೊರೆಯುವುದು. ವಾರದ ಕಡೆಗೆ ಸಂಸಾರ ಸಮೇತ ಪುಣ್ಯಕ್ಷೇತ್ರ ಸಂದರ್ಶನ.

ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-9

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಮಾಡುವ ಕೆಲಸವನ್ನು ನಿರ್ಮಲ ಚಿತ್ತದಿಂದ ಮಾಡಿ, ಜೊತೆಗೆ ಗುರು ದರ್ಶನದಿಂದ ಗುರಿ ಕಾಣುತ್ತದೆ. ಸರ್ಕಾರಿ ನೌಕರರಿಗೆ ಮುಂಬಡ್ತಿಯ ಯೋಗವಿದೆ. ನಿವೇಶನ, ಗೃಹ ಹೊಂದುವ ಅಭಿಲಾಷೆ ಸಫಲವಾಗುವ ಸಮಯ ಬಂದಿದೆ. ಹಲವರಿಗೆ ಉನ್ನತ ವ್ಯಾಸಂಗಕ್ಕೆ ವಿದೇಶಕ್ಕೆ ತೆರಳುವ ಸಂಭವವಿದೆ. ರೇಷ್ಮೆ ಬೆಳೆ ಹಾಗೂ ರೇಷ್ಮೆ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಗಳಿಕೆ ಆಗುವುದು. ಶಕ್ತಿಹೀನತೆ ಕಾಡುತ್ತದೆ.

ಶ್ರೀ ದೇವಿಗೆ ಸುಗಂಧ ಪುಷ್ಪ ಸಮರ್ಪಣೆ. ಶುಭ ಸಂಖ್ಯೆ-3

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವ್ಯಾಪಾರದಲ್ಲಿ ಹೊಸ ಯೋಜನೆ ಅಳವಡಿಸಿಕೊಳ್ಳಲು ಕಾಲ ಪಕ್ವವಾಗಿದೆ. ಕರಕುಶಲ ವಸ್ತು ಮಾರಾಟಗಾರರಿಗೆ ದೊಡ್ಡ ಮೊತ್ತದ ವ್ಯಾಪಾರವಾಗುವುದು. ರಾಜಕಾರಣಿಗಳಿಗೆ ಚಂದ್ರ-ಗುರುವಿನ ಸಂಯೋಗ ಶುಭವಿದ್ದು ಉನ್ನತ ಸ್ಥಾನ ಹಾಗೂ ಜವಾಬ್ದಾರಿಗಳು ಹೆಚ್ಚಲಿದೆ. ವಧು-ವರಾನ್ವೇಷಣೆ ಧನಾತ್ಮಕ ಫಲ ನೀಡಲಿದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಒಮ್ಮತ ಮೂಡದೆ ನಷ್ಟವನ್ನು ಅನುಭವಿಸುವಿರಿ.

ಶ್ರೀ ಸೂರ್ಯ ನಮಸ್ಕಾರ. ಶುಭ ಸಂಖ್ಯೆ-5

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ಅಮೂಲ್ಯ ಸಂಪತ್ತು ಗಳಿಕೆಗೆ ಅವಕಾಶವಿದೆ. ಪ್ರಯತ್ನ ಪುರುಷಾಧೀನ, ಫಲ ದೈವಾಧೀನ. ಹಿಂದೆ ಮಾಡಿದ್ದ ಪುಣ್ಯ ಈಗ ಫಲ ನೀಡುವ ಕಾಲ ಬಂದಿದೆ. ಉದ್ಯೋಗ, ವ್ಯವಹಾರಗಳು ಪ್ರಗತಿಯ ಹಾದಿಯಲ್ಲಿ ಸಾಗುವುದು. ವಿದ್ಯಾರ್ಜನೆಯಲ್ಲಿ ಪ್ರೇರಣೆ ಉಂಟಾಗುವುದು. ಕೆಲವರಿಗೆ ಕಂಕಣಬಲ ಕೂಡಿ ಬರಲಿದೆ. ರಾಹು-ಕೇತು ಕರ್ತರಿಯೋಗವಿರುವ ಕಾರಣ ವಾಹನಾಪಘಾತಗಳಿಂದ ಜಾಗೃತರಾಗಿರಿ.

ಶ್ರೀ ರಾಹು-ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಅಂದುಕೊಂಡಿದ್ದೆಲ್ಲಾ ಆಗುವುದಿಲ್ಲ. ಹೊಂದಿಕೊಂಡು ಹೋಗುವುದೇ ಜಾಣತನ. ಬಾಳ ಸಂಗಾತಿಯ ಸಲಹೆ ಮನ್ನಿಸಿ ಒಳಿತಾಗುತ್ತದೆ. ಉದ್ಯೋಗ ಸ್ಥಾನದಲ್ಲಿ ಬದಲಾವಣೆ ಸಂಭವ. ಆತ್ಮೀಯ ಬಂಧುಗಳು ಮನೆಗೆ ಭೇಟಿ, ಅವರ ಊಟೋಪಚಾರಕ್ಕೆ ಹಣ ಖರ್ಚಾಗುವುದು. ನಿಮ್ಮ ವ್ಯಾಪಾರ, ವ್ಯವಹಾರ ಅಭಿವೃದ್ಧಿಗೆ ಪೂರ್ವಭಾವಿ ಮಾತುಕತೆ ನಡೆಯುವುದು. ಪಿತೃ ಸಮಾನ ವ್ಯಕ್ತಿಗೆ ಅನಾರೋಗ್ಯ ಕಾಡಿಸುವುದು.

ಶ್ರೀ ದೇವಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-7

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ನಿಮ್ಮ ರಾಶಿಗೆ ಶುಭ ಚಂದ್ರನ ಉಚ್ಛ ದೃಷ್ಟಿ ಬೀಳುವುದರಿಂದ ಜೀವನದಲ್ಲಿ ನವ ಉಲ್ಲಾಸ, ಮಂಗಳ ಕಾರ್ಯಕ್ಕೆ ಸಿದ್ಧತೆ ಗುರು-ಚಂದ್ರ ಯತಿಯೂ ಇರುವುದರಿಂದ ಸಿಹಿ ಸುದ್ದಿ ಹೊತ್ತ, ಓಲೆಯೂ ಬರುವುದು. ಮನೆಯ ಮುಂದೆ ಹಸಿರು ಚಪ್ಪರ ಹಾಕುವ ಸಮಯ. ಉದ್ಯೋಗದಲ್ಲಿ ಸ್ಥಾನಮಾನದಲ್ಲಿ ವೃದ್ಧಿ. ಸಂಪರ್ಕ ಮಾಧ್ಯಮದವರಿಗೆ ಸರ್ಕಾರದ ಗೌರವ ಮಾನ್ಯತೆಗಳು ದೊರೆಯುವ ಸಂಭವ.

ಶ್ರೀ ಲಕ್ಷ್ಮೀನೃಸಿಂಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸುವಾರ್ತೆ ಬರುವುದು. ಹಿತೈಷಿಗಳ ಸಮಾಗಮ ಮನಸ್ಸಿಗೆ ಹಿತ ತರುವುದು. ಧಾರಾಳವಾಗಿ ಹಣ ಸಂಗ್ರಹವಾದರೂ, ಅನವಶ್ಯಕ ಖರ್ಚುಗಳಿಂದ ಪರ್ಸ್ ಖಾಲಿ. ಮನೆ ಕಟ್ಟಡ ಕೆಲಸ ನೀವಂದುಕೊಂಡಂತೆ ಸಾಗದೆ ಮನಸ್ಸಿಗೆ ಬೇಸರ. ಪಡೆದ ಸಾಲವನ್ನು ಸದ್ವಿನಿಯೋಗ ಮಾಡದೆ ಪಶ್ಚಾತ್ತಾಪಪಡುವಿರಿ. ನೆರೆಹೊರೆಯಲ್ಲಿ ದ್ವೇಷ ಸಾಧನೆಯಿಂದ ಒಳಿತಾಗದು. ನೀರಿನೊಂದಿಗೆ ಹುಡುಗಾಟ ಕೂಡದು.

ಶ್ರೀ ರುದ್ರ ಮಂತ್ರ ಜಪಿಸಿ. ಶುಭ ಸಂಖ್ಯೆ-9

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಕಳೆದುಕೊಂಡಿದ್ದನ್ನು ಮರಳಿ ಪಡೆಯುವಿರಿ. ಹಲವರಿಗೆ ವಿದೇಶ ಪ್ರವಾಸದ ಯೋಗವಿದೆ. ವಧು-ವರ ನಿಶ್ಚಯಕ್ಕೆ ಗುರುಬಲವಿದೆ. ಕುಟುಂಬ ಕಲಹಗಳು ನಿವಾರಣೆ ಆಗುವುದು. ರಾಹು-ಕೇತು ಸಂಯೋಗವಿರುವ ಕಾರಣ ಅನಾರೋಗ್ಯ ಕಾಡುವುದು. ಈ ವಾರದಲ್ಲಿ ನಿಮ್ಮ ದಕ್ಷತೆಯ ಪರೀಕ್ಷೆ ಆಗಲಿದೆ. ವಾರದ ಕಡೆಗೆ ದೇವತಾ ಉತ್ಸವಾದಿಗಳಲ್ಲಿ ಭಾಗವಹಿಸಿ ಧನ್ಯತಾಭಾವ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-4

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಜಗದಲ್ಲಿ ನಡೆಯುವುದೆಲ್ಲ ಜಗದೀಶನ ಇಚ್ಛೆ. ಹೊಸ ಯೋಜನೆಗಳನ್ನು ಸೂಕ್ತ ತಯಾರಿ ಇಲ್ಲದೆ ಮಾಡುವುದರಿಂದ ನಷ್ಟವಾದೀತು. ಅಪರಿಚಿತರೊಂದಿಗೆ ನಿಮ್ಮ ಅಕೌಂಟ್ ವಿವರಗಳನ್ನು ಹಂಚಿಕೊಳ್ಳದಿರಿ. ನಿಮ್ಮ ನಿರಂತರ ಪರಿಶ್ರಮ ಫಲ ನೀಡಲು ಸಮಯ ಕಾಯಬೇಕಿದೆ. ವಾರದ ಕಡೆಗೆ ಸಂಪರ್ಕದಿಂದ ಸದ್ವಿಚಾರಗಳ ಅರಿವು ಉಂಟಾಗುವುದು. ಅಗ್ನಿ ಅವಘಡಗಳಿಂದ ಎಚ್ಚರ.

ಓಂ ನಮೋ ನಾರಾಯಣಾಯ ಮಂತ್ರ ಜಪಿಸಿ. ಶುಭ ಸಂಖ್ಯೆ-2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)


ಸಪ್ತಾಹದ ಆದಿಗೆ ನಿಮ್ಮ ಕಾರ್ಯತತ್ಪರತೆ ಹಾಗೂ ಶ್ರದ್ಧೆಗಳು ಈಗ ಸುಫಲವನ್ನು ನೀಡುವುದು. ಹೋಟೆಲ್ ಹಾಗೂ ಟೂರಿಸ್ಟ್ ಸಂಸ್ಥೆಗಳಿಗೆ ನಿರೀಕ್ಷೆ ಮೀರಿ ಆದಾಯವಾಗುವುದು. ದಾನ-ಧರ್ಮ ಪ್ರವೃತ್ತಿಯಿಂದ ಸಾಮಾಜಿಕ ಗೌರವಾದರಗಳಿಗೆ ಪಾತ್ರರಾಗುವಿರಿ. ರೈತಾಪಿ ಜನರಿಗೆ ಉತ್ತಮ ಬೆಳೆಯಾದರೂ ಸೂಕ್ತ ಬೆಲೆ ದೊರಕದೆ ನಿರಾಶೆ ಉಂಟಾಗುವುದು.

ಶ್ರೀದತ್ತ ದೇವ ದರ್ಶನ. ಶುಭ ಸಂಖ್ಯೆ-2


ಮಕ್ಕಳ ಚಿತ್ರಕಥೆ

'ಯಾವ ವಿಷಯವಾಗಿ ಚರ್ಚೆ ಮಾಡುತ್ತಿರುವಿರಿ...?'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಮ್ಮೆ ನಾಲ್ವರು ಕುರುಡರು ಆನೆಯನ್ನು ಮುಟ್ಟಿ ಅವರವರ ಭಾವದಂತೆ ವರ್ಣಿಸುತ್ತಿದ್ದರು.




ಒಬ್ಬ ಕುರುಡ ಆನೆಯ ಕಾಲುಗಳನ್ನು ಮುಟ್ಟಿ ನೋಡಿ, "ಆನೆ ಕಂಬದಂತಿದೆ...!!!" ಎಂದ.




ಇನ್ನೊಬ್ಬ ಅದರ ಸೊಂಡಿಲನ್ನು ಮುಟ್ಟಿ ನೋಡಿ, "ಇಲ್ಲ ಆನೆ ಗದೆಯಂತಿದೆ....!!!" ಎಂದ.



ಮೂರನೆಯವನು ಆನೆಯ ಹೊಟ್ಟೆಯನ್ನು ಮುಟ್ಟಿ ನೋಡಿ, "ಇಲ್ಲ... ಇಲ್ಲ... ಆನೆ ಗುಡಾಣದಂತಿದೆ...!!!" ಎಂದ.



ನಾಲ್ಕನೆಯವನು ಅದರ ಕಿವಿಯನ್ನು ಮುಟ್ಟಿ ನೋಡಿ, "ಇಲ್ಲವೇ ಇಲ್ಲ ಆನೆ ಕೇರುವ ಮೊರದಂತೆ ಇದೆ" ಎಂದ.



ಅದೇ ದಾರಿಯಲ್ಲಿ ಒಬ್ಬ ಹೋಗುತ್ತಿದ್ದವ ಇವರನ್ನು ಕೇಳಿದ, "ಯಾವ ವಿಷಯವಾಗಿ ಚರ್ಚೆ ಮಾಡುತ್ತಿರುವಿರಿ...?". ಅದಕ್ಕೆ ನಾಲ್ವರೂ "ಆನೆಯ ವಿಷಯ..!" ಎಂದುತ್ತರಿಸಿದರು. ಆಗ ದಾರಿಹೋಕನು "ನಿಮಗೆ ಆನೆಯ ಪೂರ್ಣ ಆಕಾರದ ಅರಿವಿಲ್ಲ. ಅದರ ದೇಹದ ಒಂದೊಂದೇ ಭಾಗವನ್ನು ಮಾತ್ರ ಅರಿತಿದ್ದೀರಷ್ಟೇ ಎಂದನು.

ನೀತಿ :- ಹಾಗೆಯೇ "ದೇವರ" ವಿಷಯದಲ್ಲೂ ಅಷ್ಟೇ ಜನರು ತಮ್ಮ ಭಾವ-ಭಕುತಿ ಅನ್ವಯ ಕಲ್ಪಿಸಿಕೊಂಡು ಆರಾಧಿಸುತ್ತಾರೆ. ಆದರೆ ದೇವರ ಆಕಾರ ಬಲ್ಲವರಿಲ್ಲ. ಅವರವರಿಗೆ ತೋಚಿದಂತೆ ನಿರ್ಧರಿಸಿ, ಆರಾಧಿಸುತ್ತಾರೆ. ಒಟ್ಟಿನಲ್ಲಿ ಪರಮಾತ್ಮ ಎಲ್ಲರಿಗೂ ಮುಖ್ಯವಾಗಿದೆ.

ಮೈಸೂರು ಮಿತ್ರ
ಭಾನುವಾರ 22 ಸೆಪ್ಟೆಂಬರ್ 2024

ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅಪಾರ

ಶಿಕ್ಷಕರ ದಿನಾಚರಣೆಯಲ್ಲಿ ಸಂಸದ ಸುನೀಲ್ ಬೋಸ್ ಅಭಿಪ್ರಾಯ



ಸಮಾರಂಭದಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು

ತಿ.ನರಸೀಪುರ, ಸೆ.21– ಶಿಕ್ಷಣ ವ್ಯಾಪಾರೀಕರಣವಾಗಿರುವ ಈಗಿನ ಕಾಲಘಟ್ಟದಲ್ಲಿ ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಪಾತ್ರ ಅಪಾರವಾಗಿದ್ದು, ಮಕ್ಕಳ ಮುಂದಿನ ಭವಿಷ್ಯ ರೂಪಿಸುವ ಗುರುತರ ಜವಾಬ್ದಾರಿ ಪ್ರತಿಯೊಬ್ಬ ಶಿಕ್ಷಕರ ಮೇಲಿದೆ ಎಂದು ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ಪಟ್ಟಣದ ಹೊರವಲಯದ ಶ್ರೀನಿವಾಸ ಕನ್ವೆನ್ಷನ್ ಹಾಲ್‌ನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಶಿಕ್ಷಕರ ದಿನಾಚರಣೆ ಆಚರಣಾ ಸಮಿತಿ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಉದ್ಘಾಟಿಸಿ, ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳಿಗೆ ಶಿಕ್ಷಣದ ಜೊತೆಗೆ ಬದುಕಿನ ಪಾಠ ಕಲಿಸಬೇಕು ಮತ್ತು ಮಕ್ಕಳು ಗುರುಗಳು ನೀಡುವ ಸಲಹೆಯನ್ನು ಚಾಚೂ ತಪ್ಪದೇ ಪಾಲಿಸಿದರೆ ಮುಂದಿನ ಭವಿಷ್ಯಕ್ಕೆ ನಾಂದಿಯಾಗುತ್ತದೆ ಎಂದರು.

ಗ್ರಾಮೀಣ ಭಾಗದಲ್ಲಿ ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಲಾಗುವುದು. ತಾಲೂಕಿನಲ್ಲಿ ಶೈಕ್ಷಣಿಕ ಪ್ರಗತಿಗೆ ಜನಪ್ರತಿನಿಧಿಯಾಗಿ ಸಿಎಂ, ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ನಾವು ಕೂಡ ಸಂಪೂರ್ಣ ಸಹಕಾರ ನೀಡುತ್ತೇವೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ಶಿಕ್ಷಣವನ್ನು ಸಾರ್ವತ್ರಿಕಗೊಳಿಸಿ ಮೂಲಭೂತ ಹಕ್ಕಾಗಿ ಮಾಡಿದ್ದರಿಂದ ಶಿಕ್ಷಕರೇ ಮನೆ ಮನೆಗೆ ತೆರಳಿ ಶಾಲೆಯಿಂದ ಹೊರಗುಳಿದವರನ್ನು ಶಾಲೆಗೆ ದಾಖಲಿಸುವ ಮೂಲಕ ಪ್ರತಿಯೊಬ್ಬರಿಗೂ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಶಿಕ್ಷಕರ ಪರಿಶ್ರಮದಿಂದ ದೇಶದಲ್ಲಿ ಸಾಕ್ಷರತೆ ಪ್ರಮಾಣ ಏರಿಕೆಯಾಗಿದೆ. ಜೀವನದಲ್ಲಿ ಉತ್ತಮ ಬದುಕು ರೂಪಿಸಿಕೊಳ್ಳಲು ಶಿಕ್ಷಣ ಪ್ರಮುಖ ಪಾತ್ರ ವಹಿಸುವುದರಿಂದ ಎಲ್ಲರೂ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ವರುಣ ಸಿಎಂ ಸಿದ್ದರಾಮಯ್ಯ ಪ್ರತಿನಿಧಿಸುವ ಕ್ಷೇತ್ರವಾಗಿದ್ದು, ಆ ಕ್ಷೇತ್ರ ಶಿಕ್ಷಣದಲ್ಲಿ ಪ್ರಥಮ ಸ್ಥಾನ ಪಡೆಯಬೇಕು. ಆ ನಿಟ್ಟಿನಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಪಾಠ ಮಾಡಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಹಿಂದೆ ಇದ್ದ ಶಿಕ್ಷಣಾಧಿಕಾರಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ತಿ.ನರಸೀಪುರ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸುವಂತೆ ಮಾಡಿದ್ದರು. ಮುಂದಿನ ದಿನಗಳಲ್ಲಿ ಶಿಕ್ಷಕರ ಸಹಕಾರದಿಂದ ಅದನ್ನು ಮುಂದುವರೆಸಿಕೊಂಡು ಹೋಗುತ್ತೇವೆ ಎಂದರು.

ಸಮಾರಂಭದಲ್ಲಿ ನಿವೃತ್ತ ಶಿಕ್ಷಕರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಅಲ್ಲದೇ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತವಾಗಿ ನೀಡುವ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ವಿವೇಕಾನಂದ, ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ, ಬನ್ನೂರು ಪುರಸಭೆ ಉಪಾಧ್ಯಕ್ಷೆ ನಾಗರತ್ನ ಪ್ರಭಾಕರ್, ಕಾಂಗ್ರೆಸ್ ಯುವ ಮುಖಂಡ ಲಕ್ಷ್ಮೀನಾರಾಯಣ, ಪುರಸಭೆ ಮಾಜಿ ಅಧ್ಯಕ್ಷ ಎಸ್.ಸೋಮಣ್ಣ ಸದಸ್ಯರಾದ ಸಿ.ಪ್ರಕಾಶ್, ಬಾದಾಮಿ ಮಂಜು, ಮೆಡಿಕಲ್ ನಾಗರಾಜು, ಮಾಜಿ ಸದಸ್ಯ ರಾಘವೇಂದ್ರ, ವರುಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಮುದ್ದೇಗೌಡ, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗ ಅಧ್ಯಕ್ಷ ಚೇತನ್, ತಾಲೂಕು ಕುರುಬ ಸಂಘದ ನಿರ್ದೇಶಕ ಅರುಣ್ ಕುಮಾರ್, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಪುರಸಭೆ ಮಾಜಿ ಸದಸ್ಯ ಗಣೇಶ್, ಎಂ.ಮಿಥುನ್, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್. ಉಮೇಶ್, ಮಾಜಿ ಸದಸ್ಯರಾದ ಕುಕ್ಕೂರು ಗಣೇಶ್, ರಾಮಲಿಂಗಯ್ಯ ಎಂ.ರಮೇಶ್, ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್, ಎಇಇ ಪಿ.ಎಸ್.ಚರಿತಾ, ಪುರಸಭಾ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಹೇಮಂತ್ ರಾಜ್, ಸಹಾಯಕ ನಿರ್ದೇಶಕರಾದ ಶಾಂತ, ರಾಜಣ್ಣ, ಲಿಂಗರಾಜು, ಬಿಆರ್‌ಸಿ ನಾಗೇಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಪಿ. ಶಿವಕುಮಾರಮೂರ್ತಿ, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ರಾಜೇಂದ್ರಪ್ರಸಾದ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸುಬ್ಬಣ್ಣ, ಪ್ರಧಾನ ಕಾರ್ಯದರ್ಶಿ ಕುಪ್ಯ ಪುಟ್ಟಸ್ವಾಮಿ, ಸೋಸಲೆ ನಾಗೇಶ್, ಸುಬ್ರಹ್ಮಣ್ಯ, ದೈಹಿಕ ಶಿಕ್ಷಕ ಕುಮಾರಸ್ವಾಮಿ, ಕ್ಲಸ್ಟರ್‌ನ ಸಿಆರ್‌ಪಿಗಳು, ಬಿಆರ್‌ಪಿಗಳು, ಶಿಕ್ಷಕರು ಇದ್ದರು.

ಈ ಬಾರಿ ತಿ.ನರಸೀಪುರ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುವುದು ಸಂತಸದ ವಿಚಾರ. ಈ ಸ್ಥಾನವನ್ನು ತಾಲೂಕು ಮುಂದುವರೆಸಿಕೊಂಡು ಹೋಗಬೇಕು. ಇದಕ್ಕಾಗಿ ಎಲ್ಲಾ ರೀತಿಯ ಸಲಹೆ, ಸಹಕಾರ ನೀಡಲಾಗುವುದು. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಕಲ್ಪಿಸುವ ಮೂಲಕ ಬಡ ವಿದ್ಯಾರ್ಥಿಗಳಿಗೂ ಐಎಎಸ್, ಐಪಿಎಸ್‌ನಂತಹ ಉನ್ನತ ಸ್ಥಾನ ಅಲಂಕರಿಸಲು ಸಹಾಯ ಮಾಡಲಾಗುವುದು.

- ಸುನೀಲ್ ಬೋಸ್, ಸಂಸದ

ಗಾಯಗೊಂಡಿದ್ದ ಹುಲಿ ಬನ್ನೇರುಘಟ್ಟಕ್ಕೆ



ಹನಗೋಡು, ಸೆ.21– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕುಂತೂರು ಅರಣ್ಯ ಪ್ರದೇಶದಲ್ಲಿ ಮತ್ತೊಂದು ಹುಲಿಯೊಂದಿಗಿನ ಕಾದಾಟದಲ್ಲಿ ಗಾಯಗೊಂಡಿದ್ದ 11 ವರ್ಷದ ಗಂಡು ಹುಲಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸೆರೆ ಹಿಡಿದು ಚಿಕಿತ್ಸೆ ನೀಡಿ, ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಸಾಗಿಸಿದರು.

ನಾಗರಹೊಳೆ ಸಫಾರಿ ವಲಯದಲ್ಲಿ 'ಮೋಗ' ಎಂಬ ಹೆಸರಿನಿಂದ ಖ್ಯಾತಿ ಪಡೆದಿದ್ದ ಈ ಹುಲಿ ಮತ್ತೊಂದು ಗಂಡು ಹುಲಿಯ ಜೊತೆ ಕಾದಾಡಿ ಗಾಯಗೊಂಡಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿಯನ್ನು ಸೆರೆ ಹಿಡಿದು ಚಿಕಿತ್ಸೆ ನೀಡಿ ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಸಾಗಿಸಿದ್ದಾರೆ. ಇದೇ ಹುಲಿ ಸೆರೆಯಾದ ರಾತ್ರಿ ಕುಟ್ಟ–ಪೊನ್ನಂಪೇಟೆ ಮುಖ್ಯರಸ್ತೆ ಮಧ್ಯ ಕುಳಿತು ಸಾರ್ವಜನಿಕರಲ್ಲಿ ಆತಂಕ ಉಂಟು ಸೃಷ್ಟಿಸಿತ್ತು. ಕಾರ್ಯಾಚರಣೆಯಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಸೀಮಾ.ಪಿ.ಎ, ಅರಣ್ಯ ಇಲಾಖೆ ಪಶು ವೈದ್ಯಾಧಿಕಾರಿಗಳಾದ ಡಾ. ರಮೇಶ್, ಹೆಚ್. ಡಾ.ವಾಸಿಂ ಮಿರ್ಜಾ, ಶಾರ್ಪ್ ಶೂಟರ್ ರಂಜನ್ ಕೆ.ಪಿ, ನಾಗರಹೊಳೆ ವನ್ಯಜೀವಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅನನ್ಯ ಕುಮಾರ್.ಜೆ, ವಲಯ ಅರಣ್ಯಾಧಿಕಾರಿ ಮಂಜುನಾಥ್.ಹೆಚ್.ಎಂ, ಅರಣ್ಯಾಧಿಕಾರಿಗಳಾದ ಗುರುಮೂರ್ತಿ, ನಾಗರಾಜು ಶ್ರೀಖಂಡೆ, ಚೇತನ್ ಕುಮಾರ್ ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಹಾಡಹಗಲೇ ಹಸುಗಳ ಮೇಲೆ ಹುಲಿ ದಾಳಿ

ಹನಗೋಡು, ಸೆ.21– ಹಾಡಹಗಲೇ ಹಸುಗಳ ಮೇಲೆ ಹುಲಿ ದಾಳಿ ನಡೆಸಿ ಗಾಯಗೊಳಿಸಿರುವ ಘಟನೆ ಇಲ್ಲಿಗೆ ಸಮೀಪದ ಕೊಳವಿಗೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿಗಳಾದ ರಾಜೇಂದ್ರ, ಗಿರೀಶ್ ಅವರ ಹಸುಗಳು ಗಾಯಗೊಂಡಿದ್ದು, ಪ್ರಾಣಾಪಾಯದಿಂದ ಪಾರಾಗಿವೆ. ಗ್ರಾಮದ ಬಸವೇಶ್ವರ ದೇವಾಲಯದ ಬಳಿ ಹಸುಗಳನ್ನು ಮೇಯಲು ಬಿಟ್ಟಿದ್ದ ವೇಳೆ ಮೊದಲು ರಾಜೇಂದ್ರ ಅವರಿಗೆ ಸೇರಿದ ಹಸುವಿನ ಮೇಲೆ ಹುಲಿ ದಾಳಿ ನಡೆಸಿದೆ. ಈ ವೇಳೆ ಗ್ರಾಮದಲ್ಲಿದ್ದ ಅರಣ್ಯ ಸಿಬ್ಬಂದಿ ಹುಲಿಯನ್ನು ಹಿಮ್ಮೆಟ್ಟಿಸಿ ಹಸುವನ್ನು ರಕ್ಷಣೆ ಮಾಡಿದ್ದಾರೆ. ಇದಾದ ಕೆಲ ಹೊತ್ತಿಗೆ ಅದೇ ಸ್ಥಳಕ್ಕೆ ಮತ್ತೆ ಆಗಮಿಸಿದ ಹುಲಿ ಗಿರೀಶ್ ಅವರ ಹಸುವಿನ ಮೇಲೆ ದಾಳಿ ನಡೆಸಿದೆ. ಈ ವೇಳೆ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತರು ಹುಲಿಯನ್ನು ಕಾಡಿಗಟ್ಟಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಈ ವೇಳೆ ಹುಲಿ ದಾಳಿಯಿಂದ ಗ್ರಾಮಸ್ಥರು ಭಯಗೊಂಡಿದ್ದು ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಬೋನಿಟ್ಟು ಹುಲಿ ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸೆ.28ರಂದು ದಿ. ಕೆ.ಆರ್.ಲಕ್ಕೇಗೌಡರ ಪುಣ್ಯ ಸ್ಮರಣೆ



ಕೆಆರ್.ನಗರ, ಸೆ.21–ನಿವೃತ್ತ ಪ್ರಾಧ್ಯಾಪಕರಾದ ದಿವಂಗತ ಕೆಆರ್.ಲಕ್ಕೇಗೌಡರ ಮೊದಲನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಅವರ ಶಿಷ್ಯ ವೃಂದ, ಹಿತೈಷಿ ಬಳಗ ಹಾಗೂ ಕುಟುಂಬಸ್ಥರು ಸೆ.28ರಂದು ಆಯೋಜಿಸಿದ್ದಾರೆ.

ಕೆ.ಆರ್.ನಗರದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ. ಸಿ.ಎನ್.ಮಂಜುನಾಥ್ ಅವರಿಗೆ ಗೌರವ ಸಮರ್ಪಣೆ ಮಾಡಲಾಗುವುದು. ಈ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶಿಸ್ತು, ಆತ್ಮವಿಶ್ವಾಸದೊಂದಿಗೆ ಗುರಿ ಸಾಧನೆಗೆ ಮುಂದಾಗಿ



ಮಹಾರಾಜ ತಾಂತ್ರಿಕ ವಿವಿಯಲ್ಲಿ ಓರಿಯಂಟೇಶನ್ ಕಾರ್ಯಕ್ರಮ ನಡೆಯಿತು

ನಂಜನಗೂಡು, ಸೆ21– ಹೆಚ್ಚಿನ ಮೊಬೈಲ್ ಬಳಕೆ, ನಮ್ಮ ಜೀವನವನ್ನು ಬೇರೊಬ್ಬರ ಜೊತೆಗೆ ಹೋಲಿಕೆ ಮಾಡಿಕೊಳ್ಳುವ ಪ್ರವೃತ್ತಿಯಿಂದಾಗಿ ಹೆಚ್ಚಿನ ವಿದ್ಯಾರ್ಥಿಗಳು ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆ. ವಿದ್ಯಾರ್ಥಿಗಳು ಮೊಬೈಲ್ ಬಳಕೆ ಬಿಟ್ಟು ಶಿಸ್ತು, ಆತ್ಮವಿಶ್ವಾಸದೊಂದಿಗೆ ನಿರ್ದಿಷ್ಟ ಗುರಿಯೊಂದಿಗೆ ಸಾಧನೆಗೆ ಮುಂದಾಗಬೇಕು ಎಂದು ಪ್ರೊಸೆಟ್ಟಾ ಬಯೋಕಾನ್‌ನ ಹಿರಿಯ ವಿಜ್ಞಾನಿ ಡಾ.ಧರ್ಮಪ್ರಸಾದ್ ಹೇಳಿದರು.

ತಾಲೂಕಿನ ತಾಂಡವಪುರದ ಮಹಾರಾಜ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದ ಓರಿಯಂಟೇಶನ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಪ್ರತಿ ದಿನವೂ ಸವಾಲುಗಳು ಎದುರಾಗುತ್ತವೆ. ಆ ಸವಾಲುಗಳಿಗೆ ಹೆದರಿ ಇದು ನನ್ನಿಂದ ಸಾಧ್ಯವಿಲ್ಲ ಎಂಬ ಮನೋಭಾವ ಬಿಟ್ಟು ಸಕಾರಾತ್ಮಕ ಚಿಂತನೆಗಳಿಂದ ಬೌದ್ಧಿಕವಾಗಿ ಶಕ್ತರಾಗಿ, ಯಾರ ಮೇಲೂ ಅವಲಂಬಿತರಾಗದೆ ಆಸಕ್ತಿಯಿಂದ ವ್ಯಾಸಂಗದಲ್ಲಿ ತೊಡಗಬೇಕು. ಪ್ರತಿಯೊಬ್ಬರಲ್ಲೂ ಒಂದೊಂದು ಪ್ರತಿಭೆ ಇರುತ್ತದೆ. ಆದ್ದರಿಂದ ಮುಖ್ಯವಾಗಿ ಬೇರೊಬ್ಬರ ಜೊತೆಗೆ ನಮ್ಮ ಜೀವನ ಹೋಲಿಕೆ ಮಾಡಿಕೊಳ್ಳದೆ ಶಿಸ್ತನ್ನು ರೂಢಿಸಿಕೊಂಡು ಸಾಧನೆಗೆ ಮುಂದಾಗಿ ಎಂದು ಕಿವಿಮಾತು ಹೇಳಿದರು.

ಎಂಐಟಿ ಕಾಲೇಜಿನ ಪ್ರಾಂಶುಪಾಲ ವೈ.ಟಿ.ಕೃಷ್ಣೇಗೌಡ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ತಾಂತ್ರಿಕ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಎಂಐಟಿ ಕಾಲೇಜು ಸ್ಥಾಪನೆಯಾಗಿದ್ದು, ಸಂಸ್ಥೆ ಉದ್ದೇಶ ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ನೀಡುವುದಲ್ಲದೆ ಉದ್ಯೋಗ ಕಲ್ಪಿಸಿಕೊಡುವ ಮೂಲಕ ಅವರ ಭವಿಷ್ಯ ರೂಪಿಸುವುದಾಗಿದೆ. ವಿದ್ಯಾರ್ಥಿಗಳು ಮೊಬೈಲ್ ಬಳಕೆ ಬಿಟ್ಟು ಆಸಕ್ತಿಯಿಂದ ವ್ಯಾಸಾಂಗದಲ್ಲಿ ತೊಡಗಿ ಸಾಧನೆಗೈದು ತಂದೆ ತಾಯಿಗೆ ಕೀರ್ತಿ ತನ್ನಿ ಎಂದರು.

ಕ್ರೂಸೈಬಿಲ್ಡರ್ ಸಂಸ್ಥೆ ಮುಖ್ಯಸ್ಥ ಗಿರೀಶ್ ಶಿವಣ್ಣ ಮಾತನಾಡಿದರು. ಸಮಾರಂಭದಲ್ಲಿ ಐಬಿಎಂ ಸಂಸ್ಥೆ ಎಂ.ಆರ್. ಭಾರತಿ, ಮೈಸೂರು ವಿವಿ ನಿವೃತ್ತ ಕುಲಪತಿ ಹೇಮಂತ್ ಕುಮಾರ್, ಸಂಸ್ಥೆ ಅಧ್ಯಕ್ಷ ಮುರಳಿ, ಚೇತನ್, ಬಿ.ಜಿ.ನರೇಶ್ ಕುಮಾರ್, ಡಿ.ಎಸ್.ಗುರು, ಕಾಲೇಜಿನ ಪ್ರಾಧ್ಯಾಪಕರಾದ ಡಾ.ಸಲಾಮತ್, ಪ್ರಮೋದ್, ಡಾ.ವೆಂಕಟೇಶ್ ಸೇರಿದಂತೆ ಹಲವರಿದ್ದರು.

ಚೆಸ್ ಪಂದ್ಯಾವಳಿಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ



ಮೈಸೂರಿನ ವಿಜಯ ವಿಠಲ ಶಾಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ 14 ವರ್ಷದೊಳಗಿನ ಬಾಲಕ–ಬಾಲಕಿಯರ ಚೆಸ್ ಪಂದ್ಯಾವಳಿಯಲ್ಲಿ ನಂಜನಗೂಡಿನ ಕಳಲೆಯ ಆಚಾರ್ಯ ಗುರುಕುಲ ಶಾಲೆ ವಿದ್ಯಾರ್ಥಿಗಳು ಜಯಗಳಿಸಿ, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರನ್ನು ಶಾಲಾ ಆಡಳಿತ ಮಂಡಳಿ, ಶಿಕ್ಷಕ ವರ್ಗ ಮತ್ತು ಪೋಷಕರು ಅಭಿನಂದಿಸಿದ್ದಾರೆ. ಚಿತ್ರದಲ್ಲಿ (ಬಾಲಕಿಯರು) ಎಡದಿಂದ ಪ್ರತೀಕ್ಷ, ರಾಗಿಣಿ ಆರ್., ಶೈಲಜಾ, ಮಾನ್ಯ ಎಂ. ಹಾಗೂ (ಬಾಲಕರು) ಎಡದಿಂದ ಅಕ್ಷಯ್‌ಕುಮಾರ್ ಕೆಎಸ್, ಸೃಜನ್‌ಎಂ, ತೇಜಸ್ ಬಿ, ಧನಂಜಯ ಎಸ್. ಕಾಣಬಹುದು.

ವಿಜೃಂಭಣೆಯ ಶನೇಶ್ವರಸ್ವಾಮಿ ಹೂವಿನ ಪಲ್ಲಕ್ಕಿ ಉತ್ಸವ



ಶನೇಶ್ವರಸ್ವಾಮಿಯವರ ಹೂವಿನ ಪಲ್ಲಕ್ಕಿ ಉತ್ಸವ ನಡೆಯಿತು.

ಮೂಗೂರು, ಸೆ.21– ಶನೇಶ್ವರಸ್ವಾಮಿ ಅವರ 68ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಶನಿವಾರ ಸಂಜೆ ಗ್ರಾಮದಲ್ಲಿ ಶನೇಶ್ವರ ಸ್ವಾಮಿಯವರ ಹೂವಿನ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಶನಿವಾರ ಬೆಳಗ್ಗೆ 8.30ಕ್ಕೆ ಗ್ರಾಮದ ಶ್ರೀಶನೇಶ್ವರಸ್ವಾಮಿ ದೇವಾಲಯದಿಂದ ಮಂದ್ಯದ ಬೀದಿವರೆಗೆ ಕಾಕ ವಾಹನೋತ್ಸವ ನಡೆಯಿತು. ವಾರ್ಷಿಕೋತ್ಸವ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳನ್ನು ತಳಿರು ತೋರಣ ಹಾಗೂ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ಬೆಳಗ್ಗೆಯಿಂದ ಸಂಜೆವರೆಗೂ ಗ್ರಾಮಸ್ಥರು ದೇವಾಲಯಕ್ಕೆ ತೆರಳಿ ಸ್ವಾಮಿಯವರಿಗೆ ಪೂಜೆ ಸಲ್ಲಿಸಿ ದರ್ಶನ ಪಡೆದರು. ಸಂಜೆ 6.30ಕ್ಕೆ ವಾದ್ಯಗೋಷ್ಠಿ, ಪೂಜಾ ಕುಣಿತದೊಂದಿಗೆ ಶನೇಶ್ವರಸ್ವಾಮಿ ಅವರ ಹೂವಿನ ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಿತು. ಈ ವೇಳೆ ಗ್ರಾಮಸ್ಥರು ದೇವರಿಗೆ ಪೂಜೆ ಸಲ್ಲಿಸಿದರು. ಅಲ್ಲದೇ ಭಕ್ತರು ಅನ್ನಸಂತರ್ಪಣೆ ನಡೆಸಿದರು. ಪಲ್ಲಕ್ಕಿ ಉತ್ಸವ ದೇವಾಲಯ ತಲುಪಿದ ನಂತರ ಗ್ರಾಮಸ್ಥರ ನೇತೃತ್ವದಲ್ಲಿ ಸ್ವಾಮಿಯವರಿಗೆ ಮಹಾ ಮಂಗಳಾರತಿ ನೆರವೇರಿಸಲಾಯಿತು. ದೇವಾಲಯದ ಆವರಣದಲ್ಲಿ ಭಕ್ತರಿಗೆ ಪ್ರಸಾದ ವಿನಿಯೋಗ ನಡೆಯಿತು. ಇನ್ನು ರಾತ್ರಿ 11 ಗಂಟೆಗೆ ಬದನವಾಳು ಶ್ರೀ ಶಿವಕುಮಾರ ಶಾಸ್ತ್ರಿ ವೃಂದದವರಿಂದ ರಾಜ ವಿಕ್ರಮ ಅಥವಾ ಶನಿ ಪ್ರಭಾವ ಹರಿಕಥೆ ಏರ್ಪಡಿಸಲಾಗಿತ್ತು.

ಈ ವೇಳೆ ವ್ಯವಸ್ಥಾಪಕ ಸಮಿತಿ ಸದಸ್ಯರು ಹಾಗೂ ಗ್ರಾಮದ ಮುಖಂಡರು, ಗ್ರಾಮಸ್ಥರು, ಉಪಸ್ಥಿತರಿದ್ದರು.

ಸಾಲ ಮರು ಪಾವತಿಸಿದರೆ ಮಾತ್ರ ಲಾಭ ಸಾಧ್ಯ

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ



ವಾರ್ಷಿಕ ಮಹಾಸಭೆಯಲ್ಲಿ ಪ್ರಗತಿಪರ ಸಾಲಗಾರರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಸೆ.21– ಪಡೆದ ಸಾಲವನ್ನು ರೈತರು ಸಕಾಲಕ್ಕೆ ಮರು ಪಾವತಿಸಿದರೇ ಮಾತ್ರ ಲಾಭ ಗಳಿಸಲು ಸಾಧ್ಯ ಎಂದು ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನ ಹುಂಡಿ ಎಂ.ಮಹದೇವಣ್ಣ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಿದ್ದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬ್ಯಾಂಕ್ 88 ವರ್ಷಗಳ ಸುದೀರ್ಘ ಇತಿಹಾಸ ಹೊಂದಿದ್ದು, ತಾಲೂಕಿನ ರೈತರಿಗೆ ನಿರಂತರವಾಗಿ ಸೇವೆ ನೀಡುತ್ತಾ ಬಂದಿದೆ ಎಂದರು.

ನಮ್ಮ ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಸಾಲ ವಸೂಲಿಯಲ್ಲಿ ಪ್ರಥಮ ಸ್ಥಾನ ಪಡೆದಿದ್ದು, ರಾಜ್ಯದಲ್ಲಿ 10ನೇ ಸ್ಥಾನ ಪಡೆದುಕೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

5960 ಎ ತರಗತಿ ಸದಸ್ಯರನ್ನು ಹೊಂದಿರುವ ಸಂಘ 88.04 ಲಕ್ಷ ರೂ. ಷೇರು ಬಂಡವಾಳ ಹೊಂದಿದೆ. ಪ್ರಸಕ್ತ ವರ್ಷ 235.93 ಲಕ್ಷ ರೂ. ಹೊಸ ಸಾಲ ವಿತರಿಸಲಾಗಿದೆ. ಮುಂದಿನ ವರ್ಷ 5 ಕೋಟಿ ರೂ. ಸಾಲ ಸೌಲಭ್ಯ ವಿತರಿಸುವ ಗುರಿ ಹೊಂದಲಾಗಿದೆ. ಸಂಯುಕ್ತ ಯೋಜನೆ, ರೇಷ್ಮೆ ಯೋಜನೆ, ಕೋಳಿ ಸಾಗಣಿಕೆ ಯೋಜನೆ, ವೈಯಕ್ತಿಕ ಹೈನುಗಾರಿಕೆ ಯೋಜನೆಗಳಲ್ಲಿ 10 ಲಕ್ಷದವರೆಗೆ ಶೇ.3ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಲಭ್ಯವಿದ್ದು, ರೈತರು ಯೋಜನೆ ಪ್ರಯೋಜನ ಪಡೆಯುವಂತೆ ಕರೆ ನೀಡಿದರು.

ಸಂಘದ ವ್ಯವಸ್ಥಾಪಕ ಎನ್.ಮಹೇಶ್ ಸಂಘದ ವಾರ್ಷಿಕ ವರದಿ ಮಂಡಿಸಿ ಪ್ರಸಕ್ತ ಸಾಲಿನಲ್ಲಿ ಸಂಘವು ಪ್ರಸಕ್ತ ಸಾಲಿಗೆ 95.02 ಲಕ್ಷರೂ. ನಿವ್ವಳ ಲಾಭಗಳಿಸಿದೆ ಎಂದರು.

ಈ ವೇಳೆ ಉಪಾಧ್ಯಕ್ಷ ಬಿ.ಎಂ.ಲಿಂಗರಾಜು, ನಿರ್ದೇಶಕರಾದ ಕೆ.ವಜ್ರೇಗೌಡ, ಎಂ.ಎಸ್.ಶಿವಮೂರ್ತಿ, ಬಿ.ಸಿ.ಪಾರ್ಥಸಾರಥಿ, ಎನ್.ಎನ್.ಮಹದೇವಸ್ವಾಮಿ, ಟಿ.ಎಸ್.ಸಿದ್ದರಾಜು, ಎನ್.ಲಿಂಗಪ್ಪಾಜಿ, ಎಂ.ನಾಗರತ್ನ, ಗಂಗಮ್ಮ, ಎಂ.ಮಲ್ಲಿಕಾರ್ಜುನಸ್ವಾಮಿ, ವಿರೂಪಾಕ್ಷ, ಪ್ರೇಮ್ ಕುಮಾರ್, ಸುಂದರ್, ಸಂಘದ ಪ್ರಭಾರ ಲೆಕ್ಕಿಗ ಪ್ರಭುಸ್ವಾಮಿ, ಬೆರಳಚ್ಚುಗಾತಿ ಟಿ.ಎಂ.ನಾಗರತ್ನಬಾಯಿ, ತನುಜ, ಬಿ.ಶಂಕರ ಸೇರಿದಂತೆ ಷೇರುದಾರರು, ಸದಸ್ಯರು ಮತ್ತಿತರಿದ್ದರು.

ನಾಳೆ ವಾರ್ಷಿಕ ಮಹಾಸಭೆ

ಸರಗೂರು, ಸೆ.21– ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಅಧ್ಯಕ್ಷ ನಾಗರಾಜರಾಮ್ ಅಧ್ಯಕ್ಷತೆಯಲ್ಲಿ ಸೆ.23ರಂದು ಬೆಳಗ್ಗೆ 11 ಗಂಟೆಗೆ ಸಂಘದ ಆವರಣದಲ್ಲಿ ನಡೆಯಲಿದ್ದು, ಸದಸ್ಯರು ತಪ್ಪದೇ ಹಾಜರಾಗುವಂತೆ ಸಿಇಓ ಪಿ.ಮಹದೇವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುರ ಪಿಎಸಿಎಸ್‌ಗೆ 6.31 ಲಕ್ಷ ನಿವ್ವಳ ಲಾಭ



ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರು ಮಾತನಾಡಿದರು

ಮಲ್ಕುಂಡಿ, ಸೆ.21– ರೈತರು ಮತ್ತು ಷೇರುದಾರರು ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಿದರೆ ಸಂಘದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರು ತಿಳಿಸಿದರು.

ಇಲ್ಲಿಗೆ ಸಮೀಪದ ಹುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘದಲ್ಲಿ ಈಗಾಗಲೇ ರೈತರಿಗೆ ಮತ್ತು ಷೇರುದಾರರಿಗೆ ಸಾಲ ವಿತರಿಸಲಾಗಿದೆ. ಹೀಗಾಗಿ ಪಡೆದ ಸಾಲವನ್ನು ಅವಧಿಯೊಳಗೆ ಮರು ಪಾವತಿಸಿದರೇ ಸಂಘದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದ ಅವರು ಪ್ರಸಕ್ತ ಸಾಲಿನಲ್ಲಿ ಸಹಕಾರ ಸಂಘ 6.31 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಇನ್ನೂ ಹೆಚ್ಚಿನ ಲಾಭ ಗಳಿಸಲು ಸದಸ್ಯರು ಸಹಕರಿಸಬೇಕು ಎಂದರು.

ಸಂಘದ ಉಪಾಧ್ಯಕ್ಷ ಎಂ.ಪುಟ್ಟಸ್ವಾಮಿ ಮಾತನಾಡಿದರು. ಅಧ್ಯಕ್ಷ ಸಣ್ಣಮಾದಪ್ಪ, ನಿರ್ದೇಶಕರಾದ ಶಿವಕುಮಾರ್, ಗುರುಮಲ್ಲಪ್ಪ, ಪಿಣ್ಣಪ್ಪ, ಮಹದೇವ ನಾಯಕ, ತ್ಯಾಗರಾಜು, ಸಿಇಓ ಹೆಚ್.ಎಸ್. ನಾಗರಾಜಮೂರ್ತಿ, ಗುಮಾಸ್ತ ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ಶೇ.28ರಷ್ಟು ವಿದ್ಯಾರ್ಥಿಗಳಿಂದ ಮಾತ್ರ ಸ್ನಾತಕೋತ್ತರ ಪದವಿ

ಮೈಸೂರು ಮಾನಸ ಗಂಗೋತ್ರಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ನಮಿತಾ ತಿಮ್ಮಯ್ಯ



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹೆಚ್.ಡಿ.ಕೋಟೆ, ಸೆ.21– ದೇಶದಲ್ಲಿ ಶೇ.28ರಷ್ಟು ವಿದ್ಯಾರ್ಥಿಗಳು ಮಾತ್ರ ಸ್ನಾತಕೋತ್ತರ ಪದವಿ ಪಡೆಯುತ್ತಿದ್ದಾರೆ ಎಂದು ಮೈಸೂರು ಮಾನಸ ಗಂಗೋತ್ರಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ನಮಿತಾ ತಿಮ್ಮಯ್ಯ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಿಂದ ನಡೆದ ಹಿರಿಯ ವಿದ್ಯಾರ್ಥಿಗಳಿಂದ ನೂತನ ವಿದ್ಯಾರ್ಥಿಗಳ ಸ್ವಾಗತ ಮತ್ತು ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ, ಎನ್‌ಎಸ್‌ಎಸ್ ಕಾರ್ಯ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಪಿಯುಸಿ ಮುಗಿದ ಬಳಿಕ ಪದವಿ ತರಗತಿಗಳಿಗೆ ಸೇರಲು ವಿದ್ಯಾರ್ಥಿಗಳು ಹಿಂದೇಟು ಹಾಕುತ್ತಿದ್ದಾರೆ. ಕೆಲವರಿಗೆ ಓದಿನ ಕಡೆ ಗಮನ ಇಲ್ಲದಿರುವುದು, ಆಸಕ್ತಿ ಇಲ್ಲದಿರುವುದು ಒಂದು ಕಾರಣವಾದರೆ, ಮತ್ತೊಂದೆಡೆ ಪೋಷಕರು ಓದಿಸುವ ಶಕ್ತಿ ಇಲ್ಲವೆಂದು ಉದ್ಯೋಗದತ್ತ ಒತ್ತಡ ಹೇರುತ್ತಿದ್ದಾರೆ ಎಂದರು.

ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಜೆ.ಎನ್.ವೆಂಕಟೇಶ್ ಮಾತನಾಡಿ, ಆದಿಚುಂಚನಗಿರಿ ಕಾಲೇಜಿಗೆ ಆರಂಭದ ದಿನಗಳಲ್ಲಿ 30 ಮಂದಿ ದಾಖಲಾಗಿದ್ದರು. ಪ್ರಸ್ತುತ 700ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ದಾಖಲಾಗಿದ್ದು, ಜಿಲ್ಲೆಯಲ್ಲಿ ಕಾಲೇಜು ಹಲವು ವಿಭಾಗಗಳಲ್ಲಿ ಮುಂಚೂಣಿಯಲ್ಲಿದೆ ಎಂದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ ವಿದ್ಯೆ ಯಾರ ಸ್ವತ್ತಲ್ಲ, ಆಸಕ್ತಿ ಇದ್ದಲ್ಲಿ ಎಲ್ಲರಿಗೂ ಸಹ ಒಲಿಯುತ್ತದೆ. ವಿದ್ಯೆಯಿಂದ ಸಮಾಜದಲ್ಲಿ ಮಾನ್ಯತೆ, ಗೌರವ ದೊರೆಯುತ್ತದೆ ಎಂದರು.

ಕಾಲೇಜಿನ ಆಡಳಿತಾಧಿಕಾರಿ ಪ್ರೊ.ಕೆ.ಪಿ. ಬಸವೇಗೌಡ ಮಾತನಾಡಿದರು. ಇದೇ ವೇಳೆ ಹೆಚ್ಚು ಅಂಕ ಪಡೆದ, ಕ್ರೀಡಾ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ಮಹಾರಾಜ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಚಂದ್ರೇಗೌಡ, ಸೆನಟ್ ಮಾಜಿ ಸದಸ್ಯ ಕೃಷ್ಣೇಗೌಡ, ಎನ್‌ಎಸ್‌ಎಸ್ ಸಲಹಾ ಸಮಿತಿ ಸದಸ್ಯ ಎ.ಜೆ.ಕಾಳೇಗೌಡ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಮೈನಾ, ಶ್ರೀನಿವಾಸ್, ಸಂತೋಷ್, ರಾಜೇಂದ್ರ, ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್ ಗೌಡ, ಕಾಲೇಜಿನ ಸಿಬ್ಬಂದಿಗಳಾದ ಭೈರೇಗೌಡ, ರಾಜೇಶ್, ರಾಮಚಂದ್ರ, ಸಿದ್ದೇಗೌಡ, ರವೀಶ್, ಚನ್ನಕೇಶವ ನಾಯಕ, ಚಿತ್ರ, ಪ್ರೀತಿ, ಚಂದನ, ಶಾಂಭವಿ, ಚಿಕ್ಕದೇವಿ, ರವಿ, ಸಂಗೀತ ಇದ್ದರು.

ಪಕ್ಷಿರಾಜಪುರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



ಪಕ್ಷಿರಾಜಪುರದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಚಾಲನೆ ನೀಡಿದರು.

ಹುಣಸೂರು, ಸೆ.21– ತಾಲೂಕಿನ ಪಕ್ಷಿರಾಜಪುರದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಚಾಲನೆ ನೀಡಿದರು.

ಗ್ರಾಮದ ಮನೆ ಮನೆಗೆ ತೆರಳಿ ಪಕ್ಷಕ್ಕೆ ಸದಸ್ಯರನ್ನು ನೋಂದಣಿ ಮಾಡಿಕೊಂಡು ಮಾತಾಡಿದ ಅವರು, ಪ್ರಧಾನಿ ಮೋದಿ ಅವರು ಮುದ್ರಾ ಯೋಜನೆ, ಉಜ್ವಲ ಯೋಜನೆ, ಸುರಕ್ಷಾ ಭೀಮಾ ಯೋಜನೆ, ಪಿಎಂಕಿಸಾನ್ ಯೋಜನೆ ಸೇರಿದಂತೆ ಅನೇಕ ಯೋಜನೆಗಳನ್ನು ದೇಶದ ಮನೆ ಮನೆಗೆ ತಲುಪುವಂತೆ ಮಾಡಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಗ್ರಾಮೀಣ ಭಾಗದ ಪ್ರತಿ ಮನೆಗೂ ಕೂಡ ಜಲಜೀವನ್ ಮಿಷನ್ ಯೋಜನೆ ಮೂಲಕ ಮನೆ ಮನೆಗೂ ನಲ್ಲಿಗಳನ್ನು ಅಳವಡಿಸುವ ಮೂಲಕ ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಮೋದಿ ಅವರ ಯೋಜನೆಗಳು ಅತ್ಯುತ್ತಮವಾಗಿದ್ದು, ಭಾರತ ವಿಶ್ವಗುರು ಪರಿಕಲ್ಪನೆಗೆ ಸರಿಸಾಟಿಯಾಗಿವೆ ಎಂದರು.

ಹುಣಸೂರು ಮಂಡಲ ಅಧ್ಯಕ್ಷ ಕಾಂತರಾಜು ಮಾತನಾಡಿ, ಪ್ರಧಾನಿ ಮೋದಿ ಅವರು ಅನೇಕ ಅಭಿವೃದ್ಧಿ ಯೋಜನೆಗಳನ್ನು ದೇಶದ ಜನತೆಗೆ ನೀಡಿದ್ದು, ವಿಕಸಿತ ಭಾರತಕ್ಕೆ ಮುನ್ನುಡಿಯಾಗಲಿದೆ. ನಾವು ದೇಶದ ನಾಗರಿಕರಾಗಿರುವುದು ಹೆಮ್ಮೆಯ ವಿಚಾರ. ಅಲ್ಲದೇ ಮೋದಿ ಅವರಂತಹ ಉತ್ತಮ ನಾಯಕತ್ವವುಳ್ಳ ವ್ಯಕ್ತಿ ದೇಶದ ಪ್ರಧಾನಿಯಾಗಿರುವುದು ನಮ್ಮೆಲ್ಲರ ಸೌಭಾಗ್ಯ ಎಂದ ಅವರು, ಹುಣಸೂರು ಕ್ಷೇತ್ರದಲ್ಲಿ ಸದಸ್ಯತ್ವ ಅಭಿಯಾನ ಈಗಾಗಲೇ ಆರಂಭವಾಗಿದ್ದು, ನಮ್ಮ ತಾಲೂಕಿನಲ್ಲಿ ಹೆಚ್ಚು ಸದಸ್ಯರನ್ನು ನೋಂದಾಯಿಸಲಾಗುವುದು ಎಂದರು.

ಈ ವೇಳೆ ಕ್ಷೇತ್ರ ಅಧ್ಯಕ್ಷ ಕಾಂತರಾಜು, ಬಿಜೆಪಿ ಮುಖಂಡರಾದ ಮಂಜುನಾಥ್, ರೈತ ಮೋರ್ಚಾ ಸದಸ್ಯರಾದ ನೀಮ್, ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಮ್ಮ, ಗ್ರಾಪಂ ಅಧ್ಯಕ್ಷ ನಂಜುಂಡಸ್ವಾಮಿ, ಪಕ್ಷಿರಾಜಪುರದ ಪ್ರಮುಖರು ಹಾಗೂ ತಾಲೂಕಿನ ಬಿಜೆಪಿ ಮುಖಂಡರು ಇದ್ದರು.

ಮೈಸೂರಲ್ಲಿ ಪತ್ರಿಕಾ ದಿನಾಚರಣೆ

ಸುಳ್ಳು ಸುದ್ದಿಗಳಿಂದ ಸಮಾಜದ ಸಾಮರಸ್ಯ ಹಾಳು

● ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ● ಫೇಕ್ ನ್ಯೂಸ್ ಸೃಷ್ಟಿಕರ್ತರಿಗೆ ಕಠಿಣ ಶಿಕ್ಷೆ




ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದರು. ಮತ್ತೊಂದು ಚಿತ್ರದಲ್ಲಿ ವಿವಿಧ ಪ್ರಶಸ್ತಿಗೆ ಭಾಜನರಾದ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಿರುವುದನ್ನು ಕಾಣಬಹುದು

ಮೈಸೂರು, ಸೆ.21(ಎಂಟಿವೈ)– ಸುಳ್ಳು ಸುದ್ದಿಗಳಿಗೆ ಬ್ರೇಕ್ ಹಾಕದಿದ್ದರೆ ಸಮಾಜದಲ್ಲಿ ಸಾಮರಸ್ಯ ಹಾಳಾಗುವುದರೊಂದಿಗೆ ಪ್ರತಿಯೊಬ್ಬರ ನೆಮ್ಮದಿಗೂ ಧಕ್ಕೆಯುಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ, ಹಿರಿಯ ಪತ್ರಕರ್ತರಿಗೆ ಅಭಿನಂದನೆ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದ್ದಂತೆಯೇ ಸುಳ್ಳು ಸುದ್ದಿಗಳು ವೇಗವಾಗಿ ಹಬ್ಬುತ್ತಿವೆ. ಸುಳ್ಳು ಸುದ್ದಿಗಳಿಂದ ಸಮಾಜಕ್ಕೆ ಯಾವುದೇ ಉಪಯೋಗವಿಲ್ಲ. ಅದರಿಂದ ಯಾರೊಬ್ಬರೂ ನೆಮ್ಮದಿಯಾಗಿ ಬದುಕಲು ಸಾಧ್ಯವಾಗುವುದಿಲ್ಲ. ವೇಗವಾಗಿ ಹರಡುತ್ತಿರುವ ಫೇಕ್ ನ್ಯೂಸ್‌ಗೆ ಕಡಿ ಹಾಕದೇ ಇದ್ದರೆ ಪ್ರಜಾಪ್ರಭುತ್ವ ಸಂವಿಧಾನದ ಮೌಲ್ಯಗಳು ಉಳಿಯುವುದು ಕಷ್ಟವಾಗಲಿದೆ. ಕುವೆಂಪು ಅವರು ಹೇಳಿದ ಶಾಂತಿಯ ತೋಟ ಆಗೋದು ಕಷ್ಟವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಸುಳ್ಳು ಸುದ್ದಿಯನ್ನು ಸೃಷ್ಟಿಸಿ, ಪ್ರಕಟಿಸುವುದರಿಂದ ಧಾರ್ಮಿಕ, ಸಾಮಾಜಿಕ ಘರ್ಷಣೆಗಳು ಉಂಟಾಗಿ ನಮ್ಮ ಜೊತೆಯಲ್ಲಿರುವವರಿಗೆ ತೊಂದರೆಯಾಗಲಿದೆ. ಸುಳ್ಳು ಸುದ್ದಿ ಮಾಡುವುದು ಯಾರಿಗೂ ಶೋಭೆ ತರುವುದಿಲ್ಲ. ಇದನ್ನು ತಡೆಗಟ್ಟುವ ಕೆಲಸವನ್ನು ನಾವೆಲ್ಲರೂ ಮಾಡಬೇಕು. ಇದು ಎಲ್ಲರ ಜವಾಬ್ದಾರಿಯಾಗಿದೆ. ಇಂದು ಎಲ್ಲರೂ ಪತ್ರಕರ್ತರಾಗಿದ್ದಾರೆ. ಪತ್ರಕರ್ತರಲ್ಲದ ಕೆಲವರು ಸುಳ್ಳು ಸುದ್ದಿ ಹಬ್ಬಿಸುತ್ತಾರೆ. ಪತ್ರಿಕಾ ರಂಗ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಕೆಲಸ ಮಾಡುತ್ತಿದೆ. ಪತ್ರಿಕಾ ರಂಗಕ್ಕೆ ಅಪಾಯ ಬಂದರೆ ಪ್ರಜಾಪ್ರಭುತ್ವಕ್ಕೆ ಅಪಾಯ ಉಂಟಾಗುತ್ತದೆ. ಹಾಗಾಗಿ ಪತ್ರಿಕಾ ರಂಗಕ್ಕೆ ಯಾವುದೇ ನಿರ್ಬಂಧ ಹೇರಬಾರದು. ಅದಕ್ಕೆ ಸ್ವತಂತ್ರವಾಗಿ ಕೆಲಸ ಮಾಡಲು ಬಿಡಬೇಕು. ಇದನ್ನೇ ಎಲ್ಲರೂ ಹೇಳಿದ್ದಾರೆ. ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ನಮಗೆ ನಮ್ಮ ಸಂವಿಧಾನ ನೀಡಿರುವ ಅತ್ಯುನ್ನತ ಮೌಲ್ಯಗಳಾಗಿವೆ. ಸಂವಿಧಾನದ ನಾಲ್ಕು ಅಂಗಗಳಿಗೆ ಅಪಾಯ ಬಂದರೆ ಸಮಾಜಕ್ಕೆ ಅಪಾಯ ಬಂದಂತೆ ಎಂದರು.

ನನ್ನ ವಿರುದ್ಧವೂ ಸುಳ್ಳು ಸುದ್ದಿ: ಸುಳ್ಳು ಸುದ್ದಿಗಳ ಅನಾಹುತಗಳಿಗೆ ತಮ್ಮನ್ನೇ ಉದಾಹರಿಸಿ ಮಾತನಾಡಿದ ಮುಖ್ಯಮಂತ್ರಿಗಳು, ನಾನು ಸದನದಲ್ಲಿ ಮಾತನಾಡುವಾಗ ಹಿಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಆಡಿದ ಮಾತನ್ನು ಉದಾಹರಿಸಿದ್ದೆ. 'ಸಾಲ ಮನ್ನಾ ಮಾಡೋದಕ್ಕೆ ನಮ್ಮ ಬಳಿ ಪ್ರಿಂಟಿಂಗ್ ಮೆಷಿನ್ ಇದೆಯಾ' ಎಂದು ಯಡಿಯೂರಪ್ಪ ಅವರು ಸದನದಲ್ಲೇ ಹೇಳಿದ್ದರು. ಈ ಮಾತನ್ನು ನಾನು ಉದಾಹರಿಸಿದ್ದೆ. ಆದರೆ ಸಾಮಾಜಿಕ ಜಾಲ ತಾಣಗಳಲ್ಲಿ ನಾನೇ ಆ ಮಾತು ಹೇಳಿದ್ದಾಗಿ ನಕಲಿ ಸುದ್ದಿ ಸೃಷ್ಟಿಸಲಾಯಿತು. ಜತೆಗೆ ಗ್ಯಾರಂಟಿ ಯೋಜನೆಗಳ ಜಾರಿ ವಿಚಾರದಲ್ಲೂ ಅದನ್ನೇ ಸೇರಿಸಿ ತಪ್ಪು ಸಂದೇಶ ಹರಡಿದರು. ಇದರಿಂದ ನಷ್ಟ ಆಗಿದ್ದು ಸಮಾಜಕ್ಕೇ ಹೊರತು ನನಗಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಫೇಕ್ ನ್ಯೂಸ್ ಸೃಷ್ಟಿಕರ್ತರಿಗೆ ಕಠಿಣ ಶಿಕ್ಷೆ: ಫೇಕ್ ನ್ಯೂಸ್ ಸೃಷ್ಟಿಕರ್ತರಿಗೆ ಕಠಿಣ ಶಿಕ್ಷೆ ಕೊಡಿಸುವ ನಿಟ್ಟಿನಲ್ಲಿ ನಾವು ಕಾನೂನು ಮಾಡಿದ್ದೇವೆ. ಆದರೆ, ಕೇವಲ ಕಾನೂನಿನಿಂದ ಮಾತ್ರ ಬ್ರೇಕ್ ನ್ಯೂಸ್ ತಡೆಯಲು ಸಾಧ್ಯವಿಲ್ಲ. ಇಡೀ ಸಮಾಜ ಇದರ ವಿರುದ್ಧ ಧ್ವನಿ ಎತ್ತಿದರೆ ಮಾತ್ರ ಸುಳ್ಳು ಸುದ್ದಿ ತಡೆಯಲು ಸಾಧ್ಯ. ಜನರಿಗೆ ಸತ್ಯ ಹೇಳುವ ಕೆಲಸವನ್ನು ಪತ್ರಿಕೆಗಳು ಮಾಡಬೇಕು. ಆದರೆ, ಇತ್ತೀಚೆಗೆ ಸುಳ್ಳು ಸುದ್ದಿ ಸೃಷ್ಟಿಸಿ ಮತ್ತೊಬ್ಬರನ್ನು ತೇಜೋವಧೆ ಮಾಡುವ ಕೆಲಸ ಹೆಚ್ಚಾಗುತ್ತಿದೆ. ಹಾಗಾಗಿ ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕುವ ಕೆಲಸ ಆಗಬೇಕಿದೆ. ಅದಕ್ಕಾಗಿ ಸುದ್ದಿಗಳನ್ನು ಫ್ಯಾಕ್ಟ್ ಚೆಕ್ ಮಾಡಲು ಸರ್ಕಾರ ಮುಂದಾಗಿದೆ. ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ತಂಡ ಸುಳ್ಳು ಸುದ್ದಿಯ ಫ್ಯಾಕ್ಟ್ ಚೆಕ್ ಮಾಡಲಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದು 78 ವರ್ಷಗಳಾಗಿದೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದ ಹಲವರು ಪತ್ರಿಕಾ ರಂಗದದಲ್ಲಿ ದುಡಿದಿದ್ದರು. ಪತ್ರಕರ್ತರಿಲ್ಲದೆ ಯಾವುದೇ ಸರ್ಕಾರ ನಡೆಯಲ್ಲ ಎಂದು ಥಾಮಸ್ ಜೆಫರ್‌ಸನ್ ಹೇಳಿದ್ದಾರೆ. ಗಾಂಧೀಜಿ ಅವರು ಪತ್ರಿಕಾರಂಗದ ಕುರಿತು ವಾಕ್ ಸ್ವಾತಂತ್ರ್ಯ ಅಂತ ಹೇಳಿದ್ದಾರೆ. ಆದರೆ, ಇತ್ತೀಚೆಗೆ ಸುದ್ದಿ ಮಾಧ್ಯಮಗಳು ಅನಗತ್ಯ ವಿಚಾರಗಳನ್ನಷ್ಟೇ ವರದಿ ಮಾಡುತ್ತಿವೆ. ಇದು ಬೇಸರ ಸಂಗತಿ. ಮಾಧ್ಯಮಗಳು ವಸ್ತುನಿಷ್ಠ, ಪ್ರಸ್ತುತ ಬೆಳವಣಿಗೆ ಬಗ್ಗೆ ಮಾಹಿತಿ ತಿಳಿಸುವಂತಹ ಕೆಲಸ ಮಾಡಬೇಕು ಎಂದರು.

ಸಾಂಸ್ಕೃತಿಕ ಹಿನ್ನೆಲೆ ಇರದ ವ್ಯಕ್ತಿಗಳು ಸಿದ್ದರಾಮಯ್ಯರನ್ನು ಟೀಕೆ ಮಾಡುವ ಕೆಲಸ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವ ಉಳಿಯಬೇಕಾದರೆ ಪತ್ರಿಕೋದ್ಯಮ ಮತ್ತು ಮತದಾರರಿಂದ ಮಾತ್ರ ಸಾಧ್ಯ. ಸಂಸ್ಕೃತಿಯ ತಳಹದಿಯ ಮೇಲೆ ಧರ್ಮ ಇದೆ. ಧರ್ಮದ ತಳಹದಿಯಲ್ಲಿ ಸಂಸ್ಕೃತಿ ಇಲ್ಲ. ಇದನ್ನು ನಾವು ಜನರಿಗೆ ತಿಳಿಸಬೇಕಿದೆ. ಇಲ್ಲವಾದಲ್ಲಿ ಸಂವಿಧಾನದ ಆಶಯ ಬುಡಮೇಲಾಗುತ್ತದೆ ಎಂದು ಹೇಳಿದರು.

ಅಭಿನಂದಿತರು ಮತ್ತು ಪ್ರಶಸ್ತಿ ವಿಜೇತರು: ಪ್ರಸಕ್ತ ಸಾಲಿನ ಹಿರಿಯ ನಗರ ಪತ್ರಕರ್ತ 'ದಿನತಂತಿ' ಪತ್ರಿಕೆಯ ಹಿರಿಯ ವರದಿಗಾರ ಎಂ.ಎನ್. ಕಿರಣ್ ಕುಮಾರ್, ಗ್ರಾಮಾಂತರ ಹಿರಿಯ ಪತ್ರಕರ್ತ ಪ್ರಜಾವಾಣಿ ದಿನಪತ್ರಿಕೆಯ ಯಶವಂತ ಸಾಲಿಗ್ರಾಮ, ಹಿರಿಯ ಸುದ್ದಿ ಸಂಪಾದಕ ಕೆ.ಎನ್. ನಾಗಸುಂದ್ರಪ್ಪ (ವರ್ತಮಾನ ದಿನಪತ್ರಿಕೆ), ಹಿರಿಯ ಛಾಯಾಗ್ರಾಹಕ ಶ್ರೀರಾಮ್ (ದಿ. ಹಿಂದು), ದೃಶ್ಯ ಮಾಧ್ಯಮದಿಂದ ಮಹೇಶ್ ಶ್ರವಣ ಬೆಳಗೊಳ (ಈ ಟಿವಿ ಭಾರತ್) ದೃಶ್ಯ ಮಾಧ್ಯಮ ಹಿರಿಯ ವಿಡಿಯೋ ಗ್ರಾಫರ್ ನಾಗೇಶ್. ಎಸ್ (ವಿಸ್ತಾರ ಟಿವಿ) ಅವರನ್ನು ಇದೇ ವೇಳೆ ಅಭಿನಂದಿಸಲಾಗುವುದು.

ಈ ಸಾಲಿನ ಉತ್ತಮ ಕನ್ನಡ ವರದಿಗೆ ಹೆಚ್.ಎಸ್ ಸಚಿತ್(ಪ್ರಜಾವಾಣಿ) ಇಂಗ್ಲೀಷ್ ವರದಿಗೆ ಶಿಲ್ಪಾಪಿ(ಡೆಕ್ಕನ್ ಹೆರಾಲ್ಡ್), ಉತ್ತಮ ಫೋಟೋಗ್ರಾಫಿಗೆ ಉದಯ್ ಶಂಕರ್. ಎಸ್(ಇಂಡಿಯನ್ ಎಕ್ಸ್‌ಪ್ರೆಸ್) ವಿದ್ಯುನ್ಮಾನ ಮಾಧ್ಯಮದ ವರದಿ ಪ್ರಶಸ್ತಿಗಳಿಗೆ ಜಯಂತ್ ಮತ್ತು ರಾಮು (ದೂರದರ್ಶನ) ಅವರಿಗೆ ಗಣ್ಯರು ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್, ಶಾಸಕರಾದ ತನ್ವೀರ್ ಸೇಠ್, ಡಿ. ರವಿಶಂಕರ್, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಹಿರಿಯ ಪತ್ರಕರ್ತರಾದ ರವೀಂದ್ರ ಭಟ್ ಐನಕೈ, ಎಸ್.ರವಿ ಕುಮಾರ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆದೀಪ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಜೆಎಸ್‌ಎಸ್ ಸಂಸ್ಥೆಯ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್ ಇದ್ದರು.

ಹಾಸನದಲ್ಲಿ ಹೃದಯಾಘಾತದಿಂದ 11 ವರ್ಷದ ಬಾಲಕ ಸಾವು!



ಹಾಸನ: 11 ವರ್ಷದ ಬಾಲಕ ಹೃದಯಘಾತದಿಂದ ಮೃತಪಟ್ಟ ಘಟನೆ ಹಾಸನ ಜಿಲ್ಲೆಯ ಆಲೂರು ತಾಲೂಕಿನ ಚನ್ನಾಪುರ ಗ್ರಾಮದಲ್ಲಿ ನಡೆದಿದೆ. ಮೃತಪಟ್ಟ ಬಾಲಕನನ್ನು ಸಚಿನ್ ಎಂದು ಗುರುತಿಸಲಾಗಿದೆ. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂಟನೇ ತರಗತಿ ಓದುತ್ತಿದ್ದ ಸಚಿನ್, ಮನೆಯಲ್ಲಿ ಟಿವಿ ನೋಡುತ್ತಿದ್ದ ವೇಳೆ ಹೃದಯಾಘಾತವಾಗಿದೆ. ಇದ್ದಲ್ಲಿಯೇ ಸಚಿನ್ ಕೊನೆಯುಸಿರೆಳೆದಿದ್ದಾರೆ. ಇದ್ದಕ್ಕಿದ್ದಂತೆ ಎದೆ ನೋವು ಕಾಣಿಸಿಕೊಂಡು, ಟಿವಿ ನೋಡುತ್ತಲೇ ಕುಸಿದು ಬಿದ್ದ ಮಗನನ್ನು ಮಾತನಾಡಿಸಲು ಮನೆಯವರು ಪ್ರಯತ್ನಿಸಿದ್ದು, ಏನು ಮಾತನಾಡದೆ ಇರೋದನ್ನು ಗಮನಿಸಿ ಪೋಷಕರು ಕೂಡಲೇ ಆಸ್ಪತ್ರೆಗೆ ದಾಖಲಿಸುವ ಕೆಲಸ ಮಾಡಿದ್ದಾರೆ. ಆದರೆ ಆಲೂರು ಸರ್ಕಾರಿ ಆಸ್ಪತ್ರೆಗೆ ಕರೆತರುವ ಮುನ್ನವೇ ಬಾಲಕ ಸಾವನ್ನಪ್ಪಿದ್ದ ಎಂದು ವೈದ್ಯರು ಪೋಷಕರು ತಿಳಿಸಿದ್ದಾರೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ಜಿಲ್ಲಾ ಪದಾಧಿಕಾರಿಗಳ ಪದಗ್ರಹಣ

ಮೈಸೂರು, ಸೆ.21(ಎಂಕೆ)– ಮೈಸೂರಿನ ಗನ್ ಹೌಸ್ ಸಮೀಪದಲ್ಲಿರುವ ಶ್ರೀ ಬಸವೇಶ್ವರ ಪುತ್ಥಳಿ ಆವರಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಮಹಾಸಭಾ ನೂತನ ಜಿಲ್ಲಾಧ್ಯಕ್ಷ ಹೆಚ್. ವಿ.ಬಸವರಾಜು ಹಿನಕಲ್ ನೇತೃತ್ವದಲ್ಲಿ ಸದಸ್ಯರಾಗಿ ದಕ್ಷಿಣಮೂರ್ತಿ, ಕೆ.ನಾಗರಾಜು, ಬಿ.ವಿ.ಬಸವರಾಜು, ಕೆ.ಶಿವಕುಮಾರ್, ಎಲ್.ಪಿ.ಧರ್ಮ ಮಂಜುನಾಥ್, ಪಿ.ಶೇಖರ್, ಎಂ.ಎಸ್. ರೇಚಣ್ಣ, ಡಾ.ಎಂ.ಎಂ.ಮಹದೇವಪ್ಪ, ಎಂ.ಬಸವರಾಜು, ಎನ್.ಜಿ. ಗಿರೀಶ್, ಕೆ.ಎಂ.ಮಾದಪ್ಪ, ಕೆ.ಗಿರಿಕುಮಾರ್, ಎಂ.ಷಡಕ್ಷರಿ, ಎಸ್.ಗಿರೀಶ್, ಬಿ.ಎಂ. ಪರಮೇಶ್, ಎ.ಪಿ.ವಿರೂಪಾಕ್ಷ, ಎಂ.ಚಂದ್ರಶೇಖರ್, ಜಿ.ಎಂ.ಮಹೇಶ್, ಕೆ.ಎಂ.ನಟರಾಜ್, ಸಿ.ಆರ್.ನಟರಾಜ್, ಮಹಿಳಾ ಸದಸ್ಯರಾಗಿ ಎಂ.ದಾಕ್ಷಾಯಿಣಿ, ಎಸ್.ಎಂ.ದಾಕ್ಷಾಯಿಣಿ ಲಿಂಗರಾಜು, ರೂಪ ಸತೀಶ್, ಎಂ.ಬಿ. ರಾಜೇಶ್ವರಿ ಮಹೇಶ್, ಎನ್.ಬಿ. ಭಾಗ್ಯ, ಹೆಚ್.ಎನ್. ಸರ್ವಮಂಗಳ, ನಾಗಜ್ಯೋತಿ, ಕೇಂದ್ರ ಸಮಿತಿ ಸದಸ್ಯರಾಗಿ ಕೆಕೆಕುಂಡೇಶ್ ಹಾಗೂ ರಾಜ್ಯ ಸಮಿತಿ ಸದಸ್ಯರಾಗಿ ಹೆಚ್.ಕೆ. ಚನ್ನಪ್ಪ ಪ್ರಮಾಣ ವಚನ ಸ್ವೀಕರಿಸಿದರು.

ಬಳಿಕ ಮಾತನಾಡಿದ ಜಿಲ್ಲಾಧ್ಯಕ್ಷ ಹೆಚ್.ವಿ. ಬಸವರಾಜು ಹಿನಕಲ್, ಮುಂದಿನ ಐದು ವರ್ಷಗಳಲ್ಲಿ ಬಸವ ಭವನ ನಿರ್ಮಾಣ ಹಾಗೂ ಮೈಸೂರು ಜಿಲ್ಲೆಯಲ್ಲಿ 50 ಸಾವಿರಕ್ಕೂ ಹೆಚ್ಚು ಜನರಿಗೆ ಸದಸ್ಯತ್ವ ನೀಡುವ ಗುರಿಯನ್ನು ಹೊಂದಿದ್ದೇವೆ. ವೀರಶೈವ ಲಿಂಗಾಯತ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುವುದು. ಬಸವೇಶ್ವರರ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಸಂಘಟನೆ ಚುರುಕುಗೊಳಿಸಿ ವೀರಶೈವ ಲಿಂಗಾಯತ ಸಮುದಾಯದ ಜನರ ಸೇವೆ ಮಾಡಲು ಬದ್ಧರಾಗಿದ್ದೇವೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರ ಸಹಕಾರ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ನಾಮ ನಿರ್ದೇಶಿತ ಸದಸ್ಯರಾದ ಚಿಕ್ಕಳ್ಳಿ ಕುಮಾರ್, ದೇವಲಾಪುರ ನಾಗರಾಜ್, ಬ್ಯಾತಹಳ್ಳಿ ಶಿವಣ್ಣ, ಮೈಸೂರು ತಾಲೂಕು ಅಧ್ಯಕ್ಷ ಬಿ.ಕೆ.ನಾಗರಾಜು, ಸಿ.ಗುರುಸ್ವಾಮಿ, ಪ್ರಧಾನ ಕಾರ್ಯದರ್ಶಿ ಕಾವಿ ಬಸಪ್ಪ ಮುಖಂಡರಾದ ಟಿ.ಎಸ್. ಲೋಕೇಶ್, ದಾರಿಪುರ ಡಿ.ಚಂದ್ರಶೇಖರ್, ಡಿ.ಎ.ಮಹದೇವಸ್ವಾಮಿ, ನಂ.ಸಿದ್ದಪ್ಪ ಕೆಆರ್ ಬ್ಯಾಂಕ್ ಅಧ್ಯಕ್ಷ ಪ್ರತಿಷ್ಠಾ ಪ್ರಸಾದ್, ನಗರಪಾಲಿಕೆ ಮಾಜಿ ಸದಸ್ಯ ಎಸ್.ಆರ್.ಶಿವಕುಮಾರ್, ಕಂಚ ಮಳ್ಳಿ ಮಹೇಶ್(ರೆಡ್ಡಿ) ಮತ್ತಿತರರಿದ್ದರು.



ಗನ್ ಹೌಸ್ ಸಮೀಪದ ಬಸವೇಶ್ವರ ಪುತ್ಥಳಿ ಆವರಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಶಿವರಾತ್ರಿ ರಾಜೇಂದ್ರ ಶ್ರೀಗಳ ಮಾರ್ಗದರ್ಶನದಿಂದ ಲಕ್ಷಾಂತರ ಮಂದಿ ಜೀವನದ ಗುರಿ ಮುಟ್ಟಿದ್ದಾರೆ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ವಿ.ಸೋಮಶೇಖರ್ ಅಭಿಮತ

ಮೈಸೂರು, ಸೆ.21(ಜಿಎ)– ಸುತ್ತೂರು ಶ್ರೀಗಳು ಸ್ಥಾಪಿಸಿದ ಧಾರ್ಮಿಕ ಹಾಗೂ ಶಿಕ್ಷಣ ಸಂಸ್ಥೆಗಳು ಇಂದು ಜಗತ್ತಿನಾದ್ಯಂತ ಪಸರಿಸಿವೆ. ಶ್ರೀಗಳ ಆಧ್ಯಾತ್ಮಿಕ ಮಾರ್ಗ ದರ್ಶನದಿಂದ ಲಕ್ಷಾಂತರ ಜನರು ತಮ್ಮ ಜೀವನದಲ್ಲಿ ಗುರಿ ಮುಟ್ಟಿದ್ದಾರೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ವಿ.ಸೋಮಶೇಖರ ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಸಮುಚ್ಚಯ ಸಂಸ್ಥೆಯ ಆವರಣದಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಧೇಯತೆ, ವಿಶ್ವಪ್ರೇಮ, ದಯೆ ಮತ್ತು ನಿರ್ಲೋಭ ಸೇವೆಯು ಮಾನವೀಯ ಅವರಲ್ಲಿ ಅಡಗಿತ್ತು. ಅವರ ಪರಿಶುದ್ಧ ಜೀವನದಲ್ಲಿ ಶಿಸ್ತು ಮತ್ತು ಆತ್ಮಸಾಧನೆ ಪ್ರಮುಖವಾಗಿದ್ದು, ತಮ್ಮ ಜೀವನ ಸಂದೇಶವು ಎಲ್ಲಾ ವರ್ಗದವರಿಗೂ ತಲುಪುವಂತೆ ಮಾಡಿದರು. ಸಹಾನುಭೂತಿ, ಶಾಂತಿ, ಸಾಮರಸ್ಯ ಮತ್ತು ಒಕ್ಕೂಟದ ಮೌಲ್ಯಗಳನ್ನು ಜಗತ್ತಿಗೆ ಸಾರುವುದರ ಜೊತೆಗೆ ಅವುಗಳನ್ನು ಉತ್ತೇಜಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ. ಜೀವನವೇ ಒಂದು ಶಿಸ್ತು, ಸರಳತೆ ಹಾಗೂ ದೇವರ ಭಕ್ತಿಯ ಆದರ್ಶವಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಶ್ರೀಗಳು ಸ್ಥಾಪಿಸಿದ ಧಾರ್ಮಿಕ ಹಾಗೂ ಶಿಕ್ಷಣ ಸಂಸ್ಥೆಗಳು ಇಂದು ಜಗತ್ತಿನಾದ್ಯಂತ ಪಸರಿಸಿವೆ. ಇಂದಿನ ಹಾಗೂ ಮುಂದಿನ ತಲೆಮಾರುಗಳಿಗೂ ಶ್ರೀಗಳವರು ಮಾರ್ಗದರ್ಶಕರಾಗಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 1978–83ರಲ್ಲಿ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದಲ್ಲಿ ಅಧ್ಯಯನ ಮಾಡಿ, ಪ್ರಸ್ತುತ ಬೆಂಗಳೂರಿನ ಲಿಂಕ್ವಾಟ್ಸ್ ಎಂಜಿನಿಯರಿಂಗ್ ಸೊಲ್ಯುಷನ್ಸ್‌ನಲ್ಲಿ ಮಾರ್ಗದರ್ಶಕರಾಗಿ ವೃತ್ತಿ ನಿರ್ವಹಿಸುತ್ತಿರುವ ಹಳೆಯ ವಿದ್ಯಾರ್ಥಿನಿ ನಾಗಮಣಿ, 2007–11ರಲ್ಲಿ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದಲ್ಲಿ ಅಧ್ಯಯನ ಮಾಡಿದ ವಿನಯ, ಐಆರ್‌ಎಸ್ ಅಧಿಕಾರಿಯಾಗಿ, ಪ್ರಸ್ತುತ ಭಾರತ ಸರ್ಕಾರದ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ 2014ರ ಬ್ಯಾಚ್‌ನ ಮಧುಸೂಧನ್ ಅವರನ್ನು ಅಭಿನಂದಿಸಲಾಯಿತು.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ, ಜೆಎಸ್‌ಎಸ್ ವಿಶೇಷಚೇತನ ಪಾಲಿಟೆಕ್ನಿಕ್ ಮತ್ತು ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಲ್ಲಿ ಒಟ್ಟು 46 ವಿದ್ಯಾರ್ಥಿಗಳಿಗೆ ಶ್ರೇಷ್ಠತೆಯ ನಾಮನಿರ್ದೇಶನದ ಶಿಷ್ಯವೇತನಕ್ಕಾಗಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಎಸ್‌ಟಿಯು ಕುಲಪತಿ ಎ.ಎನ್. ಸಂತೋಷ್ ಕುಮಾರ್, ಕುಲಸಚಿವ ಡಾ. ಎಸ್.ಎ. ಧನರಾಜ್, ಎಸ್‌ಜೆಸಿಇ ಪ್ರಾಂಶುಪಾಲ ಸಿ.ನಟರಾಜು, ಜೆಎಸ್‌ಎಸ್ ವಿಶೇಷ ಚೇತನ ಪಾಲಿಟೆಕ್ನ್ ಪ್ರಾಂಶುಪಾಲ ಇಳಂಗೋವನ್, ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಡಾ.ಕೆಎಸ್.ಭಕ್ತವತ್ಸಲ, ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಎಸ್.ಲೋಕೇಶ್, ಎಸ್‌ಜೆಸಿಇ ಸ್ಟೆಪ್‌ನ ಸಿಇಓ ಶಿವಕುಮಾರ್, ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಸುಮಾ, ಜೆಎಸ್‌ಎಸ್ ಪಿಯು ಕಾಲೇಜಿನ ಪ್ರಾಂಶುಪಾಲ ಶಾಂತಮಲ್ಲಪ್ಪ ಉಪಸ್ಥಿತರಿದ್ದರು.



ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಸಮುಚ್ಚಯ ಸಂಸ್ಥೆಯ ಆವರಣದಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿಯನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ವಿ.ಸೋಮಶೇಖರ್ ಉದ್ಘಾಟಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗೋಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯುದ್ಧ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಯುದ್ಧ (ಹಿಂ)	4 ಪ್ರದರ್ಶನಗಳು
ಸಂಗಂ	
ಹಗ್ಗ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗೋಟ್ (ತ)	4 ಪ್ರದರ್ಶನಗಳು
ಪ್ರಭಾ	
ಖೈದಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟ್ರಾನ್ಸ್‌ಫಾರ್ಮರ್ಸ್ ಒನ್ (3ಡಿ) (ಇಂ): ಬೆ.11.20ಕ್ಕೆ, ರಾ.7.40ಕ್ಕೆ, ರಾ.9.55ಕ್ಕೆ, ಹಗ್ಗ (ಕ): ಮ.1.35ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.4.15ಕ್ಕೆ.
ಸ್ಕ್ರೀನ್ 2	ಲಂಗೋಟಿ ಮ್ಯಾನ್ (ಕ): ಬೆ.10.30ಕ್ಕೆ, ಲಬ್ಬರ್ ಪಾಂಡು (ತ): ಮ.1.40ಕ್ಕೆ, ನಂದನ್ (ತ): ಸಂ.4.35ಕ್ಕೆ, ಕಹಾನ್ ಶುರು ಕಹಾನ್ ಕಥಂ (ಹಿಂ): ರಾ.7.15ಕ್ಕೆ, ತುಂಬ್ಬಾಡ್ (ಹಿಂ): ರಾ.9.55ಕ್ಕೆ.
ಸ್ಕ್ರೀನ್ 3	ಉಪೇಂದ್ರ (ಕ): ಬೆ.10.50ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಮ.1.35ಕ್ಕೆ, ಅನ್ನ (ಕ): ಸಂ.4.35ಕ್ಕೆ, ಯುದ್ರ (ಹಿಂ): ರಾ.7.15ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ, ರಾ.7.10ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.4.05ಕ್ಕೆ, ಯುದ್ರ (ಹಿಂ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ಧ್ರುವತಾರೆ (ಕ): ಮ.1.05ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಸಂ.4.10ಕ್ಕೆ, ಹಗ್ಗ (ಕ): ರಾ.7.05ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ರಾ.9.35ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.1.10ಕ್ಕೆ, ಲಂಗೋಟಿ ಮ್ಯಾನ್ (ಕ): ಸಂ.4.10ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7.15ಕ್ಕೆ.
ಸ್ಕ್ರೀನ್ 3	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕೋಳಿಪಣ್ಣೈ ಚೆಲ್ಲದುರೈ (ತ): ರಾ.9.40ಕ್ಕೆ.
ಸ್ಕ್ರೀನ್ 4	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ರಾ.9.30ಕ್ಕೆ, ನಂದನ್ (ತ): ಸಂ.4.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.6.30ಕ್ಕೆ

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗುಣಮಟ್ಟದಲ್ಲಿ ರಾಜಿ ಪ್ರಶ್ನೆಯೇ ಇಲ್ಲ, ದೇಶದ ಯಾವ ಲ್ಯಾಬ್‌ನಲ್ಲಾದರೂ ನಂದಿನಿ ಪ್ರೊಡಕ್ಟ್ ಪರೀಕ್ಷೆ ಮಾಡಲಿ: ಕೆಎಂಎಫ್ ಎಂಡಿ ಜಗದೀಶ್



ಬೆಂಗಳೂರು, ಸೆ.21– ನಾವು ಗುಣಮಟ್ಟದಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ. ದೇಶದ ಯಾವ ಲ್ಯಾಬ್‌ನಲ್ಲಾದರೂ ಪರೀಕ್ಷೆ ಮಾಡಲಿ ಎಂದು ಕೆಎಂಎಫ್ ಎಂಡಿ ಜಗದೀಶ್ ಹೇಳಿದ್ದಾರೆ.

ತಿರುಮಲ ತಿರುಪತಿ ದೇವಾಲಯ ಲಡ್ಡು ವಿವಾದದ ಕುರಿತು ಸುದ್ದಿವಾಹಿನಿ ಜೊತೆ ಮಾತನಾಡಿದ ಅವರು, ರೈತರಿಂದ ನೇರವಾಗಿ ಹಾಲು ಖರೀದಿಸಿ, ರೈತರ ಪರವಾಗಿ ಕೆಲಸ ಮಾಡುವ ಸಂಸ್ಥೆ ನಮ್ಮದು. ಇಡೀ ದೇಶದಲ್ಲೇ ಅತ್ಯುತ್ತಮ ಲ್ಯಾಬ್ ವ್ಯವಸ್ಥೆ ಇರೋದು ನಮ್ಮಲ್ಲಿಯೇ. ಎನ್‌ಎಬಿಎಲ್‌ನಿಂದ ಮಾನ್ಯತೆ ಪಡೆದಿರುವ ಏಕೈಕ ಲ್ಯಾಬ್ ನಮ್ಮ ಕೆಎಂಎಫ್ ಸಂಸ್ಥೆಯಲ್ಲಿದೆ.

ನಾವು ಗುಣಮಟ್ಟದಲ್ಲಿ ರಾಜಿಯಾಗದೇ ಇರೋದಕ್ಕೆ ಕಾರಣವೇ ನಮ್ಮಲ್ಲಿರೋ ಸೌಲಭ್ಯ ಮತ್ತು ಸೌಕರ್ಯಗಳು. ಪ್ರತಿ ಹಂತದಲ್ಲೂ ಗುಣಮಟ್ಟದ ಪರೀಕ್ಷೆ ಮಾಡಿಯೇ ತುಪ್ಪದ ಉತ್ಪಾದನೆ ನಡೆಯಲಿದೆ. ಆಹಾರ ಗುಣಮಟ್ಟದ ಪರೀಕ್ಷೆಯನ್ನು ಮೈಸೂರು ಲ್ಯಾಬ್‌ನಲ್ಲಿ ಅಲ್ಲದೇ ಯಾವುದೇ ಲ್ಯಾಬ್‌ನಲ್ಲಿ ಬೇಕಾದರೂ ಮಾಡಿಸಲಿ. ನಮ್ಮದು ಅತ್ಯುತ್ತಮ ಗುಣಮಟ್ಟದ ಪ್ರೊಡಕ್ಟ್ ಎಂದು ಹೇಳಿದರು.

ನಂದಿನಿ ತುಪ್ಪದ ದರದ ಬದಲಾವಣೆ ಮಾಡುವ ಯೋಚನೆ ಇಲ್ಲ. ತಿರುಮಲದಿಂದ ಮತ್ತೆ ನಮಗೆ ಟೆಂಡರ್ ನೀಡಿದ್ದಾರೆ. ಅವರು ಎಷ್ಟೇ ಬೇಡಿಕೆ ಇಟ್ಟರೂ ಅಷ್ಟು ಪ್ರಮಾಣದ ತುಪ್ಪವನ್ನು ಸರಬರಾಜು ಮಾಡುತ್ತೇವೆ. ಬೇಡಿಕೆ ಹೆಚ್ಚಾದರೂ ಗುಣಮಟ್ಟದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ತಿರುಮಲಕ್ಕೆ ಟ್ಯಾಂಕರ್ ಮೂಲಕ ತುಪ್ಪವನ್ನು ಕಳುಹಿಸಿಕೊಡಲಾಗುತ್ತದೆ. ಟ್ಯಾಂಕರ್‌ಗಟ್ಟಲೆ ತುಪ್ಪ ಕಳುಹಿಸುವುದರಿಂದ ಆ ತುಪ್ಪದ ಬೆಲೆ ಬೇರೆಯಾಗಿಯೇ ಇರುತ್ತದೆ ಎಂದು ತಿಳಿಸಿದರು.

ಶಿರೂರು ಗುಡ್ಡ ಕುಸಿತ: ನಾಪತ್ತೆಯಾಗಿದ್ದ ಟ್ರಕ್ ಪತ್ತೆ

ಕಾರವಾರ, ಸೆ.21– ಶಿರೂರು ಭೂ ಕುಸಿತದ ಬಳಿಕ ಗಂಗಾವಳಿ ನದಿಯಾಳದಲ್ಲಿ ಬಿದ್ದ ಟ್ರಕ್ ಕೊನೆಗೂ ಪತ್ತೆಯಾಗಿದೆ. ಜುಲೈ 16ರಂದು ಭೂ ಕುಸಿತ ಸಂಭವಿಸಿದ ಬಳಿಕ ಕೇರಳದ ಅರ್ಜುನ್ ಚಲಾಯಿಸುತ್ತಿದ್ದ ಟ್ರಕ್ ಗಂಗಾವಳಿ ನದಿಗೆ ಬಿದ್ದಿತ್ತು. ನದಿಯಲ್ಲಿ ನೀರಿನ ಪ್ರಮಾಣ ಜಾಸ್ತಿ ಇದ್ದ ಕಾರಣ ಟ್ರಕ್ ಪತ್ತೆ ಮಾಡಲು ಕಷ್ಟವಾಗಿತ್ತು. ಮುಳುಗು ತಜ್ಞ ಈಶ್ವರ ಮಲ್ಪೆ ಅವರು ಟ್ರಕ್ ಪತ್ತೆಗೆ ನಿರಂತರ ಪ್ರಯತ್ನ ನಡೆಸುತ್ತಿದ್ದರು. ಈಗ ಟ್ರಕ್ ಗುಡ್ಡ ಕುಸಿತಗೊಂಡ ಜಾಗದ ಬಳಿಯೇ ಸಿಕ್ಕಿ ಬಿದ್ದಿದೆ. ಟ್ರಕ್ ಮೇಲೆ ಸಾಕಷ್ಟು ಕಲ್ಲು ಮತ್ತು ಮಣ್ಣುಗಳಿವೆ. ಹೀಗಾಗಿ ಮಣ್ಣು ಮತ್ತು ಕಲ್ಲುಗಳನ್ನು ತೆಗೆದು ಟ್ರಕ್ ಮೇಲಕ್ಕೆ ಎತ್ತಲು ಸಿದ್ಧತೆ ನಡೆಯುತ್ತಿದೆ. ಜುಲೈ 16 ರಂದು ಭೂಕುಸಿತ ಸಂಭವಿಸಿದಾಗ ಅರ್ಜುನ್ ಮರ ತುಂಬಿಸಿಕೊಂಡು ಟ್ರಕ್‌ನಲ್ಲಿ ಕೋಝಿಕ್ಕೋಡ್ ಕಡೆಗೆ ಹೋಗುತ್ತಿದ್ದರು.

ಹುಟ್ಟುಹಬ್ಬದ ಶುಭಾಶಯಗಳು




ಶ್ರೀ ಕೆ.ಆರ್.ಸತ್ಯನಾರಾಯಣ

ಅಧ್ಯಕ್ಷರು, ಹೊಯ್ಸಳ ಕರ್ನಾಟಕ ಸಂಘ, ಮೈಸೂರು
ಪಾಲುದಾರರು ಸಪ್ತಪದಿ ಅಸೋಸಿಯೇಟ್ಸ್, ಚನ್ನಕೇಶವ ಛಾರಿಟಬಲ್ ಟ್ರಸ್ಟ್
ಹಿರಿಯ ಪತ್ರ ಬರಹಗಾರರು ಮತ್ತು
ನಿಕಟಪೂರ್ವ ಅಧ್ಯಕ್ಷರು ಕಲ್ಯಾಣ ಮಂಟಪಗಳ ಸಂಘ (ರಿ) ಮೈಸೂರು
ಇವರಿಗೆ

ಜನ್ಮದಿನದ ಶುಭಾಶಯಗಳು

ಶುಭಕೋರುವವರು / ಪ್ರಕಟಣೆ
ಕೆ.ಆರ್. ಸತ್ಯನಾರಾಯಣ ಅಭಿಮಾನಿಗಳ ಬಳಗ, ಮೈಸೂರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಯ॥ ಚಿಕ್ಕನಿಂಗಯ್ಯ (ಪಾಪಣ್ಣ) ರವರು

ದಿನಾಂಕ: 13–09–2024ರ ಶುಕ್ರವಾರ ನನ್ನ ಪೂಜ್ಯ ಪತಿಯವರಾದ
ಶ್ರೀ ಯ॥ ಚಿಕ್ಕನಿಂಗಯ್ಯ (ಪಾಪಣ್ಣ) ರವರು
ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ತತ್ಸಂಬಂಧವಾಗಿ
ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು
ದಿನಾಂಕ: 23–09–2024ರ ಸೋಮವಾರ ಬೆಳಿಗ್ಗೆ 11.00 ಗಂಟೆಗೆ
ಶ್ರೀಮರುಳೇಶ್ವರ ದೇವಸ್ಥಾನ ಸಮುದಾಯ ಭವನ,
ಕಾವೇರಿ ಶಾಲೆ ಎದುರು, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ

ಭೋಜನ: ಮಧ್ಯಾಹ್ನ 12.00 ಗಂಟೆಗೆ

ದುಃಖಪತ್ತರು: ಮೃತರ ಪತ್ನಿ ಶ್ರೀಮತಿ ಬೋರಮ್ಮ,
ಸಿ.ಮಹದೇವು ವಾಟರ್ ಸಪ್ಲೈ ಮತ್ತು ಚಂದ್ರಕಲಾ ಆರ್. ಹೆಣ್ಣು ಮಕ್ಕಳು, ಅಳಿಯಂದಿರು,
ಮೊಮ್ಮಕ್ಕಳು ಹಾಗೂ ಲೇ॥ ಕರಿಮಂಚಿ ನಿಂಗಯ್ಯ ಕುಟುಂಬದವರು ಮತ್ತು ಲೇ॥ ದೇವೇಗೌಡರ ಕುಟುಂಬ,
(ಬಿಸಿಲು ಮಾರಮ್ಮ ಗುಡ್ಡಪ್ಪ,) ಕೆ.ಜಿ.ಕೊಪ್ಪಲು ಹಾಗೂ ಜಯನಗರ ಗ್ರಾಮಸ್ಥರು

ಒಂದನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕರಿಯಪ್ಪ (ಕಂಟ್ರಾಕ್ಟರ್)

ನಮ್ಮ ಪ್ರಾರ್ಥನೆಯಲ್ಲಿ ನೀವು ಇರುವಿರಿ ಸದಾ ನಿಮ್ಮ ಆತ್ಮಕ್ಕೆ
ಚಿರಶಾಂತಿ ನೀಡಲಿ ಎಂದು ಬೇಡುವ : ತಾಯಿ ಚಿಕ್ಕಮ್ಮ, ಪತ್ನಿ ಜಯಮ್ಮ
ಹಾಗೂ ಮಕ್ಕಳು, ಸೊಸೆಯಂದಿರು, ಅಣ್ಣ ತಮ್ಮಂದಿರು ಮತ್ತು ಹಿನಕಲ್ ಬಂಧು ಮಿತ್ರರು